ಗುರುವಾರ, ಮೇ 15, 2025 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೀರಜ್ ಚೋಪ್ರಾಗೆ ಗೌರವ

ಒಲಿಂಪಿಕ್ಸ್ ಪದಕ ವಿಜೇತ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರಿಗೆ ಪ್ರಾದೇಶಿಕ ಸೇನೆಯ ಲೆಫ್ಟಿನೆಂಟ್ ಕರ್ನಲ್ ಗೌರವ ಹುದ್ದೆಯನ್ನು ನೀಡಿದೆ ಎಂದು ಕೇಂದ್ರ ರಕ್ಷಣಾ ಸಚಿವಾಲಯ ತಿಳಿಸಿದೆ

ರಾಷ್ಟ್ರಪತಿ ಅಂಕಿತಕ್ಕೆ ಮಸೂದೆ– ತಮಿಳುನಾಡು ಪ್ರಕರಣ ಉಲ್ಲೇಖಿಸಿ ಪುನರ್ ಪರಿಶೀಲಿಸುವಂತೆ ಕೋರಲು ಚಿಂತನೆ

ಸರ್ಕಾರ– ರಾಜ್ಯಪಾಲರ ಶೀತಲ ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಪತಿಯ ಅಂಕಿತಕ್ಕೆ ಕಾದಿರಿಸಿ ಹಿಂದಿರುಗಿಸಿದ್ದ ಮುಸ್ಲಿಂ ಸಮುದಾಯಕ್ಕೆ ಗುತ್ತಿಗೆಯಲ್ಲಿ ಶೇ 4 ಮೀಸಲು ಕಲ್ಪಿಸಲು ಅವಕಾಶ ಕಲ್ಪಿಸುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕತೆ (ಕೆಟಿಟಿಪಿ) ತಿದ್ದುಪಡಿ ಮಸೂದೆ, ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಮಸೂದೆ, ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಮಸೂದೆಗಳನ್ನು ಪುನರ್ ಪರಿಶೀಲಿಸುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಮತ್ತೊಮ್ಮೆ ಕೋರಲು ರಾಜ್ಯ ಸರ್ಕಾರ ಮುಂದಾಗಿದೆ.

ಕೇಂದ್ರಕ್ಕೆ ವ್ಯತಿರಿಕ್ತವಾಗಿರದ ಮತ್ತು ರಾಜ್ಯಕ್ಕೆ ಸಂಬಂಧಿಸಿದ ಕಾಯ್ದೆಗಳ ತಿದ್ದುಪಡಿಗೆರೂಪಿಸಿದಮಸೂದೆಗಳನ್ನುರಾಷ್ಟ್ರಪತಿಯ ಅನುಮೋದನೆಗೆ ಕಳುಹಿಸುವ ಅಗತ್ಯ ಇಲ್ಲವೆಂದು ತಮಿಳುನಾಡು ಸರ್ಕಾರ, ಅಲ್ಲಿನ ರಾಜ್ಯಪಾಲರ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಇತ್ತೀಚೆಗೆ ತೀರ್ಪು ನೀಡಿದೆ. ಈ ಪ್ರಕರಣವನ್ನು ಉಲ್ಲೇಖಿಸಿ, ಮೂರೂ ಮಸೂದೆಗಳಿಗೆ ಅಂಕಿತ ಹಾಕುವಂತೆ ರಾಜ್ಯಪಾಲರಿಗೆ ಕಡತವನ್ನು ಮರು ಮಂಡಿಸಲು ಕಾನೂನು ಇಲಾಖೆ ಚಿಂತನೆ ನಡೆಸಿದೆ.

ಧರ್ಮಾದಾಯ ದತ್ತಿ ಮಸೂದೆ: ಮತ್ತೆ ಕಳುಹಿಸಲು ಸಲಹೆ

ಮುಜರಾಯಿ ಇಲಾಖೆಯ ವ್ಯಾಪ್ತಿಯ ಶ್ರೀಮಂತ ದೇವಸ್ಥಾನಗಳಲ್ಲಿ ಸಂಗ್ರಹವಾಗುವ 'ಸಾಮಾನ್ಯ ಸಂಗ್ರಹಣಾ ನಿಧಿ'ಯನ್ನು ಆದಾಯ ಇಲ್ಲದಿರುವ 'ಸಿ' ವರ್ಗದ ದೇವಸ್ಥಾನಗಳಿಗೆ ಬಳಸುವುದನ್ನು ಕಡ್ಡಾಯಗೊಳಿಸುವ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಮಸೂದೆ–2024'ನ್ನು ಸರ್ಕಾರವು ರಾಜ್ಯಪಾಲರ ಅಂಕಿತಕ್ಕೆ 2024ರ ಮಾರ್ಚ್ 6ರಂದು ಕಳುಹಿಸಿತ್ತು. ಆದರೆ, ಅವರು ಸ್ಪಷ್ಟೀಕರಣ ಕೇಳಿ ಅದೇ ಮಾರ್ಚ್ 14ರಂದು ವಾಪಸ್ ಮಾಡಿದ್ದರು.

ವಿವರಣೆ ನೀಡಿ ಡಿ. 5ರಂದು ಮತ್ತೆ ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ಆದರೆ, ಅವರು ಅಂಕಿತ ಹಾಕದೆ ಡಿ. 21ರಂದು ಎರಡನೇ ಬಾರಿ ವಾಪಸ್ ಮಾಡಿದ್ದರು. ಹೀಗಾಗಿ, ಸಂಸದೀಯ ಇಲಾಖೆಯು ಕಡತವನ್ನು ಕಂದಾಯ ಇಲಾಖೆಗೆ ಕಳುಹಿಸಿತ್ತು. ಈ ಮಧ್ಯೆ, ರಾಜ್ಯಪಾಲರನ್ನು ಭೇಟಿ ಮಾಡಿದ್ದ ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ, 'ಅರ್ಚಕರ ಅನುಕೂಲಕ್ಕಾಗಿ ಕಾನೂನು ತಿದ್ದುಪಡಿ ಮಾಡಿರುವ ಕಡತಕ್ಕೆ ಸಹಿ ಹಾಕಬೇಕು' ಎಂದು ಆಗ್ರಹಿಸಿತ್ತು. ಹೀಗಾಗಿ, ಈ ಮಸೂದೆಯನ್ನು ಮತ್ತೆ ಕಳುಹಿಸುವಂತೆ ಸರ್ಕಾರಕ್ಕೆ ರಾಜ್ಯಪಾಲರು ಸೂಚನೆ ನೀಡಿದ್ದಾರೆ ಎಂದೂ ಜಿ. ಶ್ರೀಧರ್ ಅವರು ತಿಳಿಸಿದರು. ಈ ತಿದ್ದುಪಡಿಗೆ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು.

'ರಾಜ್ಯ ಸರ್ಕಾರ ಸ್ಪಷ್ಟೀಕರಣ ನೀಡಿದ ಬಳಿಕ 'ಮೈಸೂರು ಅಭಿವೃದ್ಧಿ ಪ್ರಾಧಿಕಾರ' ರಚನೆಗಾಗಿ ರಾಜ್ಯ ಸರ್ಕಾರ ರೂಪಿಸಿದ 'ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮಸೂದೆ' ಮತ್ತು ಗದಗ ಬೆಟಗೇರಿ ವಾಣಿಜ್ಯ, ಸಂಸ್ಕೃತಿ ಮತ್ತು ಪ್ರದರ್ಶನಗಳ ಪ್ರಾಧಿಕಾರ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಆದರೆ, ಸಹಕಾರಿ ಸಂಘಗಳ (ತಿದ್ದುಪಡಿ) ಮಸೂದೆ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಮಸೂದೆಯನ್ನು ರಾಷ್ಟ್ರಪತಿಯ ಅಂಕಿತಕ್ಕೆ ಕಾದಿರಿಸಿ ಕಡತವನ್ನು ಮಂಗಳವಾರ (ಮೇ 13) ವಾಪಸ್ ಮಾಡಿದ್ದಾರೆ' ಎಂದು ಕಾನೂನು ಮತ್ತು ಸಂಸದೀಯ ಇಲಾಖೆಯ ಕಾರ್ಯದರ್ಶಿ ಜಿ. ಶ್ರೀಧರ್ ತಿಳಿಸಿದರು.

'ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಗದಗ ಬೆಟಗೇರಿ ಮಸೂದೆಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ದೀಪಾ ಚೋಳನ್ ಜೊತೆ ರಾಜ್ಯಪಾಲರನ್ನು ಭೇಟಿ ಮಾಡಿ ಅವರು ಕೇಳಿದ್ದ ಎಲ್ಲ ಮಾಹಿತಿಗಳನ್ನು ನೀಡಲಾಗಿತ್ತು. ಕಾನೂನು ಸಚಿವ ಎಚ್.ಕೆ. ಪಾಟೀಲ ಅವರೂ ರಾಜ್ಯಪಾಲರನ್ನು ಮಂಗಳವಾರ ಭೇಟಿ ಮಾಡಿ ವಿವರಣೆ ನೀಡಿದರು. ಆ ಬಳಿಕ ಆ ಎರಡೂ ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕಿದರು.

ಆದರೆ, ಸಹಕಾರಿ ಸಂಘಗಳ (ತಿದ್ದುಪಡಿ) ಮತ್ತು ಸೌಹಾರ್ದ ಸಹಕಾರಿ (ತಿದ್ದುಪಡಿ) ಈ ಎರಡೂ ಮಸೂದೆಗಳನ್ನು ಕಾನೂನು ತೊಡಕುಗಳ ಕಾರಣ ನೀಡಿ ಮತ್ತು ರಾಷ್ಟ್ರಪತಿಯ ಅಂಕಿತಕ್ಕೆ ಮೀಸಲಿಟ್ಟು ಹಿಂದಿರುಗಿಸಿದ್ದಾರೆ' ಎಂದು ಅವರು ವಿವರಿಸಿದರು.

ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇಕಡ 4ರಷ್ಟು ಮೀಸಲಾತಿ ಕಲ್ಪಿಸುವ ರಾಜ್ಯ ಸರ್ಕಾರದ ತೀರ್ಮಾನಕ್ಕೆ ತಕರಾರು ಎತ್ತಿರುವ ರಾಜ್ಯಪಾಲ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ತಿದ್ದುಪಡಿ ಮಸೂದೆಯನ್ನು ಏಪ್ರಿಲ್ 15ರಂದೇ ವಾಪಸ್ ಕಳುಹಿಸಿದ್ದಾರೆ. ಈ ಮಸೂದೆ ಕೂಡಾ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದರಿಂದ ರಾಷ್ಟ್ರಪತಿಯ ಅನುಮೋದನೆಗೆ ಕಳುಹಿಸುವ ಅಗತ್ಯ ಇಲ್ಲ ಎಂದು ಪ್ರತಿಪಾದಿಸಲು ಸರ್ಕಾರ ತೀರ್ಮಾನಿಸಿದೆ.

ಸಿ.ಎಂ ಮೂಲಕ ಕಳುಹಿಸಿ: 'ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿ ನೇಮಕ ಸಂಬಂಧ ರಾಜ್ಯಪಾಲರಿಗೆ ಇರುವ ಅಧಿಕಾರವನ್ನು ರದ್ದುಪಡಿಸಿ, ಮುಖ್ಯಮಂತ್ರಿಗೆ ನೀಡುವ ಉದ್ದೇಶ ಹೊಂದಿರುವ 'ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆಯೂ ಸ್ಪಷ್ಟೀಕರಣ ನೀಡಿ ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ಆದರೆ, ಅವರು ಮಸೂದೆಯನ್ನು ಮುಖ್ಯಮಂತ್ರಿಯ ಮೂಲಕ ಕಳುಹಿಸಬೇಕೆಂಬ ತಾಂತ್ರಿಕ ಕಾರಣ ನೀಡಿ ವಾಪಸ್ ಮಾಡಿದ್ದಾರೆ. ರಾಜ್ಯಪಾಲರ ಸಲಹೆಯಂತೆ ಮತ್ತೊಮ್ಮೆ ಕಳುಹಿಸಲಾಗುವುದು' ಎಂದು ಶ್ರೀಧರ್ ತಿಳಿಸಿದರು.

ಕೆಪಿಎಸ್‌ಸಿ ಮಸೂದೆ: ಮತ್ತೆ ರಾಜಭವನಕ್ಕೆ

ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಕಾಯ್ದೆ–1959 (1959ರ ಕರ್ನಾಟಕ ಕಾಯ್ದೆ 20)ಕ್ಕೂ ತಿದ್ದುಪಡಿ ತರಲು ಉದ್ದೇಶಿಸಿದ್ದ ಮಸೂದೆ ಸ್ಪಷ್ಟೀಕರಣವನ್ನು ನೀಡಿ ರಾಜ್ಯಪಾಲರಿಗೆ ಮತ್ತೆ ಕಳುಹಿಸಲಾಗಿದೆ.

'ಈ ಮಸೂದೆಯನ್ನು ರಾಜ್ಯಪಾಲರು ತಮ್ಮ ಬಳಿಯಲ್ಲೇ ಇಟ್ಟುಕೊಂಡಿದ್ದಾರೆ. ಪ್ರಸ್ತಾಪಿತ ತಿದ್ದುಪಡಿಯಲ್ಲಿ ಇರುವಂತೆ ಕಾಯ್ದೆಯ ಸೆಕ್ಷನ್ 18ನ್ನು ಕೈಬಿಟ್ಟರೆ ಕೆಪಿಎಸ್‌ಸಿ ಜೊತೆ ಸಮಾಲೋಚನೆ ನಡೆಸದೆ ನಿಯಮಗಳನ್ನು ರೂಪಿಸಲು ಸರ್ಕಾರಕ್ಕೆ ಅಧಿಕಾರ ಸಿಗಲಿದೆ. ಪ್ರಸ್ತಾವಿತ ತಿದ್ದುಪಡಿಯು ಸಂವಿಧಾನ 320ನೇ ವಿಧಿಗೆ ವ್ಯತಿರಿಕ್ತವಾಗಿದ್ದು, ಆಯೋಗದ ಸ್ವಾಯತ್ತತೆಯನ್ನು ಮೊಟಕುಗೊಳಿಸಲಿದೆ. ಈ ಬಗ್ಗೆ ಸ್ಪಷ್ಟೀಕರಣ ಮತ್ತು ಕಾನೂನು ಅಭಿಪ್ರಾಯದ ಜೊತೆಗೆ ಕಡತವನ್ನು ಮತ್ತೆ ಸಲ್ಲಿಸುವಂತೆ ರಾಜ್ಯಪಾಲರು ಸೂಚಿಸಿದ್ದರು. ಮೇ 6ರಂದೇ ರಾಜ್ಯಪಾಲರಿಗೆ ಮತ್ತೆ ಕಳುಹಿಸಲಾಗಿದೆ' ಎಂದು ಕಾನೂನು ಮತ್ತು ಸಂಸದೀಯ ಇಲಾಖೆಯ ಕಾರ್ಯದರ್ಶಿ ಜಿ. ಶ್ರೀಧರ್ ತಿಳಿಸಿದರು.

ಸುದ್ದಿ 2 ನಿಮಿಷ

ಮದ್ಯದ ದರ ಇಂದಿನಿಂದ ಹೆಚ್ಚಳ

ಬೆಂಗಳೂರು: ಭಾರತೀಯ ಮದ್ಯಗಳ (ಐಎಂಎಲ್) ಮತ್ತು ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು (ಎಇಡಿ) ಹೆಚ್ಚಿಸಿ ರಾಜ್ಯ ಸರ್ಕಾರ ಮಂಗಳವಾರ ಅಂತಿಮ ಅಧಿಸೂಚನೆ ಹೊರಡಿಸಿದೆ. ಪರಿಷ್ಕೃತ ದರವು ಗುರುವಾರದಿಂದ (ಮೇ 15) ಜಾರಿಗೆ ಬರಲಿದೆ.

ಮದ್ಯದ ಮೇಲಿನ ಸುಂಕ ಪರಿಷ್ಕರಣೆ ಮತ್ತೆ ತೆರಿಗೆ ಸ್ಲ್ಯಾಬ್‌ಗಳ ಬದಲಾವಣೆಗಾಗಿ ಹಣಕಾಸು ಇಲಾಖೆಯು, ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕ) (ಎರಡನೇ ತಿದ್ದುಪಡಿ) ನಿಯಮಗಳು–2025ರ ಗಜೆಟ್ ಅಧಿಸೂಚನೆ ಹೊರಡಿಸಿದೆ. ಐಎಂಎಲ್‌ನ ತೆರಿಗೆ ಸ್ಲ್ಯಾಬ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಬದಲಾವಣೆ ಮಾಡಲಾಗಿದೆ.

'ಎಇಡಿ ಹೆಚ್ಚಳದಿಂದ ಅಗ್ಗದ ದರದಲ್ಲಿ ಸಿಗುತ್ತಿದ್ದ ಬ್ರ್ಯಾಂಡಿ, ವಿಸ್ಕಿ, ಜಿನ್, ರಮ್‌ನ ಬೆಲೆ ರಾಜ್ಯದಲ್ಲಿ ಇನ್ನು ಮುಂದೆ ಮತ್ತಷ್ಟು ದುಬಾರಿಯಾಗಲಿದೆ. 180 ಎಂಎಲ್‌ನ ಬಾಟಲಿ ಮತ್ತು ಸ್ಯಾಷೆಗಳ ಬೆಲೆಯಲ್ಲಿ ಗರಿಷ್ಠ ₹ 15 ಏರಿಕೆ ಆಗಲಿದೆ' ಎಂದು ಅಬಕಾರಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಈಗ ಜಾರಿಯಲ್ಲಿರುವ ನಿಯಮಗಳ ಪ್ರಕಾರ ಐಎಂಎಲ್‌ಗಳಲ್ಲಿ ಒಟ್ಟು 18 ತೆರಿಗೆ ಸ್ಲ್ಯಾಬ್‌ಗಳಿವೆ. ಈ ಸ್ಲ್ಯಾಬ್‌ಗಳನ್ನು 16ಕ್ಕೆ ಇಳಿಸಲಾಗಿದೆ. ಮೊದಲ ನಾಲ್ಕು ಸ್ಲ್ಯಾಬ್‌ಗಳನ್ನು ಗರಿಷ್ಠ ಬೆಲೆಯನ್ನು ಪರಿಷ್ಕರಿಸಲಾಗಿದೆ.

ಎಇಡಿ ಏರಿಕೆಯೊಂದಿಗೆ ಪ್ರೀಮಿಯಂ ಅಥವಾ ಇತರೆ ಬಿಯರ್ ಬ್ರ್ಯಾಂಡ್‌ಗಳ ಬೆಲೆಯು ಉತ್ಪಾದನಾ ವೆಚ್ಚವನ್ನು ಅವಲಂಬಿಸಿ ಪ್ರತಿ ಬಾಟಲಿಗೆ ಸರಾಸರಿ ₹ 5ರಿಂದ ₹ 15 ಏರಿಕೆ ಆಗಲಿದೆ. ಅಗ್ಗದ ಬಿಯರ್‌ಗಳ ಬೆಲೆ ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗಲಿದ್ದು, ₹ 25 ರವರೆಗೆ ಕಡಿಮೆ ಆಗಲಿದೆ ಎಂದು ಅಬಕಾರಿ ಇಲಾಖೆ ಮೂಲಗಳು ತಿಳಿಸಿವೆ.

ದರ್ಶನ್ ಪ್ರಕರಣ: 21ರಂದು ಅಂತಿಮ ವಿಚಾರಣೆ

ನವದೆಹಲಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಮತ್ತು ಇತರೆ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿರುವ ಆದೇಶ ಪ್ರಶ್ನಿಸಿ ಬೆಂಗಳೂರು ನಗರ ಪೊಲೀಸರು ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ಅಂತಿಮ ವಿಚಾರಣೆಯನ್ನು ಇದೇ 21ರಂದು ಸುಪ್ರೀಂ ಕೋರ್ಟ್ ನಡೆಸಲಿದೆ.

ಮೇಲ್ಮನವಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ಆರ್.ಮಹದೇವನ್ ಪೀಠವು ಬುಧವಾರ ನಡೆಸಬೇಕಿತ್ತು. ಇದೇ 21ರಂದು ವಿಚಾರಣೆ ನಡೆಸಬೇಕು ಎಂದು ರಾಜ್ಯ ಸರ್ಕಾರದ ಪರ ವಕೀಲರು ಮನವಿ ಮಾಡಿದರು. ಅದಕ್ಕೆ ಪೀಠ ಒಪ್ಪಿತು.

ದರ್ಶನ್, ಪವಿತ್ರಗೌಡ, ಲಕ್ಷ್ಮಣ್, ಪ್ರದೂಶ್, ನಾಗರಾಜು, ಅನುಕುಮಾರ್ ಹಾಗೂ ಜಗದೀಶ್ ಅವರಿಗೆ ಹೈಕೋರ್ಟ್ ನಿಯಮಿತ ಜಾಮೀನು ಮಂಜೂರು ಮಾಡಿತ್ತು. ಉಳಿದ ಹತ್ತು ಆರೋಪಿಗಳಿಗೆ ವಿಚಾರಣಾ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ಈ ನಿಯಮಿತ ಜಾಮೀನು ಆದೇಶಗಳನ್ನು ಪ್ರಶ್ನಿಸಿ ವಕೀಲ ಅನಿಲ್ ನಿಶಾನಿ ಅರ್ಜಿ ಸಲ್ಲಿಸಿದ್ದರು.

ಹರೀಶ್ ಪೂಂಜ ಮಾತಿಗೆ ವಿಷಾದ

ಸೌಹಾರ್ದ ಮುಂದುವರಿಕೆ: ದೇವಸ್ಥಾನ ಆಡಳಿತ ಮಂಡಳಿ ಭರವಸೆ

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ/ಬೆಳ್ತಂಗಡಿ: ದಕ್ಷಿಣ ಕನ್ನಡ ಜಿಲ್ಲೆಯ ತೆಕ್ಕಾರಿನಲ್ಲಿ ಈಚೆಗೆ ನಡೆದ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಬ್ರಹ್ಮಕಲಶೋತ್ಸವ ವೇದಿಕೆಯಲ್ಲಿ ಶಾಸಕ ಹರೀಶ್ ಪೂಂಜ, ಮುಸ್ಲಿಂ ಸಮುದಾಯದ ಬಗ್ಗೆ ಆಡಿರುವ ಮಾತಿನ ಬಗ್ಗೆ ದೇವಸ್ಥಾನದ ಆಡಳಿತ ಮಂಡಳಿಯ ಕೆಲವರು ಮುಸ್ಲಿಂ ಮುಖಂಡರ ಜೊತೆ ಸಭೆ ನಡೆಸಿ, ವಿಷಾದ ವ್ಯಕ್ತಪಡಿಸಿದ್ದಾರೆ.

'ನಿಮ್ಮ ಆಹ್ವಾನದ ಮೇರೆಗೆ ಮುಸ್ಲಿಂ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆದರೆ, ನಿಮ್ಮ ವೇದಿಕೆಯಲ್ಲಿ ಮುಸ್ಲಿಮರ ಬಗ್ಗೆ ಅವಹೇಳನಕಾರಿ ಭಾಷಣ ಮಾಡಿದ್ದು, ಬೇಸರ ತಂದಿದೆ. ಟ್ಯೂಬ್‌ಲೈಟ್ ಹಾಗೂ ಡೀಸೆಲ್ ಕದ್ದ ಆರೋಪದ ಬಗ್ಗೆ ಸ್ಪಷ್ಟ ಸಾಕ್ಷ್ಯ ಇಲ್ಲದೆ, ನಮ್ಮ ಸಮುದಾಯದ ಮೇಲೆ ಆರೋಪ ಮಾಡಿರುವ ಬಗ್ಗೆ ಉತ್ತರ ನೀಡಬೇಕು' ಎಂದು ತೆಕ್ಕಾರಿನ ಮುಸ್ಲಿಂ ಒಕ್ಕೂಟದವರು ದೇವಸ್ಥಾನದ ಆಡಳಿತ ಮಂಡಳಿಗೆ ಪತ್ರ ಬರೆದಿದ್ದರು.

ಇದಕ್ಕೆ ಸ್ಪಷ್ಟೀಕರಣ ನೀಡಲು, ದೇವಸ್ಥಾನದ ಅಧ್ಯಕ್ಷ ನಾಗಭೂಷಣ ರಾವ್ ಅವರ ಮನೆಯಲ್ಲಿ ಹಿಂದೂ ಮತ್ತು ಮುಸ್ಲಿಂ ಮುಖಂಡರ ಸಭೆ ನಡೆದಿದೆ. ಈ ಸಭೆಯಲ್ಲಿ ಉಪಸ್ಥಿತರಿದ್ದ ದೇವಸ್ಥಾನದ ಆಡಳಿತ ಮಂಡಳಿಯ ಕೆಲವರು ವಿಷಾದ ವ್ಯಕ್ತಪಡಿಸಿದರು. ಅಲ್ಲದೇ ಸೌಹಾರ್ದದಿಂದ ಇರೋಣ ಎಂಬ ಪತ್ರವನ್ನೂ ಮುಸ್ಲಿಂ ಸಮುದಾಯದವರಿಗೆ ನೀಡಿದರು.

ಮತ್ತೊಂದು ಸಭೆ: ಈ ನಡುವೆ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಕಾರ್ಯಾಧ್ಯಕ್ಷರಾಗಿರುವ ವಿಶ್ವಹಿಂದೂ ಪರಿಷತ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನವೀನ್ ನೆರಿಯ ನೇತೃತ್ವದಲ್ಲಿ ಗ್ರಾಮದ ಭಕ್ತರ ಸಭೆ ನಡೆದಿದೆ. ಈ ಸಭೆಯಲ್ಲಿ ಶಾಸಕರ ಮಾತನ್ನು ಹೆಚ್ಚಿನವರು ಬೆಂಬಲಿಸಿದ್ದಾರೆ. ಅಲ್ಲದೆ, ಆಡಳಿತ ಮಂಡಳಿ ಸಭೆ ನಡೆಸಿರುವ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ ಎಂದು ಸಭೆಯಲ್ಲಿ ಭಾಗವಹಿಸಿದ್ದ ಮುಖಂಡರೊಬ್ಬರು ಮಾಹಿತಿ ನೀಡಿದ್ದಾರೆ.

'ದೇವಸ್ಥಾನದ ವಿಚಾರದಲ್ಲಿ ಯಾರಾದರೂ ವೈಯಕ್ತಿಕವಾಗಿ ವ್ಯವಹರಿಸಿದ್ದರೆ ಅದಕ್ಕೆ ಆಡಳಿತ ಮಂಡಳಿ ಜವಾಬ್ದಾರಿಯಲ್ಲ. ಆಡಳಿತ ಮಂಡಳಿಯಿಂದ ಯಾವುದೇ ಸಭೆ ನಡೆದಿಲ್ಲ. ಯಾರೊಂದಿಗೂ ವಿಷಾದ ವ್ಯಕ್ತಪಡಿಸುವ ಪ್ರಮೇಯವೇ ಇಲ್ಲ. ಶಾಸಕರ ಹೇಳಿಕೆಗೆ ಬದ್ಧವಾಗಿದ್ದೇವೆ' ಎಂದು ಪ್ರಧಾನ ಕಾರ್ಯದರ್ಶಿ ತಿಮ್ಮಪ್ಪ ಪೂಜಾರಿ, ಕಾರ್ಯದರ್ಶಿ ಮಂಜುನಾಥ್ ಸಾಲ್ಯಾನ್ ಪ್ರತಿಕ್ರಿಯಿಸಿದ್ದಾರೆ.

ಗೋಪಾಲಕೃಷ್ಣ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸಭೆಯಲ್ಲಿ 'ಬ್ಯಾರಿ' ಸಮುದಾಯದ ವಿರುದ್ಧ ಅವಹೇಳನಕಾರಿ ಪದ ಬಳಸಿರುವ ಜೊತೆಗೆ, ಧರ್ಮಗಳ ನಡುವೆ ದ್ವೇಷ ಹುಟ್ಟಿಸಲು ಶಾಸಕರು ಯತ್ನಿಸಿದ್ದಾರೆ ಎಂದು ಆರೋಪಿಸಿ, ವರ್ತಕ ಇಬ್ರಾಹಿಂ ಎಸ್.ಬಿ ನೀಡಿದ ದೂರಿನನ್ವಯ ಶಾಸಕ ಹರೀಶ್ ಪೂಂಜ ವಿರುದ್ಧ ಉಪ್ಪಿನಂಗಡಿ ಠಾಣೆಯಲ್ಲಿ ಮೇ 4ರಂದು ಪ್ರಕರಣ ದಾಖಲಾಗಿದೆ.

'ಊರಿನ ಸೌಹಾರ್ದ ಮುಖ್ಯ'

'ಊರಿನ ಸೌಹಾರ್ದ ಮುಖ್ಯ. ಪ್ರಸ್ತುತ ಉಂಟಾದ ಗೊಂದಲದಿಂದಾಗಿ ಹಿಂದಿನಿಂದ ಬಂದಿರುವ ಸೌಹಾರ್ದಕ್ಕೆ ಧಕ್ಕೆಯಾಗಬಾರದು. ಈ ನಿಟ್ಟಿನಲ್ಲಿ ಮುಸ್ಲಿಂ ಮುಖಂಡರ ಜೊತೆ ಚರ್ಚಿಸಿ ಸಮಸ್ಯೆ ಬಗೆಹರಿಸಿಕೊಂಡಿದ್ದೇವೆ' ಎಂದು ದೇವಸ್ಥಾನದ ಕಾರ್ಯಾಧ್ಯಕ್ಷ ಲಕ್ಷ್ಮಣ ಭಟ್ರಬೈಲ್ 'ಪ್ರಜಾವಾಣಿ'ಗೆ ತಿಳಿಸಿದರು.

3ರಂಗ ರ‍್ಯಾಲಿ ವಿಜಯಪುರದಲ್ಲಿ ಯುವ ಭಾರತ ಸಮಿತಿ ಸಂಸ್ಥಾಪಕ ಉಮೇಶ ಕಾರಜೋಳ ನೇತೃತ್ವದಲ್ಲಿ ಬುಧವಾರ ಬೃಹತ್ ತಿರಂಗ ರ‍್ಯಾಲಿ ನಡೆಯಿತು

ಚಿತ್ರ: ಸಂಜೀವ ಅಕ್ಕಿ

ಕ್ರೀಡಾ ಕೋಟಾ: ನಾಳೆಯಿಂದ ದಾಖಲೆಗಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಕ್ರೀಡಾ ಕೋಟಾದ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ಮೇ16ರಿಂದ 20ರವರೆಗೆ ನಡೆಯಲಿದೆ.

ಯಾವ ಕ್ರೀಡೆಗಳಲ್ಲಿ ಭಾಗವಹಿಸಿದವರು ಅರ್ಹರು ಎಂಬ ಪೂರ್ಣ ಮಾಹಿತಿಯನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ. ಈ ಲಿಂಕ್ ಮೂಲಕ ಅಭ್ಯರ್ಥಿಗಳು ದಿನಾಂಕ ಮತ್ತು ಸಮಯ ಕಾಯ್ದಿರಿಸಿಕೊಂಡು, ಪರಿಶೀಲನೆಗಾಗಿ ಬೆಂಗಳೂರಿನ ಕಚೇರಿಗೆ ಹಾಜರಾಗಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

'ಎ ಮತ್ತು ವೈ' ಗುಂಪು ಹೊರತುಪಡಿಸಿ, ಉಳಿದ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆಯನ್ನು ಮೇ 20ರವರೆಗೆ ವಿಸ್ತರಿಸಲಾಗಿದೆ.

ಪಿಯು ಅಂಕ ನಮೂದಿಸಲು ಸೂಚನೆ: ಕರ್ನಾಟಕದ ಹೊರಗಿನ ರಾಜ್ಯಗಳಲ್ಲಿ ಓದಿದ ಸಿಬಿಎಸ್‌ಇ, ಐಸಿಎಸ್‌ಇ ವಿದ್ಯಾರ್ಥಿಗಳು ಮಾತ್ರ ದ್ವಿತೀಯ ಪಿಯು ಅಂಕಗಳನ್ನು ಲಿಂಕ್‌ನಲ್ಲಿ ನಮೂದಿಸಬೇಕು. ಕರ್ನಾಟಕದಲ್ಲಿ ಓದಿದ ರಾಜ್ಯ ಪಿಯು ಮಂಡಳಿ, ಸಿಬಿಎಸ್‌ಇ, ಐಸಿಎಸ್‌ಇ ವಿದ್ಯಾರ್ಥಿಗಳು ಲಿಂಕ್‌ನಲ್ಲಿ ಅಂಕಗಳನ್ನು ದಾಖಲಿಸುವ ಅಗತ್ಯ ಇಲ್ಲ. ಅಂಥವರು ಕೇವಲ ಪರೀಕ್ಷೆಯ ನೋಂದಣಿ ಸಂಖ್ಯೆ ನಮೂದಿಸಬೇಕು. ಹಿಂದಿನ ವರ್ಷಗಳಲ್ಲಿ ಉತ್ತೀರ್ಣರಾದವರು ಸಹ ನೋಂದಣಿ ಸಂಖ್ಯೆ ನಮೂದಿಸಿದರೆ ಸಾಕು. ನೋಂದಣಿ ಸಂಖ್ಯೆ ತಪ್ಪಾಗಿದ್ದರೂ ಸರಿಪಡಿಸಿಕೊಳ್ಳಬಹುದು ಎಂದಿದ್ದಾರೆ.

ಶುಲ್ಕ ಪಾವತಿಗೆ ಇಂದೇ ಕೊನೆ ದಿನ: ಪಿಜಿ–ಸಿಇಟಿ, ಡಿಸಿಇಟಿ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಿರುವವರಿಗೆ ಶುಲ್ಕ ಕಟ್ಟಲು ಮೇ 15ರವರೆಗೆ ಅವಕಾಶ ನೀಡಲಾಗಿದೆ.

ಗ್ರಾ.ಪಂ. ಅಧ್ಯಕ್ಷೆ ವಿರುದ್ಧ ಪ್ರಕರಣ

ಬೆಳ್ತಂಗಡಿ (ದಕ್ಷಿಣ ಕನ್ನಡ): ಕುವೆಟ್ಟು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಭಾರತಿ ಶೆಟ್ಟಿ ಅವರು ಮುಸ್ಲಿಂ ಸಮುದಾಯದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತ ಹರಿಪ್ರಸಾದ್ ಇರುವತ್ತಾಯ ಎಂಬುವರು ಬೆಳ್ತಂಗಡಿ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

'ಮೇ 12ರಂದು ಸುಹಾಸ್ ಶೆಟ್ಟಿ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಭಾರತಿ ಶೆಟ್ಟಿ, 'ಗುರುವಾಯನಕೆರೆಯಲ್ಲಿ ಮುಸ್ಲಿಮರ ಸಂಖ್ಯೆ ಜಾಸ್ತಿ, ಅವರ ಬಳಿ ವ್ಯಾಪಾರ, ವ್ಯವಹಾರ ಮಾಡುವುದನ್ನು ನಿಲ್ಲಿಸಬೇಕು. ಮುಸ್ಲಿಂ ರಿಕ್ಷಾ ಚಾಲಕರು ನಮ್ಮಲ್ಲಿ ಚಂದವಾಗಿ ಮಾತನಾಡಿ ನಮಗೆ ಗೊತ್ತಿಲ್ಲದೆ ಮೋಸ ಮಾಡುತ್ತಾರೆ' ಎಂದಿದ್ದರು. ಹೀಗಾಗಿ, ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಹರಿಪ್ರಸಾದ್ ಒತ್ತಾಯಿಸಿದ್ದಾರೆ.

ಯಳಂದೂರು ರೆಸಾರ್ಟ್‌ಗಳಲ್ಲಿ 6 ದಿನ ವಾಸ್ತವ್ಯ

ಆಂಧ್ರದ ಅಬಕಾರಿ ಹಗರಣದ ಆರೋಪಿ ಬಾಲಾಜಿ ಗೋವಿಂದಪ್ಪಗೆ 'ಸ್ನೇಹಿತನ' ನೆರವು

• ಬಾಲಚಂದ್ರ ಎಚ್.

ಚಾಮರಾಜನಗರ: ಆಂಧ್ರಪ್ರದೇಶದ ವೈಎಸ್‌ಆರ್‌ಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಅಬಕಾರಿ ಹಗರಣ ಪ್ರಕರಣದಲ್ಲಿ ಮಂಗಳವಾರ ಬಂಧನಕ್ಕೊಳಗಾಗಿರುವ ಆರೋಪಿ ಬಾಲಾಜಿ ಗೋವಿಂದಪ್ಪ ಮೇ 8ರಿಂದ 13ರವರೆಗೂ ಜಿಲ್ಲೆಯ ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನಬೆಟ್ಟ ವ್ಯಾಪ್ತಿಯಲ್ಲಿರುವ ರೆಸಾರ್ಟ್‌ಗಳಲ್ಲಿ ವಾಸ್ತವ್ಯ ಹೂಡಿದ್ದ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿದೆ.

ಆಂಧ್ರದ ಮಾಜಿ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಪತ್ನಿ ವೈ.ಎಸ್. ಭಾರತಿ ಅಧ್ಯಕ್ಷರಾಗಿರುವ ಭಾರತಿ ಸಿಮೆಂಟ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಲೆಕ್ಕ ಪರಿಶೋಧಕ ಹಾಗೂ ನಿರ್ದೇಶಕರಾಗಿರುವ ಬಾಲಾಜಿ, ₹3,200 ಕೋಟಿ ಅಬಕಾರಿ ಹಗರಣದಲ್ಲಿ ಪ್ರಮುಖ ಆರೋಪಿಯಾಗಿದ್ದು, ಈಚೆಗಷ್ಟೆ ವಿಚಾರಣೆಗೆ ಹಾಜರಾಗುವಂತೆ ಆಂಧ್ರದ ಎಸ್‌ಐಟಿ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದರು.

ನೋಟಿಸ್ ಜಾರಿಯಾದ ಬೆನ್ನಲ್ಲೇ ಆಂಧ್ರದಿಂದ ನಾಪತ್ತೆಯಾಗಿದ್ದ ಆರೋಪಿ, ಬೆಂಗಳೂರು ಹಾಗೂ ಮೈಸೂರಿನಲ್ಲಿ ಕೆಲಕಾಲ ವಾಸ್ತವ್ಯ ಹೂಡಿ, ಸ್ನೇಹಿತರೊಬ್ಬರ ನೆರವಿನಿಂದ ಬಿಳಿಗಿರಿ ರಂಗನಬೆಟ್ಟಕ್ಕೆ ಬಂದಿದ್ದರು. ಮೇ 8ರಂದು ಇಲ್ಲಿನ ಗಿರಿದರ್ಶಿನಿ ಹೋಟೆಲ್‌ಗೆ ಬಂದು ತಂಗಿದ್ದರು. ಆದರೆ ಬಂಧನ ಭೀತಿಯಿಂದ, ಮಾರನೆಯ ದಿನವೇ ರೆಸಾರ್ಟ್‌ನಿಂದ ದಿಢೀರ್ ನಿರ್ಗಮಿಸಿದ್ದರು. ಬಳಿಕ, ಕೆಲವೇ ತಾಸುಗಳಲ್ಲಿ ವಾಪಸ್ ಬಂದು ಮೇ 10ರವರೆಗೂ ಅಲ್ಲಿಯೇ ಉಳಿದುಕೊಂಡಿದ್ದರು.

ವಾಸ್ತವ್ಯ ಬದಲಿಸಿದ್ದ ಆರೋಪಿ: ಆಂಧ್ರ ಪೊಲೀಸರು ಬೆನ್ನತ್ತಿರುವ ಮಾಹಿತಿ ತಿಳಿದು, ಮೇ 11ರಂದು ದಿಢೀರ್ ಗೊರುಕನ ಆಯುರ್ವೇದಿಕ್ ಎಕೊ ವೆಲ್‌ನೆಸ್ ರೆಸಾರ್ಟ್‌ಗೆ ವಾಸ್ತವ್ಯ ಬದಲಿಸಿದ್ದರು.

ಪಂಚನಾಮೆಗೆ ಒಪ್ಪದ ಸ್ಥಳೀಯರು: 'ಹೊರರಾಜ್ಯದ ಮತ್ತು ಹೈಪ್ರೊಫೈಲ್ ಪ್ರಕರಣವೆಂಬ ಕಾರಣಕ್ಕೆ, ಆರೋಪಿಯ ಬಂಧನದ ಬಗ್ಗೆ ಮಾಹಿತಿ ಬಹಿರಂಗಪಡಿಸದೇ ಇದ್ದುದರಿಂದ ಸ್ಥಳೀಯರು ಪಂಚನಾಮೆಗೆ ಸುಲಭವಾಗಿ ಒಪ್ಪದೆ, ಆಂಧ್ರ ಪೊಲೀಸರು ಕೆಲವು ತಾಸು ಕಾಯಬೇಕಾಯಿತು. ಕೊನೆಗೆ ಸ್ಥಳೀಯ ಪೊಲೀಸರು ನೆರವಿಗೆ ಧಾವಿಸಿದರು' ಎಂದು ಸ್ಥಳೀಯ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಚೆಕ್‌ಪೋಸ್ಟ್ ಮೂಲಕ ಪ್ರವೇಶ: ಆರೋಪ

'ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿರುವ ಗುಂಬಳ್ಳಿ ಚೆಕ್‌ಪೋಸ್ಟ್‌ನಲ್ಲಿ ಸಂಜೆ 6ರಿಂದ ಬೆಳಿಗ್ಗೆ 6ರವರೆಗೆ ವಾಹನಗಳ ಸಂಚಾರಕ್ಕೆ ನಿರ್ಬಂಧವಿದೆ. ಆಂಬುಲೆನ್ಸ್ ಸೇರಿ ಸ್ಥಳೀಯರ ವಾಹನಗಳಿಗೆ ಮಾತ್ರ ಪ್ರವೇಶಕ್ಕೆ ಅನುಮತಿ ಇದೆ. ಈ ಸಡಿಲಿಕೆಯ ಅವಕಾಶವನ್ನು ಬಳಸಿಕೊಂಡ ಆರೋಪಿ ಸ್ನೇಹಿತನ ಕಾರಿನಲ್ಲಿ ಚೆಕ್‌ಪೋಸ್ಟ್ ದಾಟಿದ್ದಾರೆ' ಎಂದು ಸ್ಥಳೀಯರು ದೂರಿದ್ದಾರೆ.

ಆದರೆ, ಅರಣ್ಯ ಇಲಾಖೆ ಅಧಿಕಾರಿಗಳು ಇದನ್ನು ಅಲ್ಲಗಳೆದಿದ್ದು, 'ನಿರ್ಬಂಧಿತ ಅವಧಿಯಲ್ಲಿ ಖಾಸಗಿ ವಾಹನಗಳಿಗೆ ಪ್ರವೇಶ ನೀಡಿಲ್ಲ' ಎಂದು ಸ್ಪಷ್ಟನೆ ನೀಡಿದ್ದಾರೆ.

> **ಸಂಜೆ 6ರಿಂದ ಬೆಳಿಗ್ಗೆ 6ರವರೆಗೆ ಚೆಕ್‌ಪೋಸ್ಟ್‌ನಲ್ಲಿ ಖಾಸಗಿ ವಾಹನಗಳಿಗೆ ಪ್ರವೇಶವಿಲ್ಲ. ನಿಯಮಬಾಹಿರವಾಗಿ ಚೆಕ್‌ಪೋಸ್ಟ್ ಪ್ರವೇಶ ಮಾಡಲಾಗಿದೆಯೇ ಎಂಬುದನ್ನು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳ ಮೂಲಕ ಪರಿಶೀಲಿಸಲಾಗುವುದು**
> **ಶ್ರೀಪತಿ,** ಬಿಆರ್‌ಟಿ ಉಪ ಅರಣ್ಯ ಸಂರಕ್ಷಣಾಧಿಕಾರಿ



ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನಬೆಟ್ಟದ ನೋಟ

ಬಾಲಕಿ ಕೊಲೆ ಅತ್ಯಾಚಾರ ಶಂಕೆ

ಬಿಡದಿ (ರಾಮನಗರ): ರೈಲು ಹಳಿ ಬಳಿ ಅರೆ ನಗ್ನಾವಸ್ಥೆಯಲ್ಲಿ ಪತ್ತೆಯಾಗಿದ್ದ, ಬಾಲಕಿ ಮೇಲೆ ಅತ್ಯಾಚಾರ ಎಸಗಿರುವ ಶಂಕೆಯನ್ನು ಕುಟುಂಬದವರು ವ್ಯಕ್ತಪಡಿಸಿದ್ದಾರೆ. ಮಾತು ಬಾರದ ಮತ್ತು ಕಿವಿ ಕೇಳದ 15 ವರ್ಷದ ಬಾಲಕಿ ಶವ 3 ದಿನದ ಹಿಂದೆ ಪತ್ತೆಯಾಗಿತ್ತು.

ಬಿಡದಿ ಠಾಣೆ ಪೊಲೀಸರು ಎರಡು ದಿನದ ಹಿಂದೆಯೇ ಮರಣೋತ್ತರ ಪರೀಕ್ಷೆ ಮುಗಿಸಿ ಶವ ಹಸ್ತಾಂತರಿಸಿದ್ದರೂ, ಅಂತ್ಯಕ್ರಿಯೆ ನಡೆಸದೆ ಮನೆ ಬಳಿ ಶವ ಇಟ್ಟುಕೊಂಡು ಪ್ರತಿಭಟಿಸಿದರು. ಪರೀಕ್ಷೆ ವರದಿ ಬರುವವರೆಗೆ ಶವ ತೆಗೆಯುವುದಿಲ್ಲ ಎಂದು ಪಟ್ಟು ಹಿಡಿದರು.

ಜಿಲ್ಲಾ ಕೇಂದ್ರ ರಾಮನಗರದಲ್ಲೂ ಸಮುದಾಯದವರು ಪ್ರತಿಭಟಿಸಿದರು. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಗ್ರಾಮಕ್ಕೆ ಭೇಟಿ ನೀಡಿದರು. ಮನವೊಲಿಕೆ ಬಳಿಕ ಸಂಜೆ 4ರ ಹೊತ್ತಿಗೆ ಅಂತ್ಯಕ್ರಿಯೆ ನಡೆಸಿದರು.

ಡಿಸಿಎಂ ಭೇಟಿ: ವಿಷಯ ತಿಳಿದು ಡಿಸಿಎಂ ಡಿ.ಕೆ.ಶಿವಕುಮಾರ್ ಗ್ರಾಮಕ್ಕೆ ಬುಧವಾರ ಸಂಜೆ 5.30ಕ್ಕೆ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ₹4,12,500 ಮೊತ್ತದ ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಅಂತ್ಯಕ್ರಿಯೆಗೆ ₹50 ಸಾವಿರದ ಚೆಕ್ ಅನ್ನು ಬಾಲಕಿಯ ತಾಯಿಗೆ ವಿತರಿಸಿದರು.

ಗಣಿತ-ಖಗೋಳ ವಿಜ್ಞಾನ ಅಧ್ಯಯನದ ಹರಿಕಾರ

• ಶೈಲಜಾ ಬಿ.ಎಸ್.

ಭಾರತೀಯ ಗಣಿತ ಮತ್ತು ಖಗೋಳ ವಿಜ್ಞಾನದ ಯಾವುದೇ ಅಧ್ಯಯನದಲ್ಲಿ ಮರೆಯದೇ ಹೆಸರಿಸಬೇಕಾದ ಆಕರಗ್ರಂಥಗಳ ಕರ್ತೃ ಪ್ರೊಫೆಸರ್ ಎಸ್. ಬಾಲಚಂದ್ರ ರಾವ್. ಶಿವಮೊಗ್ಗೆಯ ಸಾಗರದ ಸಮೀಪದ ಹಳ್ಳಿಯೊಂದರಲ್ಲಿ ಜನಿಸಿದ ಅವರಿಗೆ ಗಣಿತದಲ್ಲಿ ಅತೀವ ಆಸಕ್ತಿ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪದವಿ ಗಳಿಸಿದ ಅವರು ಮುಂದೆ ಗಣಿತದಲ್ಲಿಯೇ ಉನ್ನತಾಭ್ಯಾಸವನ್ನೂ ಮಾಡಿ ಪಿಎಚ್.ಡಿ ಗಳಿಸಿದರು. ಗೌರಿಬಿದನೂರಿನ ನ್ಯಾಷನಲ್ ಕಾಲೇಜಿನಲ್ಲಿ ತಮ್ಮ ಶಿಕ್ಷಣ ವೃತ್ತಿಯನ್ನು ಆರಂಭಿಸಿದರು.

ಭಾರತೀಯ ಗಣಿತದ ಬಗ್ಗೆ ಅವರಿಗೆ ಇದ್ದ ಆಸಕ್ತಿ ಆ ಬಳಿಕ ಮೊಳಕೆಯೊಡೆಯಿತು. ಆಗ್ಗೆ ಫಲ ಜ್ಯೋತಿಷ ಮತ್ತು ಖಗೋಳ ಶಾಸ್ತ್ರಗಳನ್ನು ಪ್ರತ್ಯೇಕಿಸುವ ವಿಧಾನವೇ ಇರಲಿಲ್ಲ ಎನ್ನುವ ಗೊಂದಲಗಳಿದ್ದವು. ಪ್ರೊ. ಬಾಲಚಂದ್ರ ರಾವ್ ಅವರು ಎರಡನ್ನೂ ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಆಳವಾಗಿ ಕಲಿತರು. ಸುಭದ್ರ ಗಣಿತ ಬುನಾದಿಯ ಖಗೋಳ ಶಾಸ್ತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡರು. 'ಫಲಜ್ಯೋತಿಷ ಬೇಕೇ?' ಎಂಬ ಪುಸ್ತಕ ಬಹಳ ಓದುಗರನ್ನು ಸೆಳೆದಿದೆ. ಹಲವಾರು ಆವೃತ್ತಿಗಳನ್ನು ಕಂಡಿದೆ.

1993ರ ವೇಳೆಗೆ ಅವರು ಈ ವಿಷಯದಲ್ಲಿ ಹಿಡಿತವನ್ನು ಸಾಧಿಸಿ ಅದರಲ್ಲಿ ನಡೆಸಬೇಕಾದ ಅಧ್ಯಯನದ ಹಾದಿ ಬಹಳ ಕಷ್ಟಕರವಾದದ್ದು, ಅಲ್ಲದೆ ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆ ಎಂಬುದನ್ನೂ ಅರಿತುಕೊಂಡರು. ಪಾಶ್ಚಾತ್ಯ ಶಿಕ್ಷಣ ಪದ್ಧತಿಯ ಕಾರಣ ಮೂಲೆಗುಂಪಾಗಿದ್ದ ಪಠ್ಯಗಳ ಅಧ್ಯಯನಕ್ಕೆ ಅವರು ತೊಡಗಿಕೊಂಡರು. ತಮ್ಮ ಹಳ್ಳಿಯಲ್ಲಿ ಅಡಗಿ ಕುಳಿತಿದ್ದ ಅಮೂಲ್ಯ ಹಸ್ತಪ್ರತಿಗಳನ್ನು ಹೊರತೆಗೆದು ಅವುಗಳ ಪ್ರಾಮುಖ್ಯವನ್ನು ಪ್ರಚುರಪಡಿಸಿದರು. ದಕ್ಷಿಣ ಭಾರತಾದ್ಯಂತ ಬಳಕೆಯಲ್ಲಿದ್ದ ಈ ಕೈಪಿಡಿಯು 'ತ್ಯಾಗರ್ತಿ' ಪಟ್ಟಿಗಳು ಎಂದೇ ಜನಪ್ರಿಯವಾಗಿತ್ತು.



ಎಸ್. ಬಾಲಚಂದ್ರ ರಾವ್

ನುಡಿ ನಮನ

ಭಾರತೀಯ ಖಗೋಳ ಶಾಸ್ತ್ರವನ್ನು ಫಲ ಜ್ಯೋತಿಷದ ಪಟ್ಟಿಯಿಂದ ಹೊರತೆಗೆದು ಜನರನ್ನು ಆಕರ್ಷಿಸುವ ಅನೇಕ ಉಪನ್ಯಾಸಗಳನ್ನು ನೀಡಿದರು. ಬಸವನಗುಡಿಯ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾದ ಮೇಲೆ, ಹೊಸ ಹುರುಪಿನಿಂದ ಅಧ್ಯಯನ ಆರಂಭಿಸಿದರು. ಭಾರತೀಯ ವಿದ್ಯಾಭವನದ 'ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಗಾಂಧಿ ಕೇಂದ್ರ'ದ ನಿರ್ದೇಶಕರಾಗಿ ಸೇರಿ ಭಾರತೀಯ ಗಣಿತ ಮತ್ತು ಖಗೋಳ ವಿಜ್ಞಾನವನ್ನು ಆಸಕ್ತಿಪೂರ್ಣವನ್ನಾಗಿ ಮಾಡಿ ಯುವಜನರನ್ನು ಆಕರ್ಷಿಸುವ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು.

ಹಲವಾರು ಆಸಕ್ತರಿಗೆ ಪಿಎಚ್.ಡಿ ಸಂಶೋಧನೆಗಾಗಿ ಮಾರ್ಗದರ್ಶನ ಮಾಡಿದರು. ಇವರ ಸಂಶೋಧನಾ ಪ್ರಬಂಧಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಕರಗಳಾಗಿವೆ. ತಮ್ಮ ಈ ಅಧ್ಯಯನದಲ್ಲಿ ಅವರು ಏಕಾಂಗಿಯೇ ಆಗಿದ್ದರು. ಸಾಕಷ್ಟು ಎಡರು ತೊಡರುಗಳನ್ನು ಎದುರಿಸಿದರು. ಆದರೂ ಅವರು ಅನೇಕ ಶಿಷ್ಯರನ್ನು ತಯಾರು ಮಾಡುವ ಸವಾಲನ್ನು ಗೆದ್ದುಕೊಂಡರು. ಅವರ ಪ್ರಕಟಣೆಗಳು, ಗ್ರಂಥಗಳು ಈಗ ಆಕರ ಗ್ರಂಥಗಳಾಗಿವೆ. ಆರ್ಯಭಟೀಯ, ಕರಣಕುತೂಹಲ, ಗ್ರಹಲಾಘವ – ಈ ಗ್ರಂಥಗಳ ಇಂಗ್ಲಿಷ್ ಅನುವಾದ ಮತ್ತು ಸುದೀರ್ಘ ವಿವರಣೆಗಳು ವಿಶೇಷ ಆಕರ್ಷಣೆ ಎನ್ನಬಹುದು. ಗ್ರಹಣ, ಗ್ರಹಯುತಿ, ಆಚ್ಛಾದನೆ ಇಂತಹ ಖಗೋಳ ಘಟನೆಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದಾರೆ. ವ್ಯತಿಪಾತ ಎಂಬ ಘಟನೆಯ ಬಗ್ಗೆ ಪಾಶ್ಚಾತ್ಯ ಗ್ರಂಥಗಳಲ್ಲಿ ಇಲ್ಲದ ವಿವರಣೆಗಳನ್ನು ಹುಡುಕಿ ತೆಗೆದಿದ್ದಾರೆ. ಇದು ಈ ವರ್ಷದ ಏಪ್ರಿಲ್ ತಿಂಗಳಲ್ಲಿ ಪ್ರಕಟವಾಗಿದೆ.

ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳಿಗೆ ಗಣಿತದಲ್ಲಿ ಆಸಕ್ತಿ ಮೂಡಿಸಬೇಕು ಎಂಬ ಉದ್ದೇಶದಿಂದ ಅವರು ಅನೇಕ ಗಣಿತ ಪುಸ್ತಕಗಳನ್ನು ವಿಶೇಷವಾಗಿ ಕನ್ನಡದಲ್ಲಿ ರಚಿಸಿದ್ದಾರೆ. ಜೊತೆಗೆ ಆರ್ಯಭಟ, ಭಾಸ್ಕರಾಚಾರ್ಯ ಮತ್ತು ಗಣೇಶ ದೈವಜ್ಞ – ಇವರುಗಳ ಗ್ರಂಥಗಳನ್ನು ಕನ್ನಡದಲ್ಲಿಯೂ ಒದಗಿಸಿದ್ದಾರೆ. ಅವರ ನಿಧನ ಭಾರತೀಯ ಗಣಿತ ಮತ್ತು ಖಗೋಳ ಅಧ್ಯಯನಕ್ಕೆ ತುಂಬಲಾರದ ನಷ್ಟ. ಏಕಾಂಗಿಯಾಗಿ ಈ ಕ್ಷೇತ್ರವನ್ನು ಪ್ರವೇಶಿಸಿ ಅನೇಕ ಯುವಜನರಿಗೆ ಸ್ಫೂರ್ತಿಯಾಗಿ ತಮ್ಮ ಛಾಪನ್ನು ಮೂಡಿಸಿರುವ ಪ್ರೊ. ಬಾಲಚಂದ್ರರಾವ್ ಅವರ ಕೊಡುಗೆ ಚಿರಕಾಲ ಉಳಿಯುವಂತಹದು.

ಎಸ್. ಬಾಲಚಂದ್ರ ರಾವ್ ಇನ್ನಿಲ್ಲ

ಬೆಂಗಳೂರು: ಬಸವನಗುಡಿ ನ್ಯಾಷನಲ್ ಕಾಲೇಜಿನ ನಿವೃತ್ತ ಪ್ರಾಚಾರ್ಯ ಪ್ರೊ. ಎಸ್. ಬಾಲಚಂದ್ರರಾವ್ (80) ಅವರು ವಯೋಸಹಜ ಅನಾರೋಗ್ಯದಿಂದಾಗಿ ಬುಧವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಮಧ್ಯಾಹ್ನ ರಾಜಾಜಿನಗರದ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಆಂಬುಲೆನ್ಸ್ ಇಲಾಖೆಯಿಂದಲೇ ನಿರ್ವಹಣೆ

ಬೆಂಗಳೂರು: 'ರಾಜ್ಯದಲ್ಲಿ 108 ಆಂಬುಲೆನ್ಸ್ ಸೇವೆಯನ್ನು ಉತ್ತಮಗೊಳಿಸಲು, ಈ ಸೇವೆ ನಿಯಂತ್ರಣ ಮಾಡುವ 'ಕಮಾಂಡ್ ಕಂಟ್ರೋಲ್' ಕೇಂದ್ರವನ್ನು ಆರೋಗ್ಯ ಇಲಾಖೆಯ ಅಧೀನಕ್ಕೆ ಒಳಪಡಿಸಲಾಗುತ್ತಿದೆ. ಈ ಮೂಲಕ 'ಆರೋಗ್ಯ ಕವಚ' ಸೇವೆಯನ್ನು ಬಲಪಡಿಸಲಾಗುತ್ತಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬುಧವಾರ ಇಲ್ಲಿ ಮಾತನಾಡಿದ ಅವರು, 'ಈ ಸೇವೆಯನ್ನು ಖಾಸಗಿ ಏಜೆನ್ಸಿ ನಿರ್ವಹಣೆ ಮಾಡುತ್ತಿತ್ತು. ಆದರೆ, ಸಮರ್ಪಕವಾಗಿ ನಡೆಯುತ್ತಿರಲಿಲ್ಲ. ಸರ್ಕಾರದಿಂದ ನಿರ್ವಹಣಾ ಏಜೆನ್ಸಿಗೆ ಹಣ ಪಾವತಿಸಿದರೂ ಆಂಬುಲೆನ್ಸ್ ಸಿಬ್ಬಂದಿಗೆ ಸಕಾಲಕ್ಕೆ ಹಣ ಪಾವತಿಸುತ್ತಿರಲಿಲ್ಲ. ಇದರಿಂದಾಗಿ ಆಗಾಗ ಸೇವೆಯಲ್ಲಿ ವ್ಯತ್ಯಯವಾಗುತ್ತಿತ್ತು' ಎಂದರು.

'ಈಗಾಗಲೇ ತಂತ್ರಾಂಶವನ್ನೂ ಸಿದ್ಧಪಡಿಸಲಾಗಿದ್ದು, ಚಾಮರಾಜನಗರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಸೇವೆಯನ್ನು ಇಲಾಖೆಯಿಂದಲೇ ಒದಗಿಸಲಾಗುತ್ತಿದೆ. ಇನ್ನು ಮೂರು ತಿಂಗಳಲ್ಲಿ ರಾಜ್ಯದಾದ್ಯಂತ ವಿಸ್ತರಿಸಲಾಗುವುದು. ಬೆಂಗಳೂರಿನ ಜತೆಗೆ ಪ್ರತಿ ಜಿಲ್ಲೆಯಲ್ಲಿಯೂ ಪ್ರತ್ಯೇಕ 'ಕಮಾಂಡ್ ಸೆಂಟರ್'ಗಳನ್ನ ನಿರ್ಮಿಸಲಾಗುವುದು' ಎಂದರು.

ಬೇಂದ್ರೆ ನಿವಾಸದ ರೇಖಾಚಿತ್ರವುಳ್ಳ ಅಂಚೆ ಮುದ್ರೆ ಬಿಡುಗಡೆ

ಧಾರವಾಡ: ವರಕವಿ ದ.ರಾ. ಬೇಂದ್ರೆ ನಿವಾಸದ ರೇಖಾಚಿತ್ರವುಳ್ಳ ಅಂಚೆ ಮುದ್ರೆಯನ್ನು ಬುಧವಾರ ಅಂಚೆ ಇಲಾಖೆಯ ಕರ್ನಾಟಕ ವೃತ್ತದ ಚೀಫ್ ಪೋಸ್ಟ್‌ಮಾಸ್ಟರ್ ಜನರಲ್ ರಾಜೇಂದ್ರ ಕುಮಾರ್ ಬಿಡುಗಡೆ ಮಾಡಿದರು.

ವರಕವಿ ದ.ರಾ.ಬೇಂದ್ರೆ ನಿವಾಸ ರೇಖಾಚಿತ್ರವುಳ್ಳ ಅಂಚೆ ಮುದ್ರೆ

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ಕರ್ನಾಟಕ ವೃತ್ತದಿಂದ ಈವರೆಗೆ 88 ಪ್ರಮುಖ ವ್ಯಕ್ತಿ, ಸ್ಮಾರಕಗಳ ಮುದ್ರೆ ಬಿಡುಗಡೆಯಾಗಿದೆ' ಎಂದರು.

ಉತ್ತರ ಕರ್ನಾಟಕ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಕರ್ನಲ್ ಸುಶೀಲ್‌ಕುಮಾರ್ ಮಾತನಾಡಿದರು. ಧಾರವಾಡ ವಿಭಾಗದ ಹಿರಿಯ ಸೂಪರಿಂಟೆಂಡೆಂಟ್ ವೈಭವ ವಾಘಮಾರೆ, ಧಾರವಾಡದ ಅಂಚೆ ಕಚೇರಿಗಳ ಡೆಪ್ಯುಟಿ ಸೂಪರಿಂಟೆಂಡೆಂಟ್ ಎಸ್. ವಿಜಯನರಸಿಂಹ ಉಪಸ್ಥಿತರಿದ್ದರು.

ಗಾಂಧೀಜಿಗೆ ಅವಮಾನ: ಯತ್ನಾಳ ವಿರುದ್ಧ ದೂರು

ವಿಜಯಪುರ: 'ಗಾಂಧೀಜಿ ಭಾರತದ ರಾಷ್ಟ್ರಪಿತ ಅಲ್ಲ, ಪಾಕಿಸ್ತಾನದ ರಾಷ್ಟ್ರಪಿತ. ನಮ್ಮ ದೇಶ ಒಡೆದು ಮುಸ್ಲಿಮರಿಗೆ ಪಾಕಿಸ್ತಾನವನ್ನು ಮಾಡಿಕೊಟ್ಟ' ಎಂದು ಹೇಳಿಕೆ ನೀಡಿದ್ದ ಆರೋಪದ ಮೇಲೆ ವಿಜಯಪುರ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಅಲ್ಲಾಭಕ್ಷ ಡೋಗರಿಸಾಬಾ ಬಢೇಘರ್ ಎಂಬುವರು ಇಲ್ಲಿನ ಆದರ್ಶ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

'ಮಹಾತ್ಮ ಗಾಂಧಿ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿ ಅವರ ಮಾನಹರಣ ಮಾಡಿ, ದೇಶದಲ್ಲಿ ಅಶಾಂತಿ ಹುಟ್ಟಿಸುವ ಪಿತೂರಿ ನಡೆಸಿದ ಯತ್ನಾಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಅವರು ದೂರಿನಲ್ಲಿ ಆಗ್ರಹಿಸಿದ್ದಾರೆ.

ಮಹಾತ್ಮ ಗಾಂಧಿ ವಿರುದ್ಧ ಆಧಾರ ರಹಿತ ಆರೋಪಗಳನ್ನು ಮಾಡಿ, ಅವಹೇಳನಕಾರಿ ಹೇಳಿಕೆ ನೀಡಿ ಶಾಸಕ ಬಸನಗೌಡ ಯತ್ನಾಳ ಅವರನ್ನು ತಕ್ಷಣ ಬಂಧಿಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿದರು.

ಗುರುವಾರ, ಮೇ 15, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮುಗಿಯದ ಕಾಮಗಾರಿ

ಬೆಂಗಳೂರಿನ ರಾಜ್‌ಕುಮಾರ್ ಮುಖ್ಯರಸ್ತೆಯ ಪಾದಚಾರಿ ಮಾರ್ಗ ಹಾಗೂ ರಸ್ತೆಯನ್ನು ಅಗೆದು ಹಾಕಿದ್ದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಪಾದಚಾರಿ ಮಾರ್ಗವನ್ನು ಸಂಪೂರ್ಣ ಕಿತ್ತುಹಾಕಿದ ಪರಿಣಾಮ ಸಾರ್ವಜನಿಕರು ಮುಖ್ಯ ರಸ್ತೆಯಲ್ಲಿ ನಿಂತಿದ್ದರು

ಕರ್ನಾಟಕ ಸರ್ಕಾರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ
ಬೆಂಗಳೂರು ನಗರಾಭಿವೃದ್ಧಿ ಸಚಿವರು
ಕರ್ನಾಟಕ ಸರ್ಕಾರ

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ-2024 ಅನುಷ್ಠಾನ

ದಿನಾಂಕ: 15.05.2025, ಗುರುವಾರ

ಬೆಂಗಳೂರಿನ ಸಮಗ್ರ ಅಭಿವೃದ್ಧಿಗಾಗಿ

ಕ್ರಾಂತಿಕಾರಿ ಹೆಜ್ಜೆ



- ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಪರಿಣಾಮಕಾರಿಯಾದ ಸಮನ್ವಯ, ಸಹಭಾಗಿತ್ವ ಮತ್ತು ಸ್ಪಂದನಶೀಲ ಆಡಳಿತ
- ನಗರ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ಎಲ್ಲಾ ಸಾರ್ವಜನಿಕ ಸೇವಾ ಸಂಸ್ಥೆಗಳನ್ನು ಸಂಯೋಜಿಸುವ ಆಡಳಿತ ವ್ಯವಸ್ಥೆ
- ಗ್ರೇಟರ್ ಬೆಂಗಳೂರು ಪ್ರದೇಶವನ್ನು ಯೋಜನಾಬದ್ಧವಾಗಿ ರೂಪಿಸುವ ಉದ್ದೇಶ
- ಆಡಳಿತ ವ್ಯವಸ್ಥೆಯನ್ನು ಮತ್ತಷ್ಟು ವಿಕೇಂದ್ರೀಕರಣಗೊಳಿಸಿ ನಾಗರಿಕರ ಪಾಲ್ಗೊಳ್ಳುವಿಕೆ ಹೆಚ್ಚಿಸುವುದು
- ನಗರದ ಗುಣಮಟ್ಟ ವೃದ್ಧಿಸಿ, ಹೂಡಿಕೆಯನ್ನು ಆಕರ್ಷಿಸುವುದು ಮತ್ತು ಉದ್ಯೋಗಾವಕಾಶ ಸೃಷ್ಟಿಸುವುದು

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಪ್ರಕಟಣೆ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೆ.ಪಿ.ಸಿ.ಸಿ ಅಧ್ಯಕ್ಷರು ಹಾಗೂ ಕರ್ನಾಟಕ ಸರ್ಕಾರದ ಮಾನ್ಯ
ಉಪಮುಖ್ಯಮಂತ್ರಿಗಳು ಬ್ರಾಂಡ್ ಬೆಂಗಳೂರಿನ ಹರಿಕಾರರಾದ ಸನ್ಮಾನ್ಯ
ಶ್ರೀ. ಡಿ.ಕೆ ಶಿವಕುಮಾರ್ ರವರಿಗೆ
ಹುಟ್ಟುಹಬ್ಬದ ಹಾರ್ದಿಕ
ಶುಭಾಶಯಗಳು
ಶ್ರೀ. ಎ.ಸಿ ಶ್ರೀನಿವಾಸ್ ರವರು
ಶಾಸಕರು
ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರ ಹಾಗೂ
ಬಿ.ಡಿ.ಎ. ಸದಸ್ಯರು

ಗುರುವಾರ, ಮೇ 15, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 134 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಕ್ರಿಯೆ

ಅದು ಅವರ (ಶಶಿ ತರೂರ್) ವೈಯಕ್ತಿಕ ಅಭಿಪ್ರಾಯ. ತರೂರ್ ಅವರ ಹೇಳಿಕೆಯು ಪಕ್ಷದ ನಿಲುವನ್ನು ಬಿಂಬಿಸುವುದಿಲ್ಲ. ಅವರು ಲಕ್ಷ್ಮಣ ರೇಖೆಯನ್ನು ಉಲ್ಲಂಘಿಸಿದ್ದಾರೆ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

(ಭಾರತ- ಪಾಕಿಸ್ತಾನದೊಂದಿಗೆ ಆರಂಭವಾಗಿದ್ದ ಬಿಕ್ಕಟ್ಟನ್ನು ಪ್ರಧಾನಿ ನರೇಂದ್ರ ಮೋದಿ ಅವರು 'ಚೆನ್ನಾಗಿ ನಿಭಾಯಿಸಿದರು' ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಹೊಗಳಿದ್ದಕ್ಕೆ ಪ್ರತಿಕ್ರಿಯೆ)

ಆಳ-ಅಗಲ
ವ್ಹೀಲಿ: ಬೇಕಿದೆ ಕಠಿಣ ಶಿಕ್ಷೆ
ಸಚಿವ ವಿರುದ್ಧ ಎಫ್‌ಐಆರ್‌ಗೆ ಆದೇಶ 9
ಗ್ರೇಟರ್ ಬೆಂಗಳೂರು: ಜಾರಿ ಇಂದು 3

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,330	24,666	₹1 ಲಕ್ಷ (ಬೆಂಗಳೂರು)	₹1.01 ಲಕ್ಷ (ಬೆಂಗಳೂರು)	85.32

ಊರುಗಳ ಹೆಸರು ಬದಲು ವ್ಯರ್ಥ, ಅಸಂಬದ್ಧ ಯತ್ನ: ಭಾರತ ತಿರುಗೇಟು

ಅರುಣಾಚಲ: ಚೀನಾ ಮತ್ತೆ ಕ್ಯಾತೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಅರುಣಾಚಲ ಪ್ರದೇಶದ 27 ಪ್ರದೇಶಗಳ ಹೆಸರನ್ನು ಬದಲಿಸಿ ಚೀನಾ ಪಟ್ಟಿ ಬಿಡುಗಡೆ ಮಾಡಿದೆ. ಚೀನಾದ ಈ ಕ್ರಮಕ್ಕೆ ಭಾರತವು ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. 'ಇದೊಂದು 'ವ್ಯರ್ಥ' ಮತ್ತು 'ಅಸಂಬದ್ಧ' ಯತ್ನವಾಗಿದೆ. ಈ ಪ್ರದೇಶಗಳು ಹಿಂದೆಯೂ ಭಾರತದ್ದು, ಇಂದು ಮತ್ತು ಮುಂದೆಯೂ ಭಾರತದ್ದೇ ಆಗಿರಲಿವೆ' ಎಂದು ಹೇಳಿದೆ. ಪಾಕಿಸ್ತಾನ ಜೊತೆಗೆ ಸಂಘರ್ಷ ಶಮನವಾದ ಬೆನ್ನಲ್ಲೇ ಚೀನಾ ಈ ಕ್ರಮ ಕೈಗೊಂಡಿದೆ.

ಚೀನಾ ಪಟ್ಟಿ ಬಿಡುಗಡೆ ಮಾಡಿರುವ ಬಗ್ಗೆ ಬುಧವಾರ ನಡೆದ ಮಾಧ್ಯಮಗೋಷ್ಠಿಯಲ್ಲಿ ಕೇಳಿದ ಪ್ರಶ್ನೆಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಉತ್ತರಿಸಿದರು.

'ಬೇರೆ ಬೇರೆ ಹೆಸರುಗಳನ್ನು ಇಡುವುದರಿಂದ ವಾಸ್ತವ ಬದಲಾಗುವುದಿಲ್ಲ. ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗವಾಗಿದ್ದು ಇನ್ನು ಮುಂದೆಯೂ ಹಾಗೆಯೇ ಇರಲಿದೆ' ಎಂದರು.

2020ರಲ್ಲಿ ಗಾಲ್ವನ್ ಸಂಘರ್ಷ ನಡೆದು ಸುಮಾರು ನಾಲ್ಕು ವರ್ಷಗಳ ಬಳಿಕ ಭಾರತ ಮತ್ತು ಚೀನಾದ ಸಂಬಂಧವು ಉತ್ತಮಗೊಳ್ಳುವ ಹಂತದಲ್ಲಿತ್ತು. ತಮ್ಮ ದ್ವಿಪಕ್ಷೀಯ ಸಂಬಂಧವನ್ನು ಉತ್ತಮಗೊಳಿಸಿಕೊಳ್ಳುವ ಬಗ್ಗೆ ಎರಡೂ ದೇಶಗಳು ಹಲವು ಕ್ರಮಗಳನ್ನು ಕೈಗೊಂಡಿದ್ದವು.

ಭಾರತ–ಪಾಕಿಸ್ತಾನ ಸಂಘರ್ಷದ ಸಂದರ್ಭದಲ್ಲಿ, ಪಾಕಿಸ್ತಾನದ ಪರ ನಿಲ್ಲುವುದಾಗಿ ಚೀನಾ ಬಹಿರಂಗವಾಗಿಯೇ ಹೇಳಿತ್ತು.

5ನೇ ಪುಟ ನೋಡಿ

ಐದನೇ ಬಾರಿಗೆ ಪಟ್ಟಿ ಬಿಡುಗಡೆ



ಡಾಂಗ್‌ನಲ್ಲಿ ಸೂರ್ಯ ಹಬ್ಬ: ಇದು ಅರುಣಾಚಲ ಪ್ರದೇಶದಲ್ಲಿರುವ ಒಂದು ಹಳ್ಳಿ. ಸೂರ್ಯ ಉದಯಿಸುವುದು ಭಾರತದಲ್ಲಿ ಮೊದಲು ಕಾಣುವ ಹಳ್ಳಿ ಇದಾಗಿದೆ. ಇದು ಭಾರತ ಮತ್ತು ಟಿಬೆಟ್ ಗಡಿ ಭಾಗದಲ್ಲಿದೆ. ಈಗ ಈ ಹಳ್ಳಿಯಲ್ಲಿ ಪ್ರವಾಸೋದ್ಯಮ ಉತ್ತೇಜಿಸಲು ಇಲ್ಲಿನ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಮುಂದಾಗಿದೆ. ಈ ಹಳ್ಳಿಯಲ್ಲಿ ಸೂರ್ಯಹಬ್ಬವನ್ನು ಆಚರಿಸಲು ಸರ್ಕಾರ ಮುಂದಾಗಿದೆ. ಇದು 2026ರ ಜನವರಿ 1ರಿಂದ ಆರಂಭವಾಗಲಿದೆ ಎನ್ನಲಾಗಿದೆ

ಜಾಂಗ್‌ನ್ಯಾನ್‌ನ (ಅರುಣಾಚಲ ಪ್ರದೇಶಕ್ಕೆ ಚೀನಾ ಇಟ್ಟ ಹೆಸರು) ಕೆಲವು ಪ್ರದೇಶಗಳ ಹೆಸರನ್ನು ಬದಲಾಯಿಸಿದ್ದೇವೆ. ಇದು ಚೀನಾದ ಸಾರ್ವಭೌಮತ್ವದ ಹಕ್ಕಿನ ಅಡಿಯಲ್ಲಿಯೇ ಇದೆ

ಲಿನ್ ಜಿಯಾನ್, ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ

ಭದ್ರತಾ ಸ್ಥಿತಿ: ಸಂಪುಟ ಸಮಿತಿ ಪರಾಮರ್ಶೆ

ಭಾರತ–ಪಾಕಿಸ್ತಾನದ ನಡುವಿನ ಕದನ ವಿರಾಮದ ಬಳಿಕ ಮೊದಲ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭದ್ರತೆ ಕುರಿತ ಸಂಪುಟ ಸಮಿತಿಯ ಸಭೆ ಬುಧವಾರ ನಡೆಯಿತು. 'ಆಪರೇಷನ್ ಸಿಂಧೂರ' ಬಳಿಕದ ಭದ್ರತಾ ಸ್ಥಿತಿಯ ಬಗ್ಗೆ ಚರ್ಚಿಸಲಾಯಿತು.

ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಗೃಹ ಸಚಿವ ಅಮಿತ್ ಶಾ ಭಾಗವಹಿಸಿದ್ದರು. ಪ್ರಸ್ತುತ ಪರಿಸ್ಥಿತಿ ಮತ್ತು ಭಾರತದ ಸನ್ನದ್ಧತೆ ಬಗ್ಗೆ ಚರ್ಚಿಸಿದರು.

ನಂತರ ಪ್ರಧಾನಿ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಸಭೆ ನಡೆಯಿತು. ಪಾಕ್ ಬೆಂಬಲಿತ ಉಗ್ರರ ಸದೆ ಬಡಿಯಲು ನಡೆಸಿದ ಕಾರ್ಯಾಚರಣೆ ಬಗ್ಗೆ ಪ್ರಧಾನಿ ಅವರನ್ನು ಸಚಿವರು ಶ್ಲಾಘಿಸಿದರು.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, 'ಆಪರೇಷನ್ ಸಿಂಧೂರವು ದೇಶದ ಶ್ರೇಷ್ಠ ನಾಯಕತ್ವಕ್ಕೆ ಸಾಕ್ಷ್ಯ. ಸಶಸ್ತ್ರ ಪಡೆಗಳ ಈ ಸಾಧನೆ ದೇಶಕ್ಕೆ ಹೆಮ್ಮೆ ತಂದಿದೆ' ಎಂದರು.

ಪಾಕ್ ಜತೆಗಿನ ಸಂಘರ್ಷ: ದಿನದ ಬೆಳವಣಿಗೆ

- 'ಭಾರತದ ವಿರುದ್ಧದ ಸೇನಾ ಕಾರ್ಯಾಚರಣೆಯನ್ನು ಮಾಜಿ ಪ್ರಧಾನಿ ನವಾಜ್ ಷರೀಫ್ ಮೇಲ್ವಿಚಾರಣೆಯಲ್ಲಿ ರೂಪಿಸಲಾಗಿತ್ತು' ಎಂದು ಪಾಕ್‌ನ ಪಂಜಾಬ್ ಪ್ರಾಂತ್ಯದ ಮಾಹಿತಿ ಸಚಿವೆ ಅಜ್ಮಾ ಬುಖಾರಿ ಹೇಳಿಕೆ
- ಟರ್ಕಿಯ ಐನಾನು ವಿಶ್ವವಿದ್ಯಾಲಯದ ಜೊತೆಗಿನ ಶೈಕ್ಷಣಿಕ ಒಪ್ಪಂದವನ್ನು (ಎಂಒಯು) ರಾಷ್ಟ್ರೀಯ ಭದ್ರತಾ ದೃಷ್ಟಿಯಿಂದ ಅಮಾನತಿನಲ್ಲಿ ಇಡಲಾಗಿದೆ ಎಂದು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಅಧಿಕಾರಿಗಳ ಹೇಳಿಕೆ
- ಭಾರತ ವಿರುದ್ಧದ ದಾಳಿಯಲ್ಲಿ ಪಾಕಿಸ್ತಾನ ಬಳಸಿರುವ ಡ್ರೋನ್‌ಗಳನ್ನು ಟರ್ಕಿ ಪೂರೈಸಿದೆ. ಆದ್ದರಿಂದ ಈ ಎರಡು ದೇಶಗಳಿಂದ ಆಮದಾಗುವ ಸರಕುಗಳಿಗೆ ಕೇಂದ್ರ ಸರ್ಕಾರವು ಬಹಿಷ್ಕಾರ ಹೇರಬೇಕು ಎಂದು ವರ್ತಕರ ವಲಯದ ಒತ್ತಾಯ
- ಪಾಕಿಸ್ತಾನದೊಂದಿಗೆ ಅಪವಿತ್ರ ಮೈತ್ರಿ ಹೊಂದಿರುವ ಟರ್ಕಿ ಮೇಲೆ ಆರ್ಥಿಕ ನಿರ್ಬಂಧ ವಿಧಿಸಬೇಕು' ಎಂದು ಆರ್‌ಎಸ್‌ಎಸ್ ಅಂಗಸಂಸ್ಥೆ ಸ್ವದೇಶಿ ಜಾಗರಣ ಮಂಚ್ (ಎಸ್‌ಜೆಎಂ) ಆಗ್ರಹ
- ಕಾಶ್ಮೀರ ಕಣಿವೆಯ ಬಹುತೇಕ ಭಾಗಗಳಲ್ಲಿ ಬುಧವಾರದಿಂದ ಶಾಲಾ–ಕಾಲೇಜುಗಳು ಪುನರಾರಂಭ

ಮೆರವಣಿಗೆ ಸಂತ ಹಜರತ್ ಖಾಜಾ ಬಂದಾನವಾಜ್ ಉರುಸ್ ಅಂಗವಾಗಿ ಕಲಬುರಗಿಯಲ್ಲಿ ಬುಧವಾರ ಮಹಾನಗರ ಪಾಲಿಕೆ ಉದ್ಯಾನದಿಂದ ದರ್ಗಾವರೆಗೆ ನಡೆದ ಸಂದಲ್ (ಗಂಧ) ಮೆರವಣಿಗೆಯಲ್ಲಿ ಅಪಾರ ಭಕ್ತರು ಪಾಲ್ಗೊಂಡಿದ್ದರು ಚಿತ್ರ :ತಾಜುದ್ದೀನ್ ಆಜಾದ್

ಕೇಂದ್ರದಿಂದ ₹4,195 ಕೋಟಿ ಬಾಕಿ

ಹಣ ಬಿಡುಗಡೆಗೆ ಒತ್ತಡ ಹೇರಲು ಸಂಸದರಿಗೆ ಸಿ.ಎಂ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಪುರಸ್ಕೃತ ಯೋಜನೆಗಳಿಗೆ ನೀಡಬೇಕಿರುವ ₹4,195 ಕೋಟಿ ಬಾಕಿ ಮೊತ್ತವನ್ನು ತಕ್ಷಣ ಬಿಡುಗಡೆ ಮಾಡುವಂತೆ ರಾಜ್ಯದ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬುಧವಾರ ನಡೆದ ರಾಜ್ಯಮಟ್ಟದ 'ದಿಶಾ' ಸಮಿತಿ ಸಭೆಯ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು.

2024-25ನೇ ಸಾಲಿನ 67 ಕೇಂದ್ರ ಪುರಸ್ಕೃತ ಯೋಜನೆಗಳಿಗೆ ರಾಜ್ಯದ ಪಾಲು ₹24,960 ಕೋಟಿ, ಕೇಂದ್ರದ ಪಾಲು ₹22,758 ಕೋಟಿ ಇದೆ. ಕೇಂದ್ರ ₹18,561 ಕೋಟಿ ಬಿಡುಗಡೆ ಮಾಡಿದೆ. 15ನೇ ಹಣಕಾಸು ಆಯೋಗದ ವಿಶೇಷ ಅನುದಾನ ₹5,495 ಕೋಟಿ, ಕೆರೆ ಅಭಿವೃದ್ಧಿ ಮತ್ತು ಫೆರಿಫೆರಲ್ ವರ್ತುಲ ರಸ್ತೆಗೆ ₹11,495 ಕೋಟಿ ಬರಬೇಕಿದೆ. ಭದ್ರಾ ಮೇಲ್ದಂಡೆ ಯೋಜನೆಯ 5,300 ಕೋಟಿ ನೀಡಿಲ್ಲ' ಎಂದರು.

5ನೇ ಪುಟ ನೋಡಿ

ಪಿಂಚಣಿ ಮೊತ್ತಕ್ಕೂ ಕತ್ತರಿ

ಸಾಮಾಜಿಕ ಭದ್ರತಾ ಯೋಜನೆಯ ಫಲಾನುಭವಿಗಳಿಗೆ ನೀಡುವ ಪಿಂಚಣಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುದಾನ ಒದಗಿಸುತ್ತವೆ. 2024–25ನೇ ಸಾಲಿನಲ್ಲಿ ರಾಜ್ಯ ಸರ್ಕಾರ ₹5,665 ಕೋಟಿ, ಕೇಂದ್ರ ಸರ್ಕಾರ ₹559 ಕೋಟಿ ಮೊತ್ತ ನೀಡಬೇಕಿತ್ತು. ಆದರೆ, ಕೇಂದ್ರ ಇದುವರೆಗೂ ₹113.92 ಕೋಟಿಯಷ್ಟೇ ನೀಡಿದೆ ಎಂದು ಸಿದ್ದರಾಮಯ್ಯ ಹೇಳಿದರು.

ವಿಧವಾ ವೇತನ, ವೃದ್ಧಾಪ್ಯ ವೇತನ, ಅಂಗವಿಕಲರ ಪಿಂಚಣಿ ಯೋಜನೆಗಳಿಗೆ ನೀಡುವ ಸಣ್ಣ ಮೊತ್ತವನ್ನೂ ಕೊಡದ ಕೇಂದ್ರ ಎರಡು ವರ್ಷಗಳಿಂದ ಬಾಕಿ ಉಳಿಸಿಕೊಂಡಿದೆ. ಬಡವರ ಬದುಕಿಗೆ ಭದ್ರತೆ ಒದಗಿಸುವ ಯೋಜನೆಯ ಹಣಕ್ಕೂ ಕತ್ತರಿ ಹಾಕಿದರೆ ಹೇಗೆ ಎಂದು ಪ್ರಶ್ನಿಸಿದರು.

ಸಿಜೆಐ ಆಗಿ ಬಿ.ಆರ್. ಗವಾಯಿ ಪ್ರಮಾಣ

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಸುಪ್ರೀಂ ಕೋರ್ಟ್‌ನ 52ನೇ ಮುಖ್ಯನ್ಯಾಯಮೂರ್ತಿಯಾಗಿ (ಸಿಜೆಐ) ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು.

ರಾಷ್ಟ್ರಪತಿ ಭವನದ ಗಣತಂತ್ರ ಮಂಟಪದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, 64 ವರ್ಷದ ನ್ಯಾಯಮೂರ್ತಿ ಗವಾಯಿ ಅವರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಅವರು ಹಿಂದಿಯಲ್ಲಿ ಪ್ರಮಾಣ ಸ್ವೀಕರಿಸಿದರು.

ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರ ನಿವೃತ್ತಿಯಿಂದಾಗಿ ಸಿಜೆಐ ಹುದ್ದೆ ತೆರವಾಗಿತ್ತು. ಸಿಜೆಐ ಆಗಿ ಅಧಿಕಾರ ಸ್ವೀಕರಿಸಿರುವ ನ್ಯಾಯಮೂರ್ತಿ ಗವಾಯಿ ಅವರು ಈ ವರ್ಷದ ನವೆಂಬರ್ 23ರಂದು ನಿವೃತ್ತಿ ಹೊಂದುವರು. ಗವಾಯಿ ಅವರು 2019ರ ಮೇ 24ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಯಾಗಿ ಪದೋನ್ನತಿ ಹೊಂದಿದ್ದರು.

ಪ್ರಮಾಣ ವಚನ ಸ್ವೀಕರಿಸಿದ ನಂತರ ಸಿಜೆಐ ಗವಾಯಿ ಅವರು ತಮ್ಮ ತಾಯಿ ಕಮಲತಾಯಿ ಗವಾಯಿ ಅವರ ಪಾದ ಮುಟ್ಟಿ ನಮಸ್ಕರಿಸಿ, ಆಶೀರ್ವಾದ ಪಡೆದರು. ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ಜೆ.ಪಿ.ನಡ್ಡಾ,ಅರ್ಜುನ ರಾಮ್ ಮೇಘವಾಲ್, ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಉಪಸ್ಥಿತರಿದ್ದರು.



8ನೇ ಪುಟ ನೋಡಿ

'ಪರಿಶ್ರಮ, ಬಡವರ ಸೇವೆ ತುಡಿತಕ್ಕೆ ಸಿಕ್ಕ ಫಲ'

ಅಮರಾವತಿ (ಮಹಾರಾಷ್ಟ್ರ): 'ಕಠಿಣ ಪರಿಶ್ರಮ ಹಾಗೂ ದೃಢಸಂಕಲ್ಪದಿಂದ ಕಾರ್ಯ ನಿರ್ವಹಿಸಿದ್ದು ನನ್ನ ಮಗನ ಈ ಯಶಸ್ಸಿಗೆ ಕಾರಣ. ಬಡವರ ಸೇವೆ ಮಾಡಬೇಕು ಎಂಬ ತುಡಿತದಿಂದ ಸೇವೆ ಸಲ್ಲಿಸಿದ್ದರಿಂದ ಈ ಪ್ರತಿಫಲ ಸಿಕ್ಕಿದೆ' ಎಂದು ಸಿಜೆಐ ಭೂಷಣ್ ಆರ್.ಗವಾಯಿ ಅವರ ತಾಯಿ ಕಮಲತಾಯಿ ಗವಾಯಿ ಬುಧವಾರ ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ್ದ ಅವರು, 'ಹೊಸ ಹುದ್ದೆಗೆ ನನ್ನ ಮಗ ನ್ಯಾಯ ದೊರಕಿಸಿ ಕೊಡುವ ವಿಶ್ವಾಸ ಇದೆ' ಎಂದು ಪ್ರತಿಕ್ರಿಯಿಸಿದ್ದಾರೆ.

8ನೇ ಪುಟ ನೋಡಿ

ಯೋಧನನ್ನು ಹಸ್ತಾಂತರಿಸಿದ ಪಾಕಿಸ್ತಾನ

ಅಮೃತಸರ (ಪಿಟಿಐ): ಪಂಜಾಬ್ ಬಳಿ ಅಂತರಾಷ್ಟ್ರೀಯ ಗಡಿಯಲ್ಲಿ ವಶಕ್ಕೆ ಪಡೆದಿದ್ದ ಬಿಎಸ್‌ಎಫ್ ಯೋಧ ಪೂರ್ಣಂ ಕುಮಾರ್ ಸಾಹು ಅವರನ್ನು ಪಾಕಿಸ್ತಾನ 21 ದಿನಗಳ ಬಳಿಕ ಭಾರತಕ್ಕೆ ಹಸ್ತಾಂತರಿಸಿದೆ.



ಪೂರ್ಣಂ ಕುಮಾರ್

'ಅಮೃತಸರ ಜಿಲ್ಲೆಯಲ್ಲಿನ ಜಂಟಿ ಚೆಕ್‌ಪೋಸ್ಟ್ ಅಟ್ಟಾರಿ–ವಾಘಾದಲ್ಲಿ ಪಾಕಿಸ್ತಾನದ ರೇಂಜರ್‌ಗಳು ಪೂರ್ಣಂ ಅವರನ್ನು ಬುಧವಾರ ಬೆಳಿಗ್ಗೆ 10.30ಕ್ಕೆ ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಹಸ್ತಾಂತರಿಸಿದರು' ಎಂದು ಬಿಎಸ್‌ಎಫ್ ವಕ್ತಾರರು ಹೇಳಿದ್ದಾರೆ. ಫಿರೋಜ್‌ಪುರದ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದ ಸಾಹು ಅವರು ಪಾಕಿಸ್ತಾನ ಗಡಿಯೊಳಗೆ ಏಪ್ರಿಲ್ 23ರಂದು ಆಕಸ್ಮಿಕವಾಗಿ ಪ್ರವೇಶಿಸಿದ್ದರು. ಆಗ ರೇಂಜರ್‌ಗಳು ಅವರನ್ನು ವಶಕ್ಕೆ ಪಡೆದಿದ್ದರು.

ಪಾಕ್ ರೇಂಜರ್ ಬಿಡುಗಡೆ (ಲಾಹೋರ್ ವರದಿ): ಬಿಎಸ್‌ಎಫ್ ಯೋಧನನ್ನು ಬಿಡುಗಡೆಗೊಳಿಸಿದ್ದಕ್ಕೆ ಪ್ರತಿಯಾಗಿ ಭಾರತವು ಪಾಕಿಸ್ತಾನದ ರೇಂಜರ್‌ನನ್ನು ಹಸ್ತಾಂತರಿಸಿದೆ.

ಭಾರತದ ಗಡಿಯೊಳಗೆ ಪ್ರವೇಶಿಸಿದ್ದ ಮುಹಮ್ಮದುಲ್ಲಾ ಅವರನ್ನು ಬಿಎಸ್‌ಎಫ್ ಬಂಧಿಸಿತ್ತು.

ಬಿಎಸ್‌ಎಫ್ ಯೋಧ ಪೂರ್ಣಂ ಅವರನ್ನು ವಾಘಾ–ಅಟ್ಟಾರಿ ಗಡಿಯಲ್ಲಿ ಪಾಕಿಸ್ತಾನ ಹಸ್ತಾಂತರಿಸಿದ ಸಂದರ್ಭದಲ್ಲಿಯೇ ಮುಹಮ್ಮದುಲ್ಲಾ ಅವರನ್ನು ಬಿಎಸ್‌ಎಫ್ ಹಸ್ತಾಂತರಿಸಿತು.

ವೈದ್ಯರು, ಶುಶ್ರೂಷಕರ ವೇತನ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಮಿಷನ್ (ಎನ್‌ಎಚ್‌ಎಂ) ಯೋಜನೆಯಡಿ ಕಾರ್ಯ ನಿರ್ವಹಿಸುವ ವೈದ್ಯರ ಹಾಗೂ ಶುಶ್ರೂಷಕರ ವೇತನವನ್ನು ಆರೋಗ್ಯ ಇಲಾಖೆಯು ಹೆಚ್ಚಳ ಮಾಡಿದ್ದು, ಇದು ಹೊಸದಾಗಿ ನೇಮಕವಾಗುವವರಿಗೆ ಮಾತ್ರ ಅನ್ವಯವಾಗಲಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಎನ್‌ಎಚ್‌ಎಂ ಯೋಜನೆಯಡಿ ಮಂಜೂರಾಗಿದ್ದ 1,398 ಎಂಬಿಬಿಎಸ್ ವೈದ್ಯರ ಹುದ್ದೆಗಳಲ್ಲಿ 579 ಹುದ್ದೆಗಳು, 899 ತಜ್ಞ ವೈದ್ಯರ ಹುದ್ದೆಗಳಲ್ಲಿ 305 ಹುದ್ದೆಗಳು ಹಾಗೂ 9,041 ಶುಶ್ರೂಷಕರ ಹುದ್ದೆಗಳಲ್ಲಿ 936 ಹುದ್ದೆಗಳು ಖಾಲಿ ಉಳಿದಿವೆ. ವೇತನ ಕಡಿಮೆ ಎಂಬ ಕಾರಣಕ್ಕೆ ಅರ್ಹ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಬರುತ್ತಿಲ್ಲ. ಆದ್ದರಿಂದ ವೇತನ ಪರಿಷ್ಕರಿಸಿ, ಖಾಲಿ ಹುದ್ದೆಗಳ ನೇಮಕಾತಿಗೆ ಕ್ರಮ ವಹಿಸಲಾಗಿದೆ' ಎಂದು ತಿಳಿಸಿದರು.

8ನೇ ಪುಟ ನೋಡಿ

'ಶೀಘ್ರ ವೇತನ ಪಾವತಿ'

'ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ವಿಳಂಬವಾದ್ದರಿಂದ ಎನ್‌ಎಚ್‌ಎಂ ಅಡಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಹಾಗೂ ಹೊರಗುತ್ತಿಗೆ ಸಿಬ್ಬಂದಿಗೆ ಎರಡು ತಿಂಗಳ ವೇತನ ಪಾವತಿಯಾಗಿಲ್ಲ. ಈ ಸಂಬಂಧ ಕೇಂದ್ರ ಆರೋಗ್ಯ ಸಚಿವಾಲಯದ ಅಧಿಕಾರಿಗಳ ಜತೆಗೆ ಮಾತುಕತೆ ನಡೆಸಲಾಗಿದೆ. ಎರಡು ಮೂರು ದಿನಗಳಲ್ಲಿ ಹಣ ಬಿಡುಗಡೆಯಾಗಲಿದ್ದು, ಶೀಘ್ರವೇ ವೇತನ ಪಾವತಿಸಲಾಗುವುದು' ಎಂದು ದಿನೇಶ್ ಗುಂಡೂರಾವ್ ಭರವಸೆ ನೀಡಿದರು.

8ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಬಿ– ಖಾತಾ: 3 ತಿಂಗಳು ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಮಹಾನಗರ ಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಅನಧಿಕೃತ ಕಟ್ಟಡ ಮತ್ತು ನಿವೇಶನಗಳಿಗೆ ಬಿ–ಖಾತಾ ನೀಡುವ ಅವಧಿಯನ್ನು ಇನ್ನೂ ಮೂರು ತಿಂಗಳು ವಿಸ್ತರಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್ ತಿಳಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಅವರು, ಯಾವುದೇ ಪರವಾನಗಿ ಇಲ್ಲದೇ, ಭೂಪರಿವರ್ತನೆ ಮಾಡಿಸಿಕೊಳ್ಳದೇ, ನಕ್ಷೆ ಮಂಜೂರಾತಿ ಮಾಡಿಕೊಳ್ಳದೇ ಕಂದಾಯ ನಿವೇಶನಗಳಲ್ಲಿ ಕಟ್ಟಡಗಳನ್ನು ನಿರ್ಮಿಸಿದ್ದರೆ ಅಂತಹವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಬಿ–ಖಾತಾ ನೀಡಿ ಸಕ್ರಮಗೊಳಿಸಲು ನಿರ್ಣಯಿಸಲಾಗಿತ್ತು ಎಂದು ಅವರು ಹೇಳಿದ್ದಾರೆ.

ನಾಗರಿಕರಿಗೆ ಒಂದು ಬಾರಿಯ ಅವಕಾಶವನ್ನು ಮೇ 10ರವರೆಗೆ ನೀಡಲಾಗಿತ್ತು. ವಿವಿಧ ಮಹಾನಗರ ಪಾಲಿಕೆಗಳು ಮತ್ತು ನಗರ ಪ್ರದೇಶಗಳಲ್ಲಿ 30 ಲಕ್ಷಕ್ಕೂ ಅಧಿಕ ಇಂತಹ ಅನಧಿಕೃತ ಕಟ್ಟಡಗಳು, ಮನೆಗಳು, ನಿವೇಶನಗಳಿವೆ. ಈವರೆಗೆ ಸುಮಾರು 10 ಲಕ್ಷ ಆಸ್ತಿಗಳಿಗೆ ಬಿ–ಖಾತಾ ಕೋರಿ ಅರ್ಜಿ ಸಲ್ಲಿಕೆಯಾಗಿದೆ. ಈ ಪೈಕಿ 2 ಲಕ್ಷ ಆಸ್ತಿಗಳಿಗೆ ಬಿ–ಖಾತೆಗಳನ್ನು ವಿತರಿಸಲಾಗಿದೆ. ಉಳಿದ ಅರ್ಜಿಗಳ ಪರಿಶೀಲನೆ ನಡೆಯುತ್ತಿದ್ದು, ಹಂತಹಂತವಾಗಿ ಬಿ–ಖಾತಾ ವಿತರಿಸಲಾಗುವುದು ಎಂದಿದ್ದಾರೆ.

ಜಿಪಿಎ, ಕರಾರುದಾರರಿಗೂ ಸೌಲಭ್ಯ: ನಿವೇಶನ ಅಥವಾ ಕಟ್ಟಡಗಳನ್ನು ಖರೀದಿಸಲು ಮುಂದಾಗಿ ಜಿಪಿಎ ಅಥವಾ ಒಪ್ಪಂದ ಮಾಡಿಕೊಂಡಿರುವ ನಾಗರಿಕರಿಗೂ ಬಿ–ಖಾತಾ ವಿತರಣೆ ಮಾಡುವ ಬಗ್ಗೆ ಗಂಭೀರ ಚಿಂತನೆ ನಡೆಸಲಾಗಿದೆ ಎಂದು ಸಚಿವ ಸುರೇಶ್ ತಿಳಿಸಿದ್ದಾರೆ.

'ಈ ಸಂಬಂಧ ಸದ್ಯದಲ್ಲೇ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು. ಇದರಿಂದ ಜಿಪಿಎ ಅಥವಾ ಕರಾರುದಾರರಿಗೂ ಅನುಕೂಲವಾಗಲಿದೆ' ಎಂದಿದ್ದಾರೆ.

ಆನ್‌ಲೈನ್ ಜೂಜು, ಮೋಜಿಗೆ ದುಂದುವೆಚ್ಚ: ಸಿಕ್ಕಿಬಿದ್ದ ಅಧಿಕಾರಿ

ಕೆಲಸ ಮಾಡುತ್ತಿದ್ದ ಬ್ಯಾಂಕ್ ಚಿನ್ನಕ್ಕೇ ಕನ್ನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕೆಲಸ ಮಾಡುತ್ತಿದ್ದ ಬ್ಯಾಂಕ್‌ನಲ್ಲಿ ಗ್ರಾಹಕರು ಅಡ ಇರಿಸಿದ್ದ ಚಿನ್ನಾಭರಣವನ್ನು ಕದ್ದು ಬೇರೆ ಬ್ಯಾಂಕ್‌ಗಳಲ್ಲಿ ಅಡವಿಟ್ಟು ₹2 ಕೋಟಿಗೂ ಅಧಿಕ ಸಾಲ ಪಡೆದು 'ಲಕ್ಕಿ ಭಾಸ್ಕರ' ಸಿನಿಮಾ ನಾಯಕನಂತೆ ದಿಢೀರ್ ಶ್ರೀಮಂತನಾಗಲು ಯತ್ನಿಸಿದ ಬ್ಯಾಂಕ್ ಅಧಿಕಾರಿಯೊಬ್ಬರು ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ನಗರದ ಕ್ಯಾಥೊಲಿಕ್ ಸಿರಿಯನ್ ಬ್ಯಾಂಕ್‌ನ ಚಿನ್ನಾಭರಣ ಸಾಲ ವಿಭಾಗದ ಅಧಿಕಾರಿ ಟಿ.ಪಿ. ಸಂಜಯ್ (33) ಬಂಧಿತ ಆರೋಪಿ. ತಾನು ಕೆಲಸ ಮಾಡುತ್ತಿದ್ದ ಬ್ಯಾಂಕ್‌ನಿಂದ ಚಿನ್ನಾಭರಣ ಕದ್ದು, ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಖಾಸಗಿ ಫೈನಾನ್ಸ್ ಕಂಪನಿಯಲ್ಲಿ ಅಡವಿಟ್ಟಿದ್ದರು. ಹೀಗೆ ಬೇರೆ ಬ್ಯಾಂಕ್‌ಗಳಲ್ಲಿ ಅಡವಿಟ್ಟಿದ್ದ 3 ಕೆ.ಜಿ 643 ಗ್ರಾಂ ಚಿನ್ನಾಭರಣವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಜೊತೆಗೆ, ಉದ್ಯೋಗದಲ್ಲಿದ್ದ ಬ್ಯಾಂಕಿನಲ್ಲಿ ಸ್ನೇಹಿತರು ಹಾಗೂ ಸಂಬಂಧಿಕರ ಹೆಸರಿನಲ್ಲಿ 2 ಕೆ.ಜಿ. 744 ಗ್ರಾಂ ನಕಲಿ ಚಿನ್ನಾಭರಣ ವನ್ನು ತಾನೇ ಅಡವಿಟ್ಟುಕೊಂಡು ₹1.52 ಕೋಟಿ ಸಾಲ ಪಡೆದಿದ್ದ ಸಂಗತಿ ಕೂಡ ತನಿಖೆ ವೇಳೆ ಬೆಳಕಿಗೆ ಬಂದಿದೆ.

'ಆರೋಪಿ 2024ರ ಅಕ್ಟೋಬರ್‌ನಿಂದ ಕ್ಯಾಥೊಲಿಕ್ ಸಿರಿಯನ್ ಬ್ಯಾಂಕ್‌ನ ಚಿನ್ನ ಸಾಲದ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ಚಿನ್ನಾಭರಣವನ್ನು ಪರಿಶೀಲಿಸಿ ಅಡವಿಟ್ಟುಕೊಂಡು ದಾಖಲೆಗಳನ್ನು ಸೃಜಿಸುವುದು ಆರೋಪಿಯ ಜವಾಬ್ದಾರಿಯಾಗಿತ್ತು. ಇದೇ ಅವಕಾಶವನ್ನು ಬಳಸಿಕೊಂಡು ಅಸಲಿ ಚಿನ್ನಾಭರಣವನ್ನು 6 ತಿಂಗಳಲ್ಲಿ ಹಂತಹಂತವಾಗಿ ಕಳವು ಮಾಡಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಕಳವು ಮಾಡಿದ ಚಿನ್ನವನ್ನು ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಖಾಸಗಿ ಫೈನಾನ್ಸ್‌ನಲ್ಲಿ ತಂದೆ, ತಾಯಿ ಹಾಗೂ ತನ್ನ ಹೆಸರಿನಲ್ಲಿ ಅಡವಿಟ್ಟು ಕೋಟ್ಯಂತರ ರೂಪಾಯಿ ಸಾಲ ಪಡೆದಿದ್ದರು. ಆನ್‌ಲೈನ್ ಜೂಜು ಹಾಗೂ ಮೋಜು–ಮಸ್ತಿಗೆ ಬಹುತೇಕ ಹಣವನ್ನು ಖರ್ಚು ಮಾಡಿದ್ದಾರೆ. ಗೋವಾ ಮತ್ತಿತರ ಕಡೆ ಪ್ರವಾಸಕ್ಕೆ ತೆರಳಿ ದುಂದುವೆಚ್ಚ ಮಾಡಿದ್ದಾರೆ' ಎಂದು ವಿವರಿಸಿದರು.

'ಬ್ಯಾಂಕ್‌ನ ಅಧಿಕಾರಿಗಳು ಏಪ್ರಿಲ್‌ನಲ್ಲಿ ಚಿನ್ನಾಭರಣ ಸಾಲದ ಲೆಕ್ಕ ಪರಿಶೋಧನೆ ನಡೆಸಿದಾಗ ಗ್ರಾಹಕರು ಅಡವಿಟ್ಟಿದ್ದ ಚಿನ್ನ ಕಳವಾಗಿರುವುದು ಗೊತ್ತಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿದ ಇತರ ಅಧಿಕಾರಿಗಳು ಕೆ.ಟಿ.ಜೆ ನಗರ ಠಾಣೆಯ ಮೆಟ್ಟಿಲೇರಿದ್ದರು. ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳವು ಮಾಡಿದ ಚಿನ್ನಾಭರಣವನ್ನು ಬೇರೆಡೆ ಅಡವಿಟ್ಟದ್ದು ಗೊತ್ತಾಯಿತು. ನ್ಯಾಯಾಲಯದ ಅನುಮತಿ ಪಡೆದು ಆಯಾ ಬ್ಯಾಂಕ್‌ಗಳು ಮತ್ತು ಫೈನಾನ್ಸ್ ಕಂಪನಿಗಳಿಂದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಅವರು ವಿವರಿಸಿದರು.

ಬಿಸಿಎ ಪದವೀಧರನಾಗಿರುವ ಆರೋಪಿ ಸಂಜಯ್, ಇದಕ್ಕಿಂತ ಮೊದಲು ಖಾಸಗಿ ಫೈನಾನ್ಸ್ ಕಂಪನಿಗಳಲ್ಲಿ ಚಿನ್ನಾಭರಣ ಸಾಲ ಅಡವಿಟ್ಟುಕೊಳ್ಳುವ ಕೆಲಸ ಮಾಡುತ್ತಿದ್ದರು. ಕಳೆದ ವರ್ಷವಷ್ಟೇ ಆರೋಪಿಗೆ ಕ್ಯಾಥೊಲಿಕ್ ಸಿರಿಯನ್ ಬ್ಯಾಂಕ್‌ನಲ್ಲಿ ಉದ್ಯೋಗ ದೊರೆತಿತ್ತು. ಕಡಿಮೆ ಅವಧಿಯಲ್ಲಿ ಹೆಚ್ಚಿನ ಪ್ರಮಾಣದ ಚಿನ್ನಾಭರಣ ಅಡ ಇರಿಸಿಕೊಂಡು ಸಾಲ ವಿತರಿಸಿದ ಬಗ್ಗೆ ಬ್ಯಾಂಕ್ ಮೆಚ್ಚುಗೆ ಸೂಚಿಸಿತ್ತು. ಕೃತ್ಯದ ಬಗ್ಗೆ ಅನುಮಾನ ಮೂಡದಂತೆ ಆರೋಪಿ ವರ್ತಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಹಂತಹಂತವಾಗಿ 6 ತಿಂಗಳಲ್ಲಿ ಚಿನ್ನಾಭರಣ ಕಳವು
- ಚಿನ್ನ ಸಾಲದ ಲೆಕ್ಕ ಪರಿಶೋಧನೆ ವೇಳೆ ಕೃತ್ಯ ಬಯಲು
- ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳಿಂದ ಸಿಕ್ಕಿತು ಕಳ್ಳತನದ ಸುಳಿವು

ನಕಲಿ ಚಿನ್ನ ಅಡವಿಟ್ಟು ಸಾಲ

ಟಿ.ಪಿ.ಸಂಜಯ್

ಆರೋಪಿಯು ಅತ್ಯಂತ ಕಡಿಮೆ ಅವಧಿಯಲ್ಲಿ ಬ್ಯಾಂಕ್‌ನ ಎಲ್ಲ ಅಧಿಕಾರಿಗಳ ವಿಶ್ವಾಸ ಗಳಿಸಿದ್ದರು. ಚಿನ್ನಾಭರಣ ಸಾಲಕ್ಕೆ ಸಂಬಂಧಿಸಿದ ಎಲ್ಲ ಜವಾಬ್ದಾರಿಯನ್ನು ಪಡೆದುಕೊಂಡಿದ್ದರು. ಇದೇ ಅವಕಾಶವನ್ನು ಬಳಸಿಕೊಂಡು ನಕಲಿ ಚಿನ್ನವನ್ನು ಅಡವಿಟ್ಟುಕೊಂಡು ತಾನೇ ಸಾಲ ಪಡೆದಿದ್ದ ಸಂಗತಿ ತನಿಖೆಯ ವೇಳೆ ಪತ್ತೆಯಾಗಿದೆ.

'ಸ್ನೇಹಿತರು ಹಾಗೂ ಸಂಬಂಧಿಕರ ಹೆಸರಿನಲ್ಲಿ ಹಂತ–ಹಂತವಾಗಿ ನಕಲಿ ಚಿನ್ನಾಭರಣಗಳನ್ನು ತನ್ನದೇ ಬ್ಯಾಂಕಿನಲ್ಲಿ ಅಡವಿಟ್ಟುಕೊಂಡಿ ದ್ದರು. ಚಿನ್ನಾಭರಣ ಪರಿಶೀಲನೆ, ದಾಖಲೆಗಳ ಸೃಷ್ಟಿಯ ಕೆಲಸವನ್ನು ನಿರ್ವಹಿಸಿದ್ದರು' ಎಂದು ಪೊಲೀಸರು ವಿವರಿಸಿದ್ದಾರೆ.

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ರಾಜ್ಯದ ಉಪ ಮುಖ್ಯಮಂತ್ರಿ,
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು,
ಕನ್ನಡಿಗರ ಭರವಸೆಯ ನಾಯಕರಾದ
ಶ್ರೀ ಡಿ.ಕೆ.ಶಿವಕುಮಾರ್
ಅವರಿಗೆ
ಜನ್ಮದಿನದ
ಹಾರ್ದಿಕ ಶುಭಾಶಯಗಳು.
ಎ ಬರ್ತಲೋಮ್
ಕಾಂಗ್ರೆಸ್ ಮುಖಂಡರು
ಕೆಪಿಸಿಸಿ ಮಾಜಿ ಪ್ರಧಾನ ಕಾರ್ಯದರ್ಶಿಗಳು
ಅಧ್ಯಕ್ಷರು - ಫೋರಂ ಆಫ್ ಇಂಡಿಯನ್ ಕ್ರಿಶ್ಚಿಯನ್ ಅಸೋಸಿಯೇಷನ್

ಹಂತ ಹಂತವಾಗಿ ಅಸ್ತಿತ್ವ ಕಳೆದುಕೊಳ್ಳಲಿರುವ 17 ವರ್ಷಗಳ ಬಿಬಿಎಂಪಿ

ಗ್ರೇಟರ್ ಬೆಂಗಳೂರು: ಜಾರಿ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ'ಯನ್ನು ಮೇ 15ರಂದು ಜಾರಿಗೊಳಿಸುವಂತೆ ನಗರಾಭಿವೃದ್ಧಿ ಇಲಾಖೆ ಬುಧವಾರ ಅಧಿಸೂಚನೆ ಹೊರಡಿಸಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಆಡಳಿತ ವಹಿಸಿಕೊಳ್ಳುವವರೆಗೆ ಬಿಬಿಎಂಪಿ ಮುಂದುವರಿಯಲಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಜಾರಿಯಾದ ಮೇಲೆ ಮುಖ್ಯಮಂತ್ರಿಯವರ ನೇತೃತ್ವದ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) 120 ದಿನಗಳಲ್ಲಿ ರಚನೆಯಾಗಲಿದೆ. ಆಡಳಿತಾಧಿಕಾರಿ ನೇಮಕಗೊಳ್ಳಲಿದ್ದಾರೆ. ಗ್ರೇಟರ್ ಬೆಂಗಳೂರು ಪ್ರದೇಶ (ಜಿಬಿಎ) ಗಡಿಗುರುತು ನಡೆಯಲಿದೆ. ಆನಂತರ ನಿಧಾನವಾಗಿ ಬಿಬಿಎಂಪಿ ಅಸ್ತಿತ್ವ ಕಳೆದುಕೊಳ್ಳಲಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಶಾಸಕರು–ಸಚಿವರು, ನಗರಾಭಿವೃದ್ಧಿ ಸಚಿವರು, ಪಾಲಿಕೆಗಳ ಮೇಯರ್‌ಗಳು, ಬಿಡಿಎ ಆಯುಕ್ತ, ಬೆಂಗಳೂರು ಜಲಮಂಡಳಿ ಅಧ್ಯಕ್ಷ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ, ಕಂದಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಪೊಲೀಸ್ ಕಮಿಷನರ್, ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ, ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ನಿರ್ದೇಶಕ, ನಗರ ಭೂಸಾರಿಗೆ ನಿರ್ದೇಶನಾಲಯದ ಆಯುಕ್ತ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮಹಾನಗರ ಆಯುಕ್ತ ಸದಸ್ಯರಾಗಲಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಆಡಳಿತಾಧಿಕಾರಿ ನೇಮಕವಾದ ಮೇಲೆ ಕಾಯ್ದೆಗೆ ಅನುಗುಣವಾಗಿ ನಗರ ಪಾಲಿಕೆಗಳ ನಿಯಮಗಳು, ಕಾನೂನಿನ ಉಪಬಂಧಗಳು ರಚನೆಯಾಗಲಿವೆ. ನಗರ ಪಾಲಿಕೆಗಳಡಿ ಕಾರ್ಯನಿರ್ವಹಿಸುವ ಪ್ರಾಧಿಕಾರಗಳಿಗೆ ನಿಯಮಗಳನ್ನು ಜಾರಿ ಮಾಡಿ, ಕರ್ತವ್ಯ, ಪ್ರಕಾರ್ಯಗಳನ್ನು ನಿಗದಿಪಡಿಸಲಾಗುವುದು.

ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಕಾರ್ಯಗಳನ್ನು ಆಡಳಿತಾಧಿಕಾರಿ ನಿರ್ವಹಿಸುವಾಗ, ಸರ್ಕಾರದ ನಿರ್ದೇಶನ, ಮಾರ್ಗದರ್ಶನ ಪಡೆಯಬೇಕು. ಯಾವುದೇ ಕಾರ್ಯನೀತಿಯ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಉದ್ಭವಿಸಿದರೆ ಸರ್ಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಕಲಂ 131ರಲ್ಲಿ ಹೇಳಲಾಗಿದೆ. ಆಡಳಿತಾಧಿಕಾರಿ ಮೂಲಕ ಸರ್ಕಾರವೇ ಎಲ್ಲವನ್ನೂ ನಿಯಂತ್ರಿಸಲಿದೆ.

ವ್ಯಾಪ್ತಿ: ನಗರದ ಕೈಗಾರಿಕಾ ಪ್ರದೇಶಗಳಲ್ಲದೆ ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಜಿಗಣಿ ಕೈಗಾರಿಕೆ ಪ್ರದೇಶ, ಬೊಮ್ಮಸಂದ್ರ, ಸರ್ಜಾಪುರ, ಬಾಗಲೂರು, ರಾಜಾನುಕುಂಟೆ, ಹೆಸರಘಟ್ಟ, ದಾಸನಪುರ, ಮಾಕಳಿ, ತಾವರೆಕೆರೆ, ಕುಂಬಳಗೋಡು, ಕಗ್ಗಲಿಪುರ, ಹಾರೋಹಳ್ಳಿಯನ್ನು 'ಗ್ರೇಟರ್ ಬೆಂಗಳೂರು ಪ್ರದೇಶ'ಕ್ಕೆ ಸೇರಿಸಿಕೊಂಡು ಕನಿಷ್ಠ ಮೂರು ಪಾಲಿಕೆ ರಚನೆಯಾಗುವ ಸಾಧ್ಯತೆ ಇದೆ.

ಯಾವುದೇ ಬದಲಾವಣೆ ಇಲ್ಲ

ತೆರಿಗೆ ಪಾವತಿ, ವ್ಯಾಪ್ತಿ, ಅಧಿಕಾರಿಗಳ ಕರ್ತವ್ಯಗಳಲ್ಲಿ ಚಲಾವಣೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಜಿಬಿಎ ಜಾರಿಯಾದ ಮೇಲೆ ಹಂತಹಂತವಾಗಿ ಅಧಿಸೂಚನೆ ಹೊರಡಿಸಿ ಒಂದೊಂದೇ ಯೋಜನೆಗಳು 'ಜಿಬಿಎ'ಯೊಂದಿಗೆ ಜೋಡಣೆಯಾಗಲಿವೆ ಎಂದುತಿಳಿಸಿದ್ದಾರೆ.

ಬಿಬಿಎಂಪಿ ಪ್ರದೇಶವನ್ನು ಗ್ರೇಟರ್ ಬೆಂಗಳೂರು ಪ್ರದೇಶವೆಂದು ಮೇ 15ರಂದು ಅಧಿಸೂಚನೆ ಹೊರಡಿಸಲಾಗುವುದು. ಗ್ರೇಟರ್ ಬೆಂಗಳೂರು ಪೂರ್ಣಗೊಳ್ಳುವವರೆಗೆ ಜಿಬಿಎ ಕಾಯ್ದೆಯ ಕಲಂ 7(5) ಮತ್ತು ಕಲಂ 360ರಲ್ಲಿ ಪ್ರದತ್ತವಾದ ಅಧಿಕಾರದ ಅನ್ವಯ ಬಿಬಿಎಂಪಿ ಅಧಿಕಾರ ಮತ್ತು ಕರ್ತವ್ಯಗಳನ್ನು ಸಂಬಂಧಿತ ಅಧಿಕಾರಿಗಳು ಚಲಾಯಿಸುತ್ತಾರೆ ಎಂದು ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ ಗುರುವಾರ ಜಾರಿಗೆ ಬರಲಿದೆ. ಸದ್ಯ ಆಡಳಿತದಲ್ಲಿ ಬದಲಾವಣೆಗಳಿಲ್ಲ. ಮುಂದೆ ಹಂತ ಹಂತವಾಗಿ ಬದಲಾವಣೆಗಳಾಗಬಹುದು

ಎಂ. ಮಹೇಶ್ವರ ರಾವ್
ಮುಖ್ಯ ಆಯುಕ್ತ, ಬಿಬಿಎಂಪಿ

ಸಿಬ್ಬಂದಿಗೆ ಮುಖ್ಯ ಆಯುಕ್ತ ಮಹೇಶ್ವರ ರಾವ್ ಸೂಚನೆ

ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಪಾದಚಾರಿ ಮಾರ್ಗ ಒತ್ತುವರಿಯಾಗಿರುವುದನ್ನು ಗುರುತಿಸಿ ತೆರವು ಕಾರ್ಯ ಕೈಗೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೊಮ್ಮನಹಳ್ಳಿ ವಲಯದ ವ್ಯಾಪ್ತಿಯ ಬೊಮ್ಮನಹಳ್ಳಿ ಮೆಟ್ರೊ ನಿಲ್ದಾಣದಿಂದ ಹೊಂಗಸಂದ್ರ ಮೆಟ್ರೊ ನಿಲ್ದಾಣದವರೆಗೆ ಪಾದಚಾರಿ ಮಾರ್ಗಗಳನ್ನು ಪರಿಶೀಲನೆ ನಡೆಸಿದರು.

ಒತ್ತುವರಿ ಮಾಡಿರುವ ಕಟ್ಟಡ ಮಾಲೀಕರು ಹಾಗೂ ಬೀದಿ ಬದಿ ವ್ಯಾಪಾರಿಗಳಿಗೆ ನೋಟಿಸ್ ಜಾರಿಗೊಳಿಸಬೇಕು. ಜೊತೆಗೆ ದಂಡ ವಿಧಿಸಬೇಕು ಎಂದು ಸೂಚಿಸಿದರು.

ವಿಜಯಲಕ್ಷ್ಮಿ ಟಿಂಬರ್ಸ್ ಹತ್ತಿರದ ಬೆಸ್ಕಾಂ ವಿದ್ಯುತ್ ಪರಿವರ್ತಕಕ್ಕೆ ಹಾಗೂ ಗೋಡೆಗೆ ಅನಧಿಕೃತವಾಗಿ ಭಿತ್ತಿ ಪತ್ರಗಳನ್ನು ಅಂಟಿಸಲಾಗಿದ್ದು ಅವುಗಳನ್ನು ತೆರವುಗೊಳಿಸಬೇಕು ಎಂದು ಹೇಳಿದರು. ಪಾದಚಾರಿ ಮಾರ್ಗದಲ್ಲಿ ಜೆಸಿಬಿ ಹಾಗೂ ವಾಹನ ನಿಲುಗಡೆ ಮಾಡಿರುವುದನ್ನು ಕಂಡ ಮುಖ್ಯ ಆಯುಕ್ತರು ನೋಟಿಸ್ ನೀಡಿ ದಂಡ ವಿಧಿಸುವಂತೆ ತಿಳಿಸಿದರು.

ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ಎಂ. ಮಹೇಶ್ವರರಾವ್ ಪಾದಚಾರಿ ಮಾರ್ಗಗಳನ್ನು ಪರಿಶೀಲನೆ ನಡೆಸಿದರು

ರಸ್ತೆಯಲ್ಲಿ ನೀರು ನಿಂತರೆ ರಸ್ತೆ ಹಾಳಾಗುತ್ತವೆ. ವಾಹನ ಸಂಚಾರಕ್ಕೆ ತೊಡಕಾಗುತ್ತದೆ. ಪಾದಚಾರಿ ಮಾರ್ಗದಲ್ಲಿ ನೀರು ನಿಂತರೆ ಡೆಂಗಿ ಹರಡುವ ಸಾಧ್ಯತೆ ಇರುತ್ತದೆ. ಚರಂಡಿಗಳನ್ನು ಸ್ವಚ್ಛಗೊಳಿಸಿ ನೀರು ನಿಲ್ಲದಂತೆ ಕ್ರಮ ವಹಿಸಬೇಕು. ಕಟ್ಟಡ ತ್ಯಾಜ್ಯವನ್ನು ತಂದು ರಸ್ತೆ ಬದಿಯಲ್ಲಿ ಸುರಿಯುವವರಿಗೆ ದಂಡ ವಿಧಿಸಬೇಕು ಎಂದು ಹೇಳಿದರು.

ಆಕ್ಸ್‌ಫರ್ಡ್ ಎಂಜಿನಿಯರಿಂಗ್ ಕಾಲೇಜು ಮುಂಭಾಗದಲ್ಲಿರುವ ದೊಡ್ಡ ಮೋರಿಯ ದುರ್ವಾಸನೆಯಿಂದ ಕೂಡಿದ ತ್ಯಾಜ್ಯವು ರಸ್ತೆಗೆ ಹರಡಿಕೊಂಡಿದ್ದು, ಸ್ವಚ್ಛಗೊಳಿಸಲು ಸೂಚಿಸಿದರು.

ಬೊಮ್ಮನಹಳ್ಳಿ ವಲಯ ಆಯುಕ್ತೆ ರಮ್ಯಾ, ಜಂಟಿ ಆಯುಕ್ತ ಅಜಿತ್ ಎಂ., ಮುಖ್ಯ ಎಂಜಿನಿಯರ್ ಶಶಿಕುಮಾರ್ ಭಾಗವಹಿಸಿದ್ದರು.

ವಿನಯ ಕುಲಕರ್ಣಿ ಅರ್ಜಿಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣ ವಂಚಿಸಿದ ಆರೋಪದಡಿ ಐಶ್ವರ್ಯಾ ಗೌಡ ಅಲಿಯಾಸ್ ನವ್ಯಶ್ರೀ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ನನಗೂ ಜಾರಿಗೊಳಿಸಿರುವ ಸಮನ್ಸ್ ರದ್ದುಪಡಿಸಬೇಕು' ಎಂದು ಕೋರಿ ಶಾಸಕ ವಿನಯ್ ಕುಲಕರ್ಣಿ ಸಲ್ಲಿಸಿರುವ ಅರ್ಜಿಗೆ ಇ.ಡಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಕುರಿತಂತೆ ಸಮನ್ಸ್ ರದ್ದು ಕೋರಿ ವಿನಯ ಕುಲಕರ್ಣಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ವಿನಯ ಕುಲಕರ್ಣಿ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ. ಚೌಟ, 'ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ–2002ರ (ಪಿಎಂಎಲ್‌ಎ) ಅಡಿಯಲ್ಲಿ ಅಧಿಕಾರ ಹೊಂದಿರುವ ಸಕ್ಷಮ ಪ್ರಾಧಿಕಾರದ ಅಧಿಕಾರಿಯು ವಿನಯ್ ಕುಲಕರ್ಣಿ ಅವರಿಗೆ ಸಮನ್ಸ್ ಜಾರಿ ಮಾಡಿಲ್ಲ. ಸಮನ್ಸ್‌ನಲ್ಲಿ ಮೂಲ ಅಪರಾಧ ಯಾವುದು ಎಂಬುದನ್ನೂ ಹೇಳಲಾಗಿಲ್ಲ. ಐಶ್ವರ್ಯಾ ಗೌಡ ರಿಮ್ಯಾಂಡ್ ಅರ್ಜಿಯಲ್ಲಿಯೂ ವಿನಯ್ ಕುಲಕರ್ಣಿ ಬಗ್ಗೆ ಯಾವುದೇ ಉಲ್ಲೇಖವಿಲ್ಲ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಇ.ಡಿ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, 'ಇ.ಡಿ ಸಮನ್ಸ್ ಅನ್ನು ಪ್ರಶ್ನಿಸುವಂತಿಲ್ಲ ಎಂದು ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ ಈಗಾಗಲೇ ನೀಡಿರುವ ಆದೇಶದ ಪೂರ್ವನಿದರ್ಶನವಿದೆ. ಹೀಗಾಗಿ, ಮಧ್ಯಂತರ ಪರಿಹಾರ ನೀಡುವುದನ್ನು ಪರಿಗಣಿಸುವುದಾದರೆ ನಮ್ಮ ವಾದವನ್ನೂ ಆಲಿಸಬೇಕು' ಎಂದು ಮನವಿ ಮಾಡಿದರು.

'ಅರ್ಜಿದಾರರು, ರಜಾಕಾಲದ ಈ ನ್ಯಾಯಪೀಠದ ಮುಂದೆ ಏಕೆ ಬಂದಿದ್ದಾರೆ? ಅಂತಹ ತುರ್ತು ಏನಿದೆ? ತುರ್ತಿನ ಕುರಿತು ಪೀಠಕ್ಕೆ ಮನವರಿಕೆ ಮಾಡಿಕೊಡುವ ಬದಲಾಗಿ, ವಿನಯ್ ಪರ ವಕೀಲರು ಮೆರಿಟ್ ಮೇಲೆ ವಾದ ಮಂಡಿಸಿದ್ದಾರೆ. ಹಾಗಾಗಿ, ಈ ಅರ್ಜಿಯನ್ನು ರಜಾಕಾಲದ ಬಳಿಕ ಪರಿಗಣಿಸಬಹುದು. ಒಂದು ವೇಳೆ ನ್ಯಾಯಪೀಠವು ಮಧ್ಯಂತರ ಪರಿಹಾರ ನೀಡಲು ವಾದಾಂಶವನ್ನು ಪರಿಗಣಿಸುವುದಾದರೆ, ನಮ್ಮ ವಾದವನ್ನೂ ಆಲಿಸಬೇಕು' ಎಂದರು.

ಇದೇ ಪ್ರಕರಣದ ಮತ್ತೊಬ್ಬ ಅರ್ಜಿದಾರರಾದ, ಮೆಸರ್ಸ್ ಎಂ.ಎನ್. ರಮೇಶ್ ಎಂಜಿನಿಯರ್ಸ್ ಅಂಡ್ ಕಂಟ್ರ್ಯಾಕ್ಟರ್ಸ್‌ನ ಎಂ.ಎನ್.ರಮೇಶ್ ಪರ ಪದಾಂಕಿತ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಅವರು, 'ಅಪರಾಧ ಪ್ರಕ್ರಿಯೆ ಇಲ್ಲದೇ ಇದ್ದರೂ ಅರ್ಜಿದಾರರ ಪರ, ಪಿಎಂಎಲ್‌ಎ ಕಲಂ 17ರ ಅಡಿ ಸಮನ್ಸ್ ಜಾರಿಗೊಳಿಸಿರುವುದು ಕಾನೂನುಬಾಹಿರ ಕ್ರಮ' ಎಂದು ಪ್ರತಿಪಾದಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿತು.

ಕ್ರಿಕೆಟ್: ಫೈನಲ್‌ಗೆ ಹೆರಾನ್ಸ್, ಮಾಗಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆರಾನ್ಸ್ ಕ್ರಿಕೆಟ್ ಕ್ಲಬ್ ಮತ್ತು ಮಾಗಡಿ ಕ್ರಿಕೆಟ್ ಅಕಾಡೆಮಿ ತಂಡಗಳು ಇಲ್ಲಿ ನಡೆಯುತ್ತಿರುವ ಪ್ರೊ. ಅನಂತಾಚಾರ್ ಸ್ಮಾರಕ 12 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಫೈನಲ್ ತಲುಪಿವೆ.

ಎ.ಪಿ.ಎಸ್. ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಹೆರಾನ್ಸ್ ತಂಡವು 9 ವಿಕೆಟ್‌ಗಳಿಂದ ಕೆಸಿಸಿ ಗುರುಕುಲ ವಿರುದ್ಧ ಜಯಿಸಿತು. ಮಾಗಡಿ ಕ್ರಿಕೆಟ್ ಅಕಾಡೆಮಿ ತಂಡವು ಎರಡು ಪಂದ್ಯಗಳಲ್ಲಿ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಕೆಸಿಸಿ ಗುರುಕುಲ: 24.3 ಓವರ್‌ಗಳಲ್ಲಿ 75 (ಅಭಿನವ್ 22, ಕವಿನ್ ಗೌಡ 4ಕ್ಕೆ3) ಹೆರಾನ್ಸ್ ಸಿಸಿ: 11.5 ಓವರ್‌ಗಳಲ್ಲಿ 1 ವಿಕೆಟ್‌ಗೆ 78 (ಚಯಾಂಕ್ ಔಟಾಗದೇ 27, ಲುವಿಕ್ ಔಟಾಗದೇ 26) ಫಲಿತಾಂಶ: ಹೆರಾನ್ಸ್ 9 ವಿಕೆಟ್‌ಗಳಿಂದ ಜಯ.

ಬಿಪಿಸಿಎ: 25 ಓವರ್‌ಗಳಲ್ಲಿ 7ಕ್ಕೆ118 (ಸೂರಜ್ 29, ಅರ್ಜುನ್ 21, ಪ್ರಣೀತ್ 24ಕ್ಕೆ4) ಮಾಗಡಿ ಸಿಎ: 19.1 ಓವರ್‌ಗಳಲ್ಲಿ 5ಕ್ಕೆ120 (ಕನಿಷ್ಕ 25, ವಿರಾಜ್ 32ಕ್ಕೆ3) ಫಲಿತಾಂಶ: ಮಾಗಡಿ ತಂಡಕ್ಕೆ 5 ವಿಕೆಟ್‌ಗಳಿಂದ ಜಯ

ಮಾಗಡಿ ಸಿಎ: 25 ಓವರ್‌ಗಳಲ್ಲಿ 7ಕ್ಕೆ186 (ಕೀರ್ತನ್ 82, ದಕ್ಷ್ 32ಕ್ಕೆ2) ಪೂರ್ಣವಿಕಾಸ್: 19.2 ಓವರ್‌ಗಳಲ್ಲಿ 90 (ಪ್ರಾಂಜಲ್ 21, ಸೌರವ್ 22, ಕನಿಷ್ಕಾ 14ಕ್ಕೆ4) ಫಲಿತಾಂಶ: ಮಾಗಡಿ ತಂಡಕ್ಕೆ 96 ರನ್ ಜಯ.

ಆನ್‌ಲೈನ್ ಕ್ರಿಕೆಟ್ ಬೆಟ್ಟಿಂಗ್: ಫೋನ್ ಪೇ ಅರ್ಜಿ ವಜಾಗೊಳಿಸಿದ ನ್ಯಾಯಪೀಠ

ಜೂಜಿನ ಮಗ್ಗಲು ಮುರಿಯಬೇಕು: ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ಬೆಟ್ಟಿಂಗ್‌ಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣವೊಂದರಲ್ಲಿ, ತನಿಖಾಧಿಕಾರಿ ಕೋರಿದ್ದ ಮಾಹಿತಿ ನೀಡಲು ನಿರಾಕರಿಸಿದ್ದ, 'ಫೋನ್ ಪೇ' ಕಂಪನಿಯ ವಾದವನ್ನು ತಿರಸ್ಕರಿಸಿರುವ ಹೈಕೋರ್ಟ್, 'ಹೊಣೆಗಾರಿಕೆ ಮತ್ತು ಗೋಪ್ಯತೆ ಒಟ್ಟೊಟ್ಟಿಗೆ ಸಾಗಬೇಕು' ಎಂದು ನಿರ್ದೇಶಿಸಿದೆ.

'ಬಳಕೆದಾರರು ಬಳಸಿರುವ ಖಾತೆಯ ಸಂಪೂರ್ಣ ಮಾಹಿತಿಯನ್ನು ಒದಗಿಸಿ' ಎಂದು ಕೋರಿ, ಬೆಂಗಳೂರು ಗ್ರಾಮಾಂತರ ಸೆನ್ (ಸೈಬರ್, ಎಕನಾಮಿಕ್ ಅಂಡ್ ನಾರ್ಕೋಟಿಕ್ ಕ್ರೈಂ) ಠಾಣೆಯ ಪೊಲೀಸರು, 'ಫೋನ್ ಪೇ ಪ್ರೈವೇಟ್ ಲಿಮಿಟೆಡ್' ಕಂಪನಿಗೆ ಕೋರಿದ್ದರು. ಅಪರಾಧ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ನೀಡಿದ್ದ ಈ ನೋಟಿಸ್ ಪ್ರಶ್ನಿಸಿ ಫೋನ್ ಪೇ ಹೈಕೋರ್ಟ್ ಮೆಟ್ಟಿಲೇರಿತ್ತು. ಈ ರಿಟ್ ಅರ್ಜಿಯನ್ನು (ಡಬ್ಲ್ಯು.ಪಿ 3757/2023 ಜಿಎಂ-ಪೊಲೀಸ್) ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಫೋನ್ ಪೇ ಎಂಬುದು ಒಂದು ಡಿಜಿಟಲ್ ಮಧ್ಯಸ್ಥಗಾರ ವ್ಯವಸ್ಥೆ. ಇದು ಪೇಮೆಂಟ್ ಮತ್ತು ಸೆಟ್ಲಮೆಂಟ್ ಸಿಸ್ಟಮ್ ಹಾಗೂ ಬ್ಯಾಂಕರ್ಸ್ ಬುಕ್ಸ್ ಎವಿಡೆನ್ಸ್ ಕಾಯ್ದೆಗಳಡಿ ಕಾರ್ಯನಿರ್ವಹಿಸುತ್ತದೆ. ನ್ಯಾಯಾಲಯದ ಆದೇಶದ ಹೊರತಾಗಿ ಪೊಲೀಸರೂ ಸೇರಿದಂತೆ ಇತರ ಯಾರಿಗೇ ಆಗಲಿ ಯಾವುದೇ ಗೋಪ್ಯ ಮಾಹಿತಿಯನ್ನು ಒದಗಿಸುವುದಕ್ಕೆ ಅವಕಾಶವಿಲ್ಲ' ಎಂಬ ಅರ್ಜಿದಾರರ ವಾದವನ್ನು ನ್ಯಾಯಪೀಠ ತಳ್ಳಿ ಹಾಕಿದೆ.

'ಯಾವುದೇ ಪ್ರಕರಣದಲ್ಲಿ ತನಿಖಾಧಿಕಾರಿಯು, ಕಾನೂನುಬದ್ಧವಾಗಿ ಸಾಕ್ಷಿ ಸಂಗ್ರಹಿಸಿ, ತನಿಖೆಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ಹಂತದಲ್ಲಿದ್ದಾಗ; ಗ್ರಾಹಕರ ಖಾಸಗೀತನದ ರಕ್ಷಣೆಯ ನೆಪದಲ್ಲಿ ತನಿಖಾಧಿಕಾರಿಯ ಕೈ ಕಟ್ಟಿಹಾಕಲಾಗದು' ಎಂಬ ಖಚಿತ ಅಭಿಪ್ರಾಯ ವ್ಯಕ್ತಪಡಿಸಿದೆ.

'ಸಾರ್ವಜನಿಕ ಹಿತಾಸಕ್ತಿ ಹೊಂದಿದ ಮತ್ತು ಕ್ರಿಮಿನಲ್ ಆರೋಪ ಹೊತ್ತ ಪ್ರಕರಣಗಳಲ್ಲಿ ತನಿಖೆಯ ಮುಂದೆ ದತ್ತಾಂಶ ರಕ್ಷಣೆಯ ಕರ್ತವ್ಯ ತಲೆಬಾಗಲೇಬೇಕಾಗುತ್ತದೆ. ಈ ನೆಲೆಯಲ್ಲಿ ಪೊಲೀಸರು ಫೋನ್ ಪೇಗೆ ಜಾರಿ ಮಾಡಿರುವ ನೋಟಿಸ್ ಕಾನೂನು ಬಾಹಿರವಲ್ಲ. ಈ ಪ್ರಕರಣದಲ್ಲಿ ಹಲವು ಖಾತೆಗಳ ಮೂಲಕ ಹಣ ವರ್ಗಾವಣೆಯಾಗಿ ಅಕ್ರಮ ಹಣಕಾಸು ವ್ಯವಹಾರ ನಡೆದಿರುವುದನ್ನು ಪತ್ತೆ ಮಾಡಬೇಕಿರುವ ತನಿಖಾಧಿಕಾರಿಯ ಕಳಕಳಿ ಅಡಗಿದೆ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಭಾರತ ಮತ್ತು ದಕ್ಷಿಣ ಆಫ್ರಿಕಾ ಕ್ರಿಕೆಟ್ ಪಂದ್ಯದ ವೇಳೆ ಬೆಟ್ಟಿಂಗ್‌ಗಾಗಿ ಚಿಕ್ಕಮಗಳೂರಿನ ವ್ಯಕ್ತಿಯೊಬ್ಬರು ಕ್ರೀಡಾ ವೆಬ್‌ಸೈಟ್‌ವೊಂದಕ್ಕೆ ಫೋನ್ ಪೇ ಮೂಲಕ ₹6 ಸಾವಿರ ಪಾವತಿ ಮಾಡಿದ್ದರು. ಆದರೆ, ಈ ವೆಬ್‌ಸೈಟ್ ನಿರ್ಬಂಧಿಸಲಾದ ಕಾರಣ ಅವರು ತಮ್ಮ ಹಣವನ್ನು ಹಿಂಪಡೆಯಲು ಸಾಧ್ಯವಾಗಿರಲಿಲ್ಲ. ಪರಿಣಾಮ ಅವರು, 'ನನಗೆ ವಂಚನೆಯಾಗಿದೆ. ಹಣ ವಾಪಸ್ ಕೊಡಿಸಿ' ಎಂದು ಪೊಲೀಸರಿಗೆ ದೂರು ನೀಡಿದ್ದರು.

ಇದರ ಆಧಾರದಲ್ಲಿ ಪೊಲೀಸರು, ಫೋನ್ ಪೇ ಕಂಪನಿಗೆ 2022ರ ಡಿಸೆಂಬರ್‌ನಲ್ಲಿ ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 91ರ ಅಡಿಯಲ್ಲಿ ನೋಟಿಸ್ ಜಾರಿ ಮಾಡಿದ್ದರು. ಪ್ರಕರಣದಲ್ಲಿ ಫೋನ್ ಪೇ ಕಂಪನಿ ಪರ ಹೈಕೋರ್ಟ್ ವಕೀಲ ನಿತಿನ್ ರಮೇಶ್ ಮತ್ತು ಸರ್ಕಾರದ ಪರ ಮೊಹಮದ್ ಜಾಫರ್ ಶಾ ವಾದ ಮಂಡಿಸಿದ್ದರು.

ಮುಖ್ಯಾಂಶಗಳು

- ಭಾರತ–ದ.ಆಫ್ರಿಕಾ ಪಂದ್ಯದ ವೇಳೆ ಬೆಟ್ಟಿಂಗ್
- ಪೊಲೀಸ್ ನೋಟಿಸ್ ಪ್ರಶ್ನಿಸಿದ್ದ ಫೋನ್ ಪೇ

ತನಿಖೆಯನ್ನು ತಾರ್ಕಿಕ ತೀರ್ಮಾನಕ್ಕೆ ಕೊಂಡೊಯ್ಯುವ ಪ್ರಯತ್ನವನ್ನು ಗೋಪ್ಯತಾ ರಕ್ಷಣೆಯ ಹೆಸರಿನಲ್ಲಿ ಗುರಾಣಿಯಾಗಿ ಬಳಸಲು ಸಾಧ್ಯವಿಲ್ಲ.

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ಅನೂಹ್ಯ ಅಪರಾಧಗಳು...

'ಇಂದಿನ ದಿನಗಳಲ್ಲಿ ಹೊಸ ನಮೂನೆಯ ಅಪರಾಧಗಳ ಸಂಖ್ಯೆ ಹೆಚ್ಚುತ್ತಿದ್ದು, ಸಾಂಪ್ರದಾಯಿಕ ಅಪರಾಧಗಳು ಹಿಂದೆ ಸರಿದಿವೆ. ಇವುಗಳಲ್ಲಿ ಸೈಬರ್ ಅಪರಾಧಗಳು ಗುಪ್ತಗಾಮಿನಿಯಾಗಿದ್ದು ಅನೂಹ್ಯವಾದ ಆಧುನಿಕತೆಯ ಸ್ಪರ್ಶ ಪಡೆದಿವೆ. ಹೀಗಾಗಿ, ಡಿಜಿಟಲ್ ಹೆಜ್ಜೆಗುರುತುಗಳನ್ನು ಪತ್ತೆ ಹಚ್ಚಲು ಪೊಲೀಸರಿಗೆ ವಿಪುಲ ಅಧಿಕಾರ ನೀಡಬೇಕಿದೆ ಮತ್ತು ಇಂತಹ ಅಪರಾಧಗಳ ಮಗ್ಗಲುಗಳನ್ನು ತಡಮಾಡದೆ ಮುರಿಯಬೇಕಿದೆ' ಎಂದು ನ್ಯಾಯಪೀಠ ಗುಟುರು ಹಾಕಿದೆ.

ಶಾಸನಬದ್ಧ ಸಂಸ್ಥೆಗಳ ಜೊತೆ ಮಾಹಿತಿ ಹಂಚಿಕೊಳ್ಳಲು, 'ಪೇಮೆಂಟ್ ಅಂಡ್ ಸೆಟಲ್‌ಮೆಂಟ್ ಸಿಸ್ಟಮ್ ಕಾಯ್ದೆ–2007' ಮತ್ತು 'ಬ್ಯಾಂಕರ್ಸ್ ಬುಕ್ಸ್ ಸಾಕ್ಷ್ಯ ಕಾಯ್ದೆ–1891'ಗಳು ಅನುಮತಿ ನೀಡುತ್ತವೆ. ಅಂತೆಯೇ, ಮಾಹಿತಿ ತಂತ್ರಜ್ಞಾನ (ಮಧ್ಯಸ್ಥಿಕೆ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೈತಿಕ ಸಂಹಿತೆ) ನಿಯಮಗಳು–2011ರ ಅನ್ವಯ, ತನಿಖಾಧಿಕಾರಿಯು ಕಾನೂನಿನ ಪರಿಮಿತಿಯಲ್ಲಿ ಮಾಹಿತಿ ಕೋರಿದಾಗ 72 ಗಂಟೆಗಳ ಒಳಗಾಗಿ ಒದಗಿಸಬೇಕು' ಎಂಬ ಅಂಶವನ್ನು ನ್ಯಾಯಪೀಠ ತೀರ್ಪಿನಲ್ಲಿ ಗಮನಾರ್ಹವಾಗಿ ಉಲ್ಲೇಖಿಸಿದೆ.

ಪ್ರೊ.ಸುಬ್ಬಣ್ಣ ಅಯ್ಯಪ್ಪನ್ ಸಾವು: ತನಿಖೆ ಮುಕ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಪಿಸಿಎಆರ್) ನಿವೃತ್ತ ನಿರ್ದೇಶಕ ಪ್ರೊ.ಸುಬ್ಬಣ್ಣ ಅಯ್ಯಪ್ಪನ್ ಸಾವಿನ ಕುರಿತ ಪ್ರಕರಣವು ಕುಟುಂಬದ ಆಕ್ಷೇಪಣೆ ಇಲ್ಲದ ಕಾರಣ ಮುಕ್ತಾಯವಾಗಿದೆ.

ಈ ಬಗ್ಗೆ ಪೊಲೀಸ್ ಮೂಲಗಳು ಮಾಹಿತಿ ನೀಡಿದ್ದು, 'ಕೆಲವರು ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು. ಕುಟುಂಬದವರು ಅವನ್ನು ಅಲ್ಲಗಳೆದಿದ್ದು, ಅಸಹಜ ಸಾವು ಪ್ರಕರಣ ದಾಖಲಾಗಿದೆ' ಎಂದು ತಿಳಿಸಿವೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಜಿ ಮುಖ್ಯಮಂತ್ರಿ ದಿ. ಆರ್ ಗುಂಡೂರಾವ್ ಅವರ ಪ್ರತಿಮೆ ಅನಾವರಣಗೊಳಿಸಿದರು ಪ್ರಜಾವಾಣಿ ಚಿತ್ರ

ಆರ್. ಗುಂಡೂರಾವ್ ಪ್ರತಿಮೆ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಂಡೂರಾವ್ ಅವರು ಮುಖ್ಯಮಂತ್ರಿಯಾಗಿದ್ದಾಗ ದಕ್ಷ ಆಡಳಿತವನ್ನು ನೀಡಿದ್ದರು. ಪ್ರಭಾವಿ ನಾಯಕರಾಗಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಮರಿಸಿದರು.

ಮಾಜಿ ಮುಖ್ಯಮಂತ್ರಿ ದಿ.ಆರ್.ಗುಂಡೂರಾವ್ ಅವರ ಪ್ರತಿಮೆಯನ್ನು ಮೆಜೆಸ್ಟಿಕ್ ಬಸ್ ನಿಲ್ದಾಣ ಬಳಿಯ ವೃತ್ತದಲ್ಲಿ ಬುಧವಾರ ಅನಾವರಣಗೊಳಿಸಿ, ಗುಂಡೂರಾವ್ ವೃತ್ತ ಎಂದು ನಾಮಕರಣ ಮಾಡಿದ ಬಳಿಕ ಅವರು ಮಾತನಾಡಿದರು.

ರಾಜ್ಯದ ಮುಖ್ಯಮಂತ್ರಿಯಾಗಿ ಗುಂಡೂರಾವ್ ಅವರು ಉತ್ತಮ ಕೆಲಸಗಳನ್ನು ಮಾಡಿದ್ದರು. ಯಾರನ್ನೂ ಜಾತಿಯಿಂದ ಅಳೆಯದೇ ಜನಪರ ಕೆಲಸಗಳಿಗೆ ಸದಾ ಸ್ಪಂದಿಸುತ್ತಿದ್ದರು. ಇಂದಿರಾ ಗಾಂಧಿ, ಸಂಜಯ್ ಗಾಂಧಿಗೆ ಅವರಿಗೆ ಅತ್ಯಂತ ಆಪ್ತರಾಗಿದ್ದ ಗುಂಡೂರಾವ್ ಅವರು ಧೈರ್ಯದಿಂದ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು. ವಿಶೇಷವಾಗಿ ಶಾಸಕರ ಒತ್ತಡಕ್ಕೆ ಮಣಿಯುತ್ತಿರಲಿಲ್ಲ. ವರ್ಗಾವಣೆ ದಂಧೆಗೆ ಕಡಿವಾಣ ಹಾಕಿದ್ದರು ಎಂದು ಹೇಳಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಅತ್ಯಂತ ಕಿರಿಯ ವಯಸ್ಸಿನಲ್ಲೇ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಗುಂಡೂರಾವ್ ಅವರು 40 ವರ್ಷಗಳ ಹಿಂದೆಯೇ ಬೆಂಗಳೂರು ನಗರದ ಬೆಳವಣಿಗೆಯ ದೂರದೃಷ್ಟಿಯಿಟ್ಟುಕೊಂಡು ಮೆಜೆಸ್ಟಿಕ್ ಬಸ್ ನಿಲ್ದಾಣವನ್ನು ನಿರ್ಮಿಸಿದ್ದರು' ಎಂದರು.

'ದೇವರಾಜ ಅರಸು ಅವರ ಸಂಪುಟದಲ್ಲಿ ಸಚಿವರಾಗಿ, ರಾಜ್ಯದ ಮುಖ್ಯಮಂತ್ರಿಯಾಗಿ ಬೆಂಗಳೂರು ನಗರದ ಬೆಳವಣಿಗೆಗೆ, ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದರು. ಮೆಡಿಕಲ್, ಎಂಜಿನಿಯರಿಂಗ್ ಕಾಲೇಜುಗಳನ್ನು ನೀಡಿದ್ದರು. ಕಾವೇರಿ ಹಂತ - 2, ರೈತರಿಗೆ ಉಚಿತ ವಿದ್ಯುತ್, ವಿಧಾನ ಸೌಧದ ಎದುರು ಅಂಬೇಡ್ಕರ್ ಪ್ರತಿಮೆ ನಿರ್ಮಾಣ, ಜಂಗಲ್ ಲಾಡ್ಜ್‌ಗಳ ಮೂಲಕ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡಿದ್ದರು. ಮೊದಲ ವಿಶ್ವ ಕನ್ನಡ ಸಮ್ಮೇಳನ ನಡೆಸುವುದು ಸೇರಿದಂತೆ ಹಲವು ಉತ್ತಮ ಕಾರ್ಯಗಳನ್ನು ಮಾಡಿದ್ದರು' ಎಂದು ಸ್ಮರಿಸಿದರು.

ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ವಿಧಾನ ಪರಿಷತ್ತಿನ ಮುಖ್ಯ ಸಚೇತಕರಾದ ಸಲೀಂ ಅಹ್ಮದ್, ವಿಧಾನಸಭೆಯ ಮುಖ್ಯ ಸಚೇತಕ ಅಶೋಕ್ ಪಟೇಲ್, ಶಾಸಕರು, ಮಾಜಿ ಶಾಸಕರು, ಗುಂಡೂರಾವ್ ಅವರ ಒಡನಾಡಿಗಳು ಭಾಗವಹಿಸಿದ್ದರು.

'ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ'ಗೆ ತಮಿಳ್ ಸೆಲ್ವಿ ಆಯ್ಕೆ

ಪ್ರಜಾವಾಣಿ ವಾರ್ತೆ

ಪ್ರೊ.ತಮಿಳ್ ಸೆಲ್ವಿ

ಕಲಬುರಗಿ: ಇಲ್ಲಿನ ಪ್ರೊ.ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿಗೆ ಚೆನ್ನೈನ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಹಿರಿಯ ಪ್ರಾಧ್ಯಾಪಕಿ, ಸಂಶೋಧಕಿ ಪ್ರೊ.ತಮಿಳ್ ಸೆಲ್ವಿ ಆಯ್ಕೆಯಾಗಿದ್ದಾರೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ನಿರ್ದೇಶಕ ಪ್ರೊ.ಎಚ್.ಟಿ.ಪೋತೆ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಪ್ರಶಸ್ತಿಗೆ ಸೆಲ್ವಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಜೂನ್ 5ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ನಾಲ್ವಡಿ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ. ಪ್ರಶಸ್ತಿಯು ₹10 ಸಾವಿರ ನಗದು, ಪ್ರಶಸ್ತಿ ಫಲಕ ಹೊಂದಿದೆ ಎಂದು ಪ್ರತಿಷ್ಠಾನವು ಪ್ರಕಟಣೆಯಲ್ಲಿ ತಿಳಿಸಿದೆ.

'ವ್ಹೀಲಿ ನಿಷೇಧಕ್ಕೆ ಬೇಕು ಕಾನೂನು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನಗಳ ವ್ಹೀಲಿ ಹಾವಳಿಗೆ ಸಂಪೂರ್ಣ ಇತಿಶ್ರೀ ಹಾಡಲು ಕಾನೂನಿಗೆ ಅಗತ್ಯ ತಿದ್ದುಪಡಿ ತರಬೇಕು ಎಂದು ರಾಜಾಜಿನಗರ ಶಾಸಕ ಎಸ್. ಸುರೇಶ್‌ಕುಮಾರ್ ಅವರು ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಹೆಚ್ಚುತ್ತಿರುವ ದ್ವಿಚಕ್ರ ವಾಹನಗಳ ವ್ಹೀಲಿ ಹಾವಳಿಯ ಬಗ್ಗೆ ಹೈಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ. ಈ ಕುರಿತು ಅಗತ್ಯ ಕಾನೂನು ರೂಪಿಸಬೇಕು ಎಂದು ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಹೈಕೋರ್ಟ್‌ನ ಈ ಕಳಕಳಿ ಸಮಾಜದ ಎಲ್ಲ ಪ್ರಜ್ಞಾವಂತರ ಭಾವನೆಯನ್ನು ಪ್ರತಿಧ್ವನಿಸಿದೆ ಎಂದು ಅವರು ತಿಳಿಸಿದ್ದಾರೆ.

'ವ್ಹೀಲಿ ಒಂದು ಹುಚ್ಚಾಟ. ಇದರಿಂದ ವ್ಹೀಲಿ ಮಾಡುವ ವ್ಯಕ್ತಿಗಳಲ್ಲದೆ, ಅಮಾಯಕ ಸಾರ್ವಜನಿಕರೂ ಬಲಿಯಾಗುತ್ತಿದ್ದಾರೆ. ಪುಂಡಪೋಕರಿಗಳು ಮಾಡುತ್ತಿರುವ ಈ ಘನ ಕಾರ್ಯ ಸಮಾಜಕ್ಕೆ ಅಪಾಯಕಾರಿ' ಎಂದಿದ್ದಾರೆ.

ಕೃಷಿಕ್ ಸರ್ವೋದಯ ಫೌಂಡೇಶನ್ (ಕೆ.ಎಸ್.ಎಫ್) ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆದು, ಇತ್ತೀಚೆಗೆ ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪ್ರೊಬೇಷನರಿ ಅಧಿಕಾರಿಗಳಾಗಿ ಆಯ್ಕೆಯಾದ ವಂಶಿಕಾ, ಅರವಿಂದ್ ಎಚ್.ಟಿ., ಚೇತನ್ ಒ., ಎಂ.ಜೆ. ಕುಮುದ್ ಕುಟ್ಟಪ್ಪ ಅವರಿಗೆ ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಕೆ. ಪುಟ್ಟಸೋಮೇಗೌಡ, ಕಾರ್ಯದರ್ಶಿ ಟಿ. ತಿಮ್ಮೇಗೌಡ, ಟ್ರಸ್ಟಿಗಳಾದ ಶಂಕರಲಿಂಗೇಗೌಡ, ದೇವರಾಜ್, ಎಸ್.ಟಿ. ರಾಮಚಂದ್ರ ಉಪಸ್ಥಿತರಿದ್ದಾರೆ

ಕೆಂಪೇಗೌಡ ಬಡಾವಣೆಯ ನಿವಾಸಿಗಳ ಜತೆ ಬಿಡಿಎ ಸಭೆ

ಶೀಘ್ರ ಕಾಮಗಾರಿ ಪೂರ್ಣ: ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ–ರೇರಾ) ರೇರಾ ಸಲಹೆ ಮೇರೆಗೆ ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವೇಶನ ಹಂಚಿಕೆದಾರರ ಜತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮಂಗಳವಾರ ಸಭೆ ನಡೆಸಿತು.

ರಸ್ತೆ, ವಿದ್ಯುತ್, ಒಳಚರಂಡಿ, ಕುಡಿಯುವ ನೀರು, ಎಸ್.ಟಿ.ಪಿ., ಉಪ ವಿದ್ಯುತ್ ಕೇಂದ್ರ, ಉದ್ಯಾನ ಇತರೆ ಮೂಲಭೂತ ಸೌಕರ್ಯಗಳನ್ನು ಬಡಾವಣೆಗೆ ಒದಗಿಸಲಾಗಿದೆ. ಶೇಕಡ 90ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು ಎಂದು ಪ್ರಾಧಿಕಾರದ ಅಧಿಕಾರಿಗಳು ನಿವಾಸಿಗಳಿಗೆ ಮನವರಿಕೆ ಮಾಡಿಕೊಟ್ಟರು.

ಬಡಾವಣೆಯ ಕೆಲವು ಭಾಗಗಳಲ್ಲಿ 550 ಎಕರೆ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಜಮೀನಿನ ಮಾಲೀಕರು ಹೈಕೋರ್ಟ್‌ಗೆ ಹೋಗಿದ್ದರು. ಭೂಮಾಲೀಕರೊಡನೆ ಪ್ರಕರಣ ಇತ್ಯರ್ಥಗೊಳಿಸಲು ಮೂರು ತಿಂಗಳ ಕಾಲಾವಕಾಶವನ್ನು ಕೋರ್ಟ್ ನೀಡಿತು. ಭೂಮಾಲೀಕರ ಅಹವಾಲುಗಳನ್ನು ಪರಿಶೀಲಿಸಲಾಯಿತು. ಬಡಾವಣೆಯ ಯೋಜಿತ ಬೆಳವಣಿಗೆಗೆ ಜಮೀನು ಅವಶ್ಯಕತೆ ಇರುವುದರಿಂದ ಅವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಬಡಾವಣೆಯ ಭೂಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ ಎಂದು ಅಧಿಕಾರಿಗಳು ವಿವರಿಸಿದರು.

ಹಂತ ಹಂತವಾಗಿ ಭೂಸ್ವಾಧೀನ ಆಗುತ್ತಿರುವುದರಿಂದ ಮೂಲ ಸೌಕರ್ಯ ಕಾಮಗಾರಿಗಳ ವಿಳಂಬವಾಗುತ್ತಿದೆ. ನ್ಯಾಯಾಲಯದ ಪ್ರಕರಣದಿಂದಾಗಿ ಬಡಾವಣೆಯ ಕಾಮಗಾರಿ ವಿಳಂಬವಾಗುತ್ತಿದ್ದು, ಶೀಘ್ರ ಕಾಮಗಾರಿ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದರು.

ಸಭೆಯಲ್ಲಿ ಆಯುಕ್ತ ಎನ್. ಜಯರಾಮ್, ಕಾರ್ಯಪಾಲಕ ಎಂಜಿನಿಯರ್ (ವಿದ್ಯುತ್) ವಸಂತ್ ಕುಮಾರ್, ಒಳಚರಂಡಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಚಂದ್ರಶೇಖರ್, ನಾಡಪ್ರಭು ಕೆಂಪೇಗೌಡ ಬಡಾವಣೆ ಕಾರ್ಯಪಾಲಕ ಎಂಜಿನಿಯರ್ ಸಿ.ಎನ್. ಅಶೋಕ್, ಅಭಿಯಂತರ ಅಧಿಕಾರಿ ಬಿ.ಆರ್.ಉಮೇಶ್, ಅಭಿಯಂತರ ಸದಸ್ಯ ಎಚ್.ಆರ್.ಶಾಂತರಾಜಣ್ಣ ಭಾಗವಹಿಸಿದ್ದರು.

ಬಿಡಿಎ ನಿರ್ಮಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆ

ಸಭೆಗೆ ಮುಕ್ತ ವೇದಿಕೆ ಬಹಿಷ್ಕಾರ

'ನಿವೇಶನದಾರರ ಕುಂದುಕೊರತೆಗಳನ್ನು ಸರಿಯಾಗಿ ಆಲಿಸದ ಕಾರಣ ಸಭೆಯಿಂದ ಹೊರಬರಬೇಕಾಯಿತು' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ (ಎನ್‌ಪಿಕೆಎಲ್) ತಿಳಿಸಿದೆ.

'ಇಪ್ಪತ್ತು ನಿಮಿಷ ನಡೆದ ಸಭೆಯಲ್ಲಿ ವೇದಿಕೆ ಪ್ರತಿನಿಧಿಗಳಿಗೆ ಮಾತನಾಡಲು ಅವಕಾಶ ನೀಡಲಿಲ್ಲ. ಅಧಿಕಾರಿಗಳು ಸರ್ವಾಧಿಕಾರ ಧೋರಣೆಯಿಂದ ವರ್ತಿಸಿದರು. ಮೂಲ ನಿವೇಶನದಾರರಿಗೆ ಮಾತ್ರ ಮಾತನಾಡಲು ಮತ್ತು ಅಹವಾಲು ಸಲ್ಲಿಸಲು ಅವಕಾಶ ನೀಡಲಾಗುವುದು ಎಂದು ಆಯುಕ್ತರು ಹೇಳಿದರು. ಈ ಕೂಡಲೇ ಉಪಮುಖ್ಯಮಂತ್ರಿ ಮತ್ತು ಬಿಡಿಎ ಅಧ್ಯಕ್ಷರು ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು' ಎಂದು ಎನ್‌ಕೆಪಿಎಲ್ ಗೌರವಾಧ್ಯಕ್ಷ ಶ್ರೀಧರ್ ಹೇಳಿದರು.

ಎಂಜಿನಿಯರಿಂಗ್: ಬೇಡಿಕೆ ಇರುವ ಸೀಟುಗಳಿಗೆ ಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಪದವಿ ಶಿಕ್ಷಣದಲ್ಲಿ ಕಂಪ್ಯೂಟರ್ ಸೈನ್ಸ್ ಸೇರಿದಂತೆ ಬಹುಬೇಡಿಕೆ ಇರುವ ಕೋರ್ಸ್‌ಗಳ ಸೀಟು ಹೆಚ್ಚಳಕ್ಕೆ ಕಡಿವಾಣ ಹಾಕಲು ಸರ್ಕಾರ ಚಿಂತನೆ ನಡೆಸಿದೆ.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಸೀಟು ಹೆಚ್ಚಳದ ಮೇಲಿನ ಮಿತಿಯನ್ನು ತೆಗೆದುಹಾಕಿದ ನಂತರ ಬಹುತೇಕ ಎಂಜಿನಿಯರಿಂಗ್ ಕಾಲೇಜುಗಳು ಬೇಡಿಕೆ ಇರುವ ಕೋರ್ಸ್‌ಗಳ ಸೀಟು ಹೆಚ್ಚಳ ಮಾಡಿಕೊಂಡು, ಬೇಡಿಕೆ ಇಲ್ಲದ ಕೋರ್ಸ್‌ಗಳನ್ನು ಮುಚ್ಚುತ್ತಿವೆ. ಇದರಿಂದ ವಿವಿಧ ವಿಭಾಗಗಳ ನಡುವೆ ಅಸಮತೋಲನ ಸೃಷ್ಟಿಯಾಗಿದೆ. ಹಾಗಾಗಿ, ಯಾವುದೇ ಕೋರ್ಸ್‌ಗಳಲ್ಲಿ ನಿಗದಿತ ಮಿತಿಗಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶ ನೀಡದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ತೆಲಂಗಾಣ ಸರ್ಕಾರ 2024-25ನೇ ಸಾಲಿನ ಪ್ರವೇಶದಲ್ಲಿ ಬೇಡಿಕೆ ಇರುವ ಕೋರ್ಸ್‌ಗಳ ಸೀಟು ಹೆಚ್ಚಳದ ಮೇಲೆ ನಿರ್ಬಂಧ ಹೇರಿತ್ತು. ಕೆಲವು ಎಂಜಿನಿಯರಿಂಗ್ ಕಾಲೇಜುಗಳು ನಿರ್ಧಾರ ಪ್ರಶ್ನಿಸಿ, ಕೋರ್ಟ್ ಮೊರೆ ಹೋಗಿದ್ದವು. ವಿಚಾರಣೆ ನಡೆಸಿದ ಕೋರ್ಟ್ ಸರ್ಕಾರದ ಕ್ರಮವನ್ನು ಎತ್ತಿಹಿಡಿದಿದೆ.

'ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಗೆ ಈಗಾಗಲೇ ಪತ್ರ ಬರೆಯಲಾಗಿದೆ. ತೆಲಂಗಾಣ ಪ್ರಕರಣದ ತೀರ್ಪಿನ ವಿವರಗಳನ್ನು ಪಡೆಯಲಾಗುತ್ತಿದೆ. ಸಮಾಜ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಕೋರ್ಸ್‌ಗಳ ಮಧ್ಯೆ ಸಮತೋಲನ ಕಾಯ್ದುಕೊಳ್ಳುವ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಕೋರ್ಸ್	ಬೇಡಿಕೆ (ಶೇಕಡವಾರು)
ಕಂಪ್ಯೂಟರ್ ಸೈನ್ಸ್	108
ಕೃತಕ ಬುದ್ಧಿಮತ್ತೆ	101
ಯಂತ್ರ ಅಧ್ಯಯನ	101
ದತ್ತಾಂಶ ವಿಜ್ಞಾನ	100
ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್	97

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ – 563101
e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in
ದೂರವಾಣಿ ಸಂಖ್ಯೆ: 08152-222022 ಫ್ಯಾಕ್ಸ್ ಸಂಖ್ಯೆ: 08152-227443

ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು -1&2
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-06/2025-26
ದಿನಾಂಕ: 13.05.2025

ಕೋಲಾರ ಜಿಲ್ಲೆ ಕೆ.ಜಿ.ಎಫ್. ಮಾಲೂರು ಹಾಗೂ ಮುಳಬಾಗಿಲು ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 8443-ಠೇವಣಿ ವಂತಿಕೆ ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, **ಕಾಮಗಾರಿಯ ಅಂದಾಜು ಮೊತ್ತ ಕನಿಷ್ಠ: ರೂ. 8.00 ಲಕ್ಷಗಳು ಹಾಗೂ ಗರಿಷ್ಠ: ರೂ.40.00 ಲಕ್ಷಗಳು ಮತ್ತು ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ. ಕಾಲಾವಧಿ : 3 ತಿಂಗಳು** ನಿರ್ವಹಿಸಲು ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು-1&2 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್ **(Viz.,http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ **ದಿನಾಂಕಃ 28.05.2025 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: 29.05.2025 ರಂದು ಸಂಜೆ 16:30 ಗಂಟೆಯ ನಂತರ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ತೆರೆಯಲಾಗುವುದು.** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆ.ಪಿ.ಪಿ. ಪೋರ್ಟಲ್ **(Viz.,http://kppp.karnataka.gov.in)**ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋ.ಇ ಕೋಲಾರ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:61/ಕೆಎಸ್‌ಎಂಸಿಎ/2025-26

ನೈರುತ್ಯ ರೈಲ್ವೆ

ರೈಲ್ವೆ ಸಚಿವಾಲಯ
ಅಧಿಸೂಚನೆ
ನವದೆಹಲಿ, ಮೇ 07, 2025

S.O. 2042(E).– ರೈಲ್ವೆ ಕಾಯ್ದೆ, 1989 (1989 ರ 24) ರ ಸೆಕ್ಷನ್ 20F ನ ಷರತ್ತು (6) ಮತ್ತು ಸೆಕ್ಷನ್ 2 ರ ಷರತ್ತು 7A ಯಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಕೇಂದ್ರ ಸರ್ಕಾರವು ಕೆಳಗಿನ ಕೋಷ್ಟಕದ ಕಾಲಮ್ (4) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ 'ಸಮರ್ಥ ಅಧಿಕಾರಿ' ಎಂದು ಮತ್ತು ಕೆಳಗಿನ ಕೋಷ್ಟಕದ ಕಾಲಮ್ (5) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ 'ಮಧ್ಯಸ್ಥರು' ಎಂದು ಅಧಿಕಾರ ನೀಡುತ್ತದೆ, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಕೆಳಗಿನ ಕೋಷ್ಟಕದ ಕಾಲಮ್ (3) ರಲ್ಲಿ ಉಲ್ಲೇಖಿಸಲಾದ ಜಿಲ್ಲೆಗೆ ಸಂಬಂಧಿಸಿದ ವಿಶೇಷ ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ ಅಂತಹ ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನ, ನಿರ್ವಹಣೆ, ನಿರ್ವಹಣೆ ಮತ್ತು ಕಾರ್ಯಾಚರಣೆಯ ಸಾರ್ವಜನಿಕ ಉದ್ದೇಶಕ್ಕಾಗಿ ಅಧಿಸೂಚನೆ ಹೊರಡಿಸುತ್ತದೆ.

ಕ್ರ.ಸಂ (1)	ಯೋಜನೆಯ ಹೆಸರು (2)	ಜಿಲ್ಲೆ (3)	ಸಕ್ಷಮ ಪ್ರಾಧಿಕಾರ (4)	ಮಧ್ಯಸ್ಥಗಾರ (5)
1	ಚ: 287/774 – 289/717ನಲ್ಲಿ ಸಾಸಲು ಫ್ರೈಟ್ ಟರ್ಮಿನಲ್ ಅಭಿವೃದ್ಧಿ (ಸಾಸಲು ಗ್ರಾಮ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ)	ಚಿತ್ರದುರ್ಗ	ಸಹಾಯಕ ಆಯುಕ್ತರು, ಚಿತ್ರದುರ್ಗ	ಪ್ರಾದೇಶಿಕ ಆಯುಕ್ತರು ಬೆಂಗಳೂರು

ಎಫ್ ನಂ. ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2024-25/ಲ್ಯಾಂಡ್‌ಎಸ್‌ಆರ್‌ಪಿ/1727

S.O. 2041(E).– ರೈಲ್ವೆ ಕಾಯ್ದೆ, 1989 (1989 ರ 24) ರ ಸೆಕ್ಷನ್ 20F ನ ಷರತ್ತು (6) ಮತ್ತು ಸೆಕ್ಷನ್ 2 ರ ಷರತ್ತು 7A ಯಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಕೇಂದ್ರ ಸರ್ಕಾರವು ಕೆಳಗಿನ ಕೋಷ್ಟಕದ ಕಾಲಮ್ (4) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ 'ಸಮರ್ಥ ಅಧಿಕಾರಿ' ಎಂದು ಮತ್ತು ಕೆಳಗಿನ ಕೋಷ್ಟಕದ ಕಾಲಮ್ (5) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ 'ಮಧ್ಯಸ್ಥರು' ಎಂದು ಅಧಿಕಾರ ನೀಡುತ್ತದೆ, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಕೆಳಗಿನ ಕೋಷ್ಟಕದ ಕಾಲಮ್ (3) ರಲ್ಲಿ ಉಲ್ಲೇಖಿಸಲಾದ ಜಿಲ್ಲೆಗೆ ಸಂಬಂಧಿಸಿದ ವಿಶೇಷ ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ ಅಂತಹ ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನ, ನಿರ್ವಹಣೆ, ನಿರ್ವಹಣೆ ಮತ್ತು ಕಾರ್ಯಾಚರಣೆಯ ಸಾರ್ವಜನಿಕ ಉದ್ದೇಶಕ್ಕಾಗಿ ಅಧಿಸೂಚನೆ ಹೊರಡಿಸುತ್ತದೆ.

ಕ್ರ.ಸಂ (1)	ಯೋಜನೆಯ ಹೆಸರು (2)	ಜಿಲ್ಲೆ (3)	ಸಕ್ಷಮ ಪ್ರಾಧಿಕಾರ (4)	ಮಧ್ಯಸ್ಥಗಾರ (5)
1	ಅಧ್ಯಾಯ: 92/600-700 ರಲ್ಲಿ ಎಲ್‌ಸಿ ಸಂಖ್ಯೆ 56ರ ಬದಲಿಗೆ 02 ಪಥದ ರಸ್ತೆ ಮೇಲ್ಸೇತುವೆ ನಿರ್ಮಾಣ, ತುಮಕೂರು ಜಿಲ್ಲೆ	ತುಮಕೂರು	ವಿಶೇಷ ಭೂಸ್ವಾಧೀನ ಅಧಿಕಾರಿ ತುಮಕೂರು ರಾಯದುರ್ಗ ರೈಲ್ವೆ ಯೋಜನೆ	ಪ್ರಾದೇಶಿಕ ಆಯುಕ್ತರು ಬೆಂಗಳೂರು

ಎಫ್ ನಂ. ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2025-26/ಲ್ಯಾಂಡ್‌ಎಸ್‌ಆರ್‌ಪಿ/1727

ಹೆಚ್ಚಿನ ಮಾಹಿತಿಗಳಿಗಾಗಿ: **https://egazette.gov.in** ಲಾಗಿನ್ ಮಾಡಿ

ಉಪ ಮುಖ್ಯ ಅಭಿಯಂತರರು/ನಿರ್ಮಾಣ/ಸಾಮಾನ್ಯ
ಬೆಂಗಳೂರು ಕಂಟೋನ್ಮೆಂಟ್
ಪಿಯುಬಿ/110/ಎಎಡಿ360/ಪಿಆರ್ ಬಿ/ಎಸ್‌ಡಬ್ಲ್ಯೂಆರ್/2025-26

South Western Railway - SWR SWRRLY SWRRLY

₹5.50 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಕೊಡಿಗೇಹಳ್ಳಿಯ ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ ಹಾಗೂ ಥಣಿಸಂದ್ರ ವಾರ್ಡ್ ವ್ಯಾಪ್ತಿಯ ನಾಗವಾರದ ಮಂಜುನಾಥ ಬಡಾವಣೆಯಲ್ಲಿ ₹5.50 ಕೋಟಿ ವೆಚ್ಚದಲ್ಲಿ ಚರಂಡಿ, ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಚಾಲನೆ ನೀಡಿದರು. ಸ್ಥಳೀಯರ ಮನವಿ ಮೇರೆಗೆ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

NOTICE

INVITING APPLICATION for allotment of Regimental shop (Veg Shop) at Field Marshal Cariappa Colony (FMCC), under Resident Welfare Association of 56 Company Army Service Corps (Supply) Type 'G', Cubbon Road, Bangalore-01. Interested Ex-servicemen & Spouses / Widows of Ex-Servicemen can apply. Details can be taken from 56 Company Army Service Corps (Supply) Type 'G' on any working day till 15 May 2025 between 9AM to 2PM.

ಕಾರ್ಯಾಗಾರದಲ್ಲಿ ಎಂ.ಡಿ. ಎನ್‌. ಶಿವಶಂಕರ

ಬೆಸ್ಕಾಂನಿಂದ ಡಿಜಿಟಲ್ ಪೋರ್ಟಲ್

ಪ್ರಜಾವಾಣಿ ವಾರ್ತೆ

ಕಾರ್ಯಾಗಾರದಲ್ಲಿ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ ಮಾತನಾಡಿದರು

ಬೆಂಗಳೂರು: ಗ್ರಾಹಕರ ದೂರು ನಿರ್ವಹಣೆ ಪ್ರಕ್ರಿಯೆಯನ್ನು ಮತ್ತಷ್ಟು ಪಾರದರ್ಶಕವಾಗಿಸುವುದಕ್ಕಾಗಿ ಡಿಜಿಟಲ್ ಪೋರ್ಟಲ್ ಪರಿಚಯಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಸಿದ್ಧತೆ ನಡೆಸಿದೆ ಎಂದು ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಎನ್‌.ಶಿವಶಂಕರ ತಿಳಿಸಿದ್ದಾರೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ), ಬೆಸ್ಕಾಂ ಸಹಯೋಗದಲ್ಲಿ ಮಂಗಳವಾರ ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆಯ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳಿಗೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಕೆಇಆರ್‌ಸಿ ಆದೇಶದ ಸೂಚನೆ ಮೇರೆಗೆ ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆಯನ್ನು (ಸಿಜಿಆರ್‌ಎಫ್) ಸ್ಥಾಪಿಸಲಾಗಿದೆ. ಗ್ರಾಹಕರ ದೂರುಗಳ ನಿರ್ವಹಣೆಗೆ ಕಾರ್ಪೊರೇಟ್ ವ್ಯವಹಾರಗಳ ಮುಖ್ಯ ಪ್ರಧಾನ ವ್ಯವಸ್ಥಾಪಕರನ್ನು ನಿಯೋಜಿಸಲಾಗಿದೆ. ದೂರಿಗೆ ತ್ವರಿತವಾಗಿ ಸ್ಪಂದಿಸಿ, ಸೇವೆ ಗುಣಮಟ್ಟ ಹೆಚ್ಚಿಸಲು ಅಧಿಕಾರಿಗಳು ಮುಂದಾಗಬೇಕು' ಎಂದು ತಿಳಿಸಿದರು.

'ಗ್ರಾಹಕರು ದೂರುಗಳನ್ನು ನಿಗದಿತ ಕಾಲಮಿತಿಯೊಳಗೆ ಇತ್ಯರ್ಥಗೊಳಿಸಬೇಕು. ಕಾರ್ಪೊರೇಟ್ ಕಚೇರಿಯ ಸಿಜಿಆರ್‌ಎಫ್ ವೇದಿಕೆಯಲ್ಲಿ ದೂರು ಇತ್ಯರ್ಥವಾಗದಿದ್ದರೆ ಕೆಇಆರ್‌ಸಿ ವಿದ್ಯುಚ್ಛಕ್ತಿ ಲೋಕಪಾಲರ (ಓಂಬುಡ್ಸ್‌ಮನ್) ಬಳಿ ದೂರು ಸಲ್ಲಿಸಿ ನಿಗದಿತ ಕಾಲಮಿತಿಯೊಳಗೆ ಪರಿಹಾರ ಪಡೆಯಬಹುದಾಗಿದೆ' ಎಂದರು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಕೆಇಆರ್‌ಸಿಯ ಅಧ್ಯಕ್ಷ ಪಿ.ರವಿಕುಮಾರ್, 'ದೂರು ಇತ್ಯರ್ಥದ ಸಂದರ್ಭದಲ್ಲಿ ಗ್ರಾಹಕರಿಗೆ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ನ್ಯಾಯ ಒದಗಿಸಬೇಕು. ಮುಖ್ಯವಾಗಿ ಈ ಪ್ರಕ್ರಿಯೆ ತ್ವರಿತಗತಿಯಲ್ಲಿ ಆಗಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯ-ಪ್ರವೃತ್ತರಾದರೆ ಕಾರ್ಯಾಗಾರ ಯಶಸ್ವಿಯಾದಂತೆ' ಎಂದರು.

ಕೆಇಆರ್‌ಸಿ ಸದಸ್ಯ (ಕಾನೂನು) ಎಚ್‌.ಕೆ.ಜಗದೀಶ್ ಮಾತನಾಡಿದರು. ಕಾರ್ಯಾಗಾರದಲ್ಲಿ ಕೆಇಆರ್‌ಸಿಯ ತಾಂತ್ರಿಕ ನಿರ್ದೇಶಕರಾದ ಶ್ರೀನಿವಾಸಪ್ಪ, ನಿವೃತ್ತ ನ್ಯಾಯಾಧೀಶರಾದ ಕೃಷ್ಣಯ್ಯ ಹಾಗೂ ಐ.ಎಫ್.ಬಿದರಿ ಅವರು ಅಧಿಕಾರಿಗಳಿಗೆ ಗ್ರಾಹಕರ ಹಕ್ಕುಗಳ ಬಗ್ಗೆ ಇಲಾಖೆ ತಾಂತ್ರಿಕ ವಿಚಾರಗಳು ಹಾಗೂ ಸಾಮಾನ್ಯವಾಗಿ ಎದುರಾಗುತ್ತಿರುವ ದೂರುಗಳ ಬಗ್ಗೆ ವಿವರಿಸಿದರು.

ಕೆಇಆರ್‌ಸಿ ಕಾರ್ಯದರ್ಶಿ ಸಿದ್ದೇಶ್ವರ್, ಬೆಸ್ಕಾಂ ತಾಂತ್ರಿಕ ನಿರ್ದೇಶಕ ಹೆಚ್‌.ಜೆ.ರಮೇಶ್, ಬೆಸ್ಕಾಂ ಹಣಕಾಸು ವಿಭಾಗದ ನಿರ್ದೇಶಕ ಮಹಾದೇವ, ಬೆಸ್ಕಾಂ ಆಡಳಿತ ಮತ್ತು ಮಾನವ ಸಂಪನ್ಮೂಲ ವಿಭಾಗದ ಪ್ರಧಾನ ವ್ಯವಸ್ಥಾಪಕ ಡಾ.ದಯಾನಂದ್, ಗ್ರಾಹಕ ಸಂಬಂಧ ಶಾಖೆಯ ಪ್ರಧಾನ ವ್ಯವಸ್ಥಾಪಕ ರಾಜೋಜಿ ರಾವ್, ನಿಗಮ ವ್ಯವಹಾರಗಳ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಪುಷ್ಪ ಎಸ್‌.ಎ. ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ 66 ಕೆ.ವಿ-ಎಚ್‌ಬಿಆರ್ ಲೈನ್ ಮತ್ತು 66 ಕೆ.ವಿ ಬಾಣಸವಾಡಿ-ಐಟಿಐ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕೈಗೊಳ್ಳುವುದರಿಂದ ಗುರುವಾರ ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಹೊರಮಾವು, ಪಿ ಆ್ಯಂಡ್ ಟಿ ಬಡಾವಣೆ, ನಿಸರ್ಗ ಕಾಲೊನಿ, ನಂದಿನಿ ಕಾಲೊನಿ, ಚಿನ್ನಸ್ವಾಮಪ್ಪ ಬಡಾವಣೆ, ವಿಜಯ ಬ್ಯಾಂಕ್ ಕಾಲೊನಿ, ಎಚ್‌ಆರ್‌ಬಿಆರ್ ಬಡಾವಣೆ, ಕಮ್ಮನಹಳ್ಳಿ ಮುಖ್ಯರಸ್ತೆ, ಕಲ್ಯಾಣನಗರ, ಹೆಣ್ಣೂರು ಗ್ರಾಮ, ಚೆಳ್ಳಿಕೆರೆ, ಮೇಘನ ಪಾಳ್ಯ, ಕೊತ್ತನೂರು, ಬೃಂದಾವನ ಬಡಾವಣೆ, ಮಂಜುನಾಥನಗರ ರಸ್ತೆ, ಸಮದ್ ಬಡಾವಣೆ, ಕುಳ್ಳಪ್ಪ ವೃತ್ತ, ದೊಡ್ಡ ಬಾಣಸವಾಡಿ, ರಾಮಮೂರ್ತಿ ನಗರ ಮುಖ್ಯರಸ್ತೆ, ಕೃಷ್ಣರೆಡ್ಡಿ ಬಡಾವಣೆ, ಚಿಕ್ಕ ಬಾಣಸವಾಡಿ, ಪ್ರಕೃತಿ ಟೌನ್‌ಶಿಪ್, ಬೈರತಿ ಬಂಡೆ, ಬಾಬುಸಾ ಪಾಳ್ಯ, ಆರ್‌.ಎಸ್‌.ಪಾಳ್ಯ, ಬಂಜಾರ ಬಡಾವಣೆ, ಬೆಥೆಲ್ ಬಡಾವಣೆ, ಸಮೃದ್ಧಿ ಬಡಾವಣೆ, ಕಲ್ಕೆರೆ, ಜಯಂತಿನಗರ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ತಿಳಿಸಿದೆ.

ನಗರದಲ್ಲಿ ಇಂದು

'ರಾತ್ರಿ ಪಾಳಿ-ಅಪಾಯಕಾರಿ ಉದ್ದಿಮೆಗಳಲ್ಲಿ ಮಹಿಳೆಯರ ದುಡಿಮೆಯನ್ನು ಕಡ್ಡಾಯಗೊಳಿಸಿರುವುದು ಮತ್ತು ಕನಿಷ್ಠ ವೇತನದಲ್ಲಿ ತಾರತಮ್ಯ ವಿರೋಧಿಸಿ' ದುಂಡು ಮೇಜಿನ ಸಭೆ: ವಿಷಯ ಮಂಡನೆ: ಮೈತ್ರೇಯಿ ಕೃಷ್ಣನ್, ಚರ್ಚೆಗೆ ಚಾಲನೆ: ಎಸ್‌. ವರಲಕ್ಷ್ಮಿ, ಅತಿಥಿ: ಆರ್‌. ಅರ್ಚನಾ, ಅಧ್ಯಕ್ಷತೆ: ಜಯಮ್ಮ, ಭಾಗವಹಿಸುವವರು: ಡಿ. ನಾಗಲಕ್ಷ್ಮಿ, ಪ್ರತಿಭಾ, ರುಕ್ಮಿಣಿ, ಆಯೋಜನೆ: ಜೆಸಿಟಿಯು, ಸ್ಥಳ: ಗಾಂಧಿಭವನ, ಬೆಳಿಗ್ಗೆ 10.30

59ನೇ ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಉಪಸ್ಥಿತಿ: ಎನ್‌. ಚಲುವರಾಯಸ್ವಾಮಿ, ಘಟಿಕೋತ್ಸವ ಭಾಷಣ ಮಾಡುವವರು: ಯು.ಎಸ್‌. ಅವಸ್ಥಿ, ಆಯೋಜನೆ: ಕೃಷಿ ವಿಶ್ವವಿದ್ಯಾಲಯ ಬೆಂಗಳೂರು, ಸ್ಥಳ: ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ ಆವರಣ, ಬೆಳಿಗ್ಗೆ 11

ಅಂಗಳದಲ್ಲಿ ತಿಂಗಳ ಪುಸ್ತಕ ಬಾನು ಮುಷ್ತಾಕ್ ಅವರ 'ಹಸೀನಾ ಮತ್ತು ಇತರ ಕಥೆಗಳು': ಮಾತನಾಡುವವರು: ಎಚ್‌.ಎಲ್‌. ಪುಷ್ಪ, ಉಪಸ್ಥಿತಿ: ಎಂ.ಕೆ. ಶ್ರೀಧರ್, ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಜೈನ್ ವಿಶ್ವವಿದ್ಯಾಲಯ, ಒಂಬತ್ತನೇ ಬಡಾವಣೆ, ಜಯನಗರ, ಮಧ್ಯಾಹ್ನ 2

'ಪರಸಂಗದ ಗೆಂಡೆತಿಮ್ಮ' ನಾಟಕ ಪ್ರದರ್ಶನ: ನಿರ್ದೇಶನ: ಕೆಎಸ್‌ಡಿಎಲ್ ಚಂದ್ರು, ರಂಗ ಸಂಭ್ರಮ: ಉದ್ಘಾಟನೆ: ಸಿ. ಸೋಮಶೇಖರ್, ಅಧ್ಯಕ್ಷತೆ: ಶ್ರೀನಿವಾಸ ಜಿ. ಕಪ್ಪಣ್ಣ, ಅತಿಥಿಗಳು: ರವೀಂದ್ರನಾಥ ಸಿರಿವರ, ದರ್ಶಿನಿ ಮಂಜುನಾಥ್, ವಿ. ಶಿವಣ್ಣಗೌಡ, ಪ್ರಾಸ್ತಾವಿಕ ನುಡಿ: ಜೋಗಿಲ ಸಿದ್ಧರಾಜು, ಆಯೋಜನೆ: ಸಂಭ್ರಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6



ಶ್ರೀನಿವಾಸ ಜಿ.ಕಪ್ಪಣ್ಣ

ಹರಿದಾಸ ಝೇಂಕಾರ: ಗಾಯನ: ಮನಸ್ವಿ ಜಿ. ಕಶ್ಯಪ್, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಪ್ರಮೋದ್ ಗಬ್ಬೂರ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

LOOKING FOR JOB OPPORTUNITY
Refer Classifieds on Wednesday

ಅಸಾಧಾರಣ
ಭಾಗ-II ವಿಭಾಗ 3 ಉಪ-ವಿಭಾಗ (ii)
ರೈಲ್ವೆ ಸಚಿವಾಲಯ
ನೈಋತ್ಯ ರೈಲ್ವೆ
ಅಧಿಸೂಚನೆ
ನವದೆಹಲಿ, ಮೇ 02, 2025

ಎಸ್‌.ಓ. 1987(ಇ).–ರೈಲ್ವೆ ಕಾಯ್ದೆ, 1989 (1989 ರ 24) (ಇನ್ನು ಮುಂದೆ ಸದರಿ ಕಾಯ್ದೆ ಎಂದು ಉಲ್ಲೇಖಿಸಲಾಗಿದೆ) ರ ಸೆಕ್ಷನ್ 20ಎ ರ ಉಪವಿಭಾಗ (1) ರಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಕೇಂದ್ರ ಸರ್ಕಾರವು ಸಾರ್ವಜನಿಕ ಉದ್ದೇಶಕ್ಕಾಗಿ, ಕರ್ನಾಟಕ ರಾಜ್ಯದಲ್ಲಿ ಕ್ಯಾತಸಂದ್ರ – ತುಮಕೂರು @ ಚೈ. 65/300-400 (ಬಡ್ಡಿಬಳ್ಳಿ ರಸ್ತೆ, ಅಗ್ನಿಶಾಮಕ ಠಾಣೆಯ ಬಳಿ, ಕ್ಯಾತಸಂದ್ರ ಗ್ರಾಮ) ಎಂಬ ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನಕ್ಕೆ, ಇಲ್ಲಿ ಲಗತ್ತಿಸಲಾದ ಷೆಡ್ಯೂಲ್‌ನಂತೆ ಸಂಕ್ಷಿಪ್ತ ವಿವರಣೆಯನ್ನು ನೀಡಲಾದ ಭೂಮಿಯನ್ನು ಅಗತ್ಯವಿದೆ ಎಂದು ತೃಪ್ತಿಪಡಿಸಿದ ನಂತರ, ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಈ ಮೂಲಕ ಘೋಷಿಸುತ್ತದೆ.

ಸದರಿ ಭೂಮಿಯಲ್ಲಿ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಯು, ಅಧಿಕೃತ ಗೆಜೆಟ್‌ನಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಕದಿಂದ ಮೂವತ್ತು ದಿನಗಳ ಒಳಗೆ, ಸದರಿ ಕಾಯಿದೆಯ ಸೆಕ್ಷನ್ 20ಡಿ ಯ ಉಪ-ವಿಭಾಗ (1) ರ ಅಡಿಯಲ್ಲಿ ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತು ಬಳಸಲು ಆಕ್ಷೇಪಣೆ ಸಲ್ಲಿಸಬಹುದು.

ಅಂತಹ ಪ್ರತಿಯೊಂದು ಆಕ್ಷೇಪಣೆಯನ್ನು, ಕ್ಯಾತಸಂದ್ರ – ತುಮಕೂರು @ ಚೈ. 65/300-400 (ಬಡ್ಡಿಹಳ್ಳಿ ರಸ್ತೆ, ಅಗ್ನಿಶಾಮಕ ಠಾಣೆ ಬಳಿ, ಕ್ಯಾತಸಂದ್ರ ಗ್ರಾಮ) ನಲ್ಲಿ ಎಲ್‌ಸಿ ಸಂಖ್ಯೆ 38ರ ಬದಲಿಗೆ ಆರ್‌ಓಬಿ ನಿರ್ಮಾಣಕ್ಕಾಗಿ ಸಕ್ಷಮ ಪ್ರಾಧಿಕಾರಕ್ಕೆ, ಅಂದರೆ ಧಾರವಾಡದ ಉಸ್ತುವಾರಿ ಭೂಸ್ವಾಧೀನ ಅಧಿಕಾರಿ ಸಹಾಯಕ ಆಯುಕ್ತರು ಮತ್ತು ಬೆಳಗಾವಿಯ ಪ್ರಾದೇಶಿಕ ಆಯುಕ್ತರಿಗೆ ಲಿಖಿತವಾಗಿ ಸಲ್ಲಿಸಬೇಕು ಮತ್ತು ಅದರ ಆಧಾರವನ್ನು ನಿಗದಿಪಡಿಸಬೇಕು ಮತ್ತು ಸಕ್ಷಮ ಪ್ರಾಧಿಕಾರವು ಆಕ್ಷೇಪಣೆದಾರರಿಗೆ ವೈಯಕ್ತಿಕವಾಗಿ ಅಥವಾ ಕಾನೂನು ವೃತ್ತಿಪರರ ಮೂಲಕ ಅಹವಾಲು ಸಲ್ಲಿಸಲು ಅವಕಾಶವನ್ನು ನೀಡಬೇಕು ಮತ್ತು ಅಂತಹ ಎಲ್ಲಾ ಆಕ್ಷೇಪಣೆಗಳನ್ನು ಆಲಿಸಿದ ನಂತರ ಮತ್ತು ಸಕ್ಷಮ ಪ್ರಾಧಿಕಾರವು ಅಗತ್ಯವೆಂದು ಭಾವಿಸಿದಂತೆ ಹೆಚ್ಚಿನ ವಿಚಾರಣೆಯನ್ನು ನಡೆಸಿದ ನಂತರ, ಆದೇಶದ ಮೂಲಕ, ಆಕ್ಷೇಪಣೆಗಳನ್ನು ಅನುಮತಿಸಬಹುದು ಅಥವಾ ನಿರಾಕರಿಸಬಹುದು.

ಸದರಿ ಕಾಯ್ದೆಯ ಸೆಕ್ಷನ್ 20ಡಿ ಯ ಉಪ-ವಿಭಾಗ (2) ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಮಾಡಿದ ಯಾವುದೇ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯ ಅಡಿಯಲ್ಲಿ ಬರುವ ಭೂಮಿಯ ನಕ್ಷೆಗಳು ಮತ್ತು ಇತರ ವಿವರಗಳು ಲಭ್ಯವಿದೆ ಮತ್ತು ಆಸಕ್ತ ವ್ಯಕ್ತಿಯು ಮೇಲೆ ತಿಳಿಸಲಾದ ಸಕ್ಷಮ ಪ್ರಾಧಿಕಾರದ ಕಚೇರಿಯಲ್ಲಿ ಪರಿಶೀಲಿಸಬಹುದು.

ಷೆಡ್ಯೂಲ್

ಕರ್ನಾಟಕ ರಾಜ್ಯದಲ್ಲಿ ಸರ್ವೀಸ್ ರಸ್ತೆಯೊಂದಿಗೆ ಎರಡು ಪಥದ ಆರ್‌ಓಬಿ ನಿರ್ಮಾಣಕ್ಕಾಗಿ ಲೆವೆಲ್ ಕ್ರಾಸಿಂಗ್ ಸಂಖ್ಯೆ 38 (ಬಡ್ಡಿಹಳ್ಳಿ ಗೇಟ್) ಬದಲಿಗೆ ಸೇತುವೆಗಳ ಪ್ರಸ್ತಾವಿತ ವಿಶೇಷ ರೈಲ್ವೆ ಯೋಜನೆಗೆ ಒಳಪಡುವ, ರಚನೆಯೊಂದಿಗೆ ಅಥವಾ ಇಲ್ಲದೆ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ಜಿಲ್ಲೆ: ತುಮಕೂರು **ತಾಲ್ಲೂಕು:** ತುಮಕೂರು
ಹೋಬಳಿ: ಕಸಬಾ **ಗ್ರಾಮ:** ದೇವರಾಯಪಟ್ಟಣ (ಕ್ಯಾತಸಂದ್ರ ಪ್ರದೇಶ)

ಕ್ರ. ಸಂ.	ಸ. ಸಂ.	ಫಲಾನುಭವಿ	ವಿಸ್ತಾರ (ಎಕರೆಗಳಲ್ಲಿ – ಗುಂಟಾದಲ್ಲಿ) ಒಟ್ಟು (ಎ-ಗುಂ)	ಎ ಖರಾಬ್ (ಎ-ಗುಂ)	ಬಿ ಖರಾಬ್ (ಎ-ಗುಂ)	ಸಮತೋಲನ (ಎ-ಗುಂ)	ಭೂಮಿಯ ವರ್ಗೀಕರಣ
1.	104/2	ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಮಹಾನಿರ್ದೇಶಕರು	0-07	–	–	0-07	ಒಣ
2.	105	ಸರ್ಕಾರ ಭೂಮಿ	0-06	–	0-06	–	ಸರ್ಕಾರ ಭೂಮಿ
3.	107/2	ಕೆ.ಎಸ್‌. ಶಾಂತಯ್ಯ	0-13	–	0-00 1/4	0-12 3/4	ಒಣ
4.	107/3	ಕೆ.ಎಸ್‌. ಶಾಂತಯ್ಯ, ಗಂಗಾಂಬಿಕಾ ಬಿನ್ ದಿವಂಗತ ಉಮೇಶ್ (ಜಂಟಿ)	0-02	–	–	0-02	ಒಣ
		ಒಟ್ಟು	**0-28**	–	**0-06 1/4**	**0-21 3/4**	–

[F. No.W.271/CN/BNC/2025-26/Land SRP/1727]
ಪರ್‌ದೀಪ್ ಪುರಿ, ಮುಖ್ಯ ಇಂಜಿನಿಯರ್/III
PUB/105/AAF/PRB/SWR/2025-26

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್‌.ಆರ್‌.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: **STRRPA/TP/CLU/05/2025-26** **ಪ್ರಕಟಣೆ** ದಿನಾಂಕ: 13.05.2025

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ"** ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ. (1)	ಅರ್ಜಿದಾರರ ಹೆಸರು ಮತ್ತು ವಿಳಾಸ (2)	ತಾಲ್ಲೂಕು (3)	ಹೋಬಳಿ (4)	ಗ್ರಾಮ (5)	ಸರ್ವೆ ನಂ. (6)	ವಿಸ್ತೀರ್ಣ ಎ-ಗು (7)	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ (8)	ಬದಲಾವಣೆ ಕೋರಿರುವ ಭೂ ಉಪಯೋಗ (9)
1	M/s. Trishul Buildtech and Infrastructures Pvt. Ltd.	ದೇವನಹಳ್ಳಿ	ಕಸಬಾ	ಬಿದಲೂರು	234/5	0-24¾ (0-01ಗುಂ 'ಎ' ಖರಾಬು ಸೇರಿ),	ವ್ಯವಸಾಯ	ವಸತಿ
2	ಶ್ರೀ ನಾರಾಯಣಸ್ವಾಮಿ ಹೆಚ್. ಬಿನ್ ಲೇಟ್ ಹನುಮಂತಪ್ಪ, ಶ್ರೀ ರಾಮಚಂದ್ರಪ್ಪ ಹೆಚ್. ಬಿನ್ ಲೇಟ್ ಹನುಮಂತಪ್ಪ, ಶ್ರೀಮತಿ ಆಂಜಿನಮ್ಮ ಬಿನ್ ಲೇಟ್ ಪಟಾಲಪ್ಪ, ಶ್ರೀ ಸಂಜೀವಪ್ಪ ಬಿನ್ ಲೇಟ್ ಕೋಳಿ ಆಂಜಿನಪ್ಪ, ಶ್ರೀ ಕೃಷ್ಣಪ್ಪ ಬಿನ್ ಲೇಟ್ ಕೋಳಿ ಆಂಜಿನಪ್ಪ ಇವರುಗಳ ಪರವಾಗಿ ಜಿಪಿಎದಾರರು M/s. Trishul Buildtech and Infrastructures Pvt. Ltd.	ದೇವನಹಳ್ಳಿ	ಕಸಬಾ	ಗುಂಡ್ಲಹಳ್ಳಿ	2/1	2-01 (0-01ಗುಂ 'ಎ' ಖರಾಬು ಸೇರಿ),	ವ್ಯವಸಾಯ	ವಸತಿ
3	Infra Galaxy Private limited	ದೇವನಹಳ್ಳಿ	ಕಸಬಾ	ಗುಂಡ್ಲಹಳ್ಳಿ	34	2-00	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ' ವಲಯಕ್ಕೆ** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

"ಸದಸ್ಯ ಕಾರ್ಯದರ್ಶಿರವರ ದಿನಾಂಕ: 17.03.2025ರ ಅಧಿಕೃತ ಜ್ಞಾಪನ ಪತ್ರದಲ್ಲಿ ಅಧಿಕಾರ ಪ್ರತ್ಯೋಜಿಸಿರುವಂತೆ ಸಹಿ ಮಾಡಿದೆ."

ಸಹಿ/–
ಸದಸ್ಯ ಕಾರ್ಯದರ್ಶಿಗಳ ಪರವಾಗಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/656/ಆಕಾರ್/2025-26

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ENGLISH LECTURER To Teach in PU COLLEGE. MATHS TEACHER To Teach in PRIMARY SCHOOL. Apply In-Person. SECRETARY, STRACEY MEMORIAL COMP PU COLLEGE #52 St.Mark's Road Bengaluru-01

Wanted

REQUIRED OFFICE BOY/ ATTENDAR, SECURITY GUARD, AAYA, BUS DRIVER (School Bus). Contact: CAMLIN ENGLISH SCHOOL, 4th Cross, Near 7th Main Bus Stop, Hampinagar, Bangalore-560104. Phone: 080-23301363

PERSONAL

Change of Name

I, HITHERTO Known as Sandeep B S/O Basheer Kaka Residing at No 468/3 Ramappa Building, Kanakapura Road, Near Hemavathi Kalyana Mantapa, Doddakallasandra, Bangalore South, Po: Doddakallasandra, Dist: Bengaluru, Karnataka-560062, Have Changed My Name and Shall Hereafter Be Known as Sannu B For All Future Purposes

CHANGE OF NAME
I, **CHANDRASHEKARA. B** S/o Late **BYRAPPA R D,** R/at # 13, Rampura, Hagalahalli Post, Kasaba Hobli, Ramanagara Taluk & Dist., have changed my name to **CHANDRASHEKAR. B** S/o **BYRAPPA R D (BYRAPPA),** vide affidavit dt:14-05-2025, before notary T V Indira, Ramanagara

CHANGE OF NAME
I, MADHURI G. W/o. Umesh MC R/a #406, Karishma Palace, Raja Garden Layout, Turahalli, Bengaluru- 560061, declare that **MADHURI G.** and **MADHURI UMESH** both Names refer to one and the same person, i.e. my myself only. And have changed my Name to **MADHURI G**. Vide affidavit dated 9.5.2025 before Notary Mohammed Hussain K. Bangalore.

I, ANJANA EBRAHIM, R/a 106, Rhythm Classic, Doddathoguru E City, Bengaluru- 560100, have changed my name to ANJANA KISHORE, vide affidavit dated 14.05.2025 before notary K. V. Mani, Bengaluru

TOURS & TRAVEL

Travel

VISIT HIMALAYAN Kingdom Nepal with Expert Guide Manager. All Inclusive Best Arrangements. GANESH SHENOY 8970126393

EDUCATION SUCCESS ಕ್ಲಾಸಿಫೈಡ್ಸ್

VIDYASHREE HIGH SCHOOL
Affiliated to CBSE, New Delhi, Affl. No. 830751
Anjananagar, Magadi Main Road, Bengaluru - 560091
Hearty Congratulations to 'VIDYASHRITES' for an Iconic Success of Grade-X 2024-25

100% Result of AISSE
Admission Open for Nursery to Grade-IX Academic Year 2025-26

ಲಲಿತ್ ಕ್ಯಾಸಲ್ ಇಂಟರ್‌ನ್ಯಾಷನಲ್ ಸ್ಕೂಲ್
100% RESULTS
CBSE, ನವದೆಹಲಿಗೆ ಸಂಯೋಜಿತವಾಗಿದೆ. ಅಂಗಸಂಸ್ಥೆ ಸಂಖ್ಯೆ.830998
102/1, ಹೆಚ್.ವಿ. ಹಳ್ಳಿ ಮುಖ್ಯ ರಸ್ತೆ ರಾಜರಾಜೇಶ್ವರಿ ನಗರ, ಬೆಂಗಳೂರು-98.
CBSE 10TH TOPPERS 2024-25

CONNECT ಕ್ಲಾಸಿಫೈಡ್ಸ್

Bharatanatya Rangapravesha of **Kum.Namratha Nagaraju,** disciple of Vid.Smt.Kanchan Sathyavanth, Artistic Director, Srishtikala School of Fine Arts, Bangalore, daughter of Smt Poornima and Sri Nagaraju, on Friday, 16th May 2025 at 5.30pm at A. D. A. Ranga Mandira, 109, JC Rd, Kumbaragundi, Kalasipalya, Bengaluru, Karnataka 560002

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
RES-25603
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466

DH Classifieds More value, more impact
REAL ESTATE ಪ್ರಜಾವಾಣಿ
BOOK YOUR REAL ESTATE ADS IN
DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9886213331 | 080-45557163/164
*Conditions apply

ಉತ್ತರ ಪ್ರದೇಶ, ಬಿಹಾರದ 12 ಮಂದಿ ಬಂಧನ

ಕಮಿಷನ್ ಆಸೆ ತೋರಿಸಿ ವಂಚನೆ

ಪ್ರಜಾವಾಣಿ ವಾರ್ತೆ

ಹರ್ಷವರ್ಧನ್ | ಸೋನು | ಪ್ರಕಾಶ್ ಯಾದವ್ | ಗೋರಖನಾಥ್ | ಸಂಜಿತ್ ಕುಮಾರ್ | ಆಕಾಶ್ ಸಿಂಗ್

ಅಮಿತ್ ಯಾದವ್ | ಗೌರವ್ ಪ್ರತಾಪ್ ಸಿಂಗ್ | ಬ್ರಿಜೇಶ್ ಸಿಂಗ್ | ರಾಜ್ ಮಿಶ್ರಾ | ತುಷಾರ್ ಮಿಶ್ರಾ | ಗೌತಮ್ ಶೈಲೇಶ್

ಬೆಂಗಳೂರು: ಕಮಿಷನ್ ರೂಪದಲ್ಲಿ ಹೆಚ್ಚಿನ ಲಾಭ ನೀಡುವುದಾಗಿ ಹೇಳಿ ವಿವಿಧ ಯುಪಿಐಗಳು ಹಾಗೂ ಬ್ಯಾಂಕ್ ಖಾತೆಗಳ ಮೂಲಕ ಹಣ ವರ್ಗಾವಣೆ ಮಾಡಿಸಿಕೊಂಡು ವಂಚಿಸುತ್ತಿದ್ದ ಅಂತರ ರಾಜ್ಯದ 12 ಆರೋಪಿಗಳನ್ನು ಆಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹರ್ಷವರ್ಧನ್ (25), ಸೋನು(27), ಪ್ರಕಾಶ್ ಯಾದವ್(23), ಗೋರಖನಾಥ್(20), ಸಂಜಿತ್ ಕುಮಾರ್(25), ಆಕಾಶ್ ಕುಮಾರ್ ಸಿಂಗ್ (19), ಅಮಿತ್ ಯಾದವ್ (19), ಗೌರವ್ ಪ್ರತಾಪ್ ಸಿಂಗ್(22), ಬ್ರಿಜೇಶ್ ಸಿಂಗ್ (20), ರಾಜ್ ಮಿಶ್ರಾ(21), ತುಷಾರ್ ಮಿಶ್ರಾ(22), ಗೌತಮ್ ಶೈಲೇಶ್ (25) ಬಂಧಿತರು.

ಬಂಧಿತರು ಉತ್ತರ ಪ್ರದೇಶ ಹಾಗೂ ಬಿಹಾರದ ವಿವಿಧ ಪ್ರದೇಶಗಳ ನಿವಾಸಿಗಳು ಎಂದು ಗೊತ್ತಾಗಿದೆ.

ಠಾಣಾ ವ್ಯಾಪ್ತಿಯ ಎಲ್.ಆರ್. ನಗರದ ನಿವಾಸಿ ಸುಮಿಯಾ ಬಾನು ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘ದೂರುದಾರರ ಮೊಬೈಲ್ ಸಂಖ್ಯೆಗೆ ಅಪರಿಚಿತ ವ್ಯಕ್ತಿಯೊಬ್ಬ ಮನೆಯಿಂದಲೇ ಕೆಲಸ ಮಾಡುವ ಅವಕಾಶ ಇರುವುದಾಗಿ ಸಂದೇಶ ಕಳುಹಿಸಿದ್ದ. ಕೆಲಸ ಪೂರ್ಣಗೊಳಿಸಿದರೆ ಕಮಿಷನ್ ಹಣ ನೀಡುವುದಾಗಿ ಹೇಳಿದ್ದ’ ಎಂದು ಪೊಲೀಸರು ಹೇಳಿದರು.

ಹೆಚ್ಚಿನ ಕಮಿಷನ್ ಆಸೆ: ದೂರುದಾರಿಗೆ ಸೈಬರ್ ವಂಚಕರು ಕೆಲಸವೊಂದನ್ನು ನೀಡಿದ್ದರು. ದೂರುದಾರರು ಕೆಲಸ ಪೂರ್ಣಗೊಳಿಸಿದ್ದರು. ಕಮಿಷನ್ ಹಣ ಡ್ರಾ ಮಾಡಿಕೊಳ್ಳಲು ತಮ್ಮ ಪ್ಲಾಟ್‌ಫಾರ್ಮ್‌ನಲ್ಲಿ ನೋಂದಣಿ ಮಾಡಿಕೊಳ್ಳುವಂತೆ ತಿಳಿಸಿದ್ದರು. ನೋಂದಣಿ ಮಾಡಿಕೊಂಡ ಬಳಿಕ ದೂರುದಾರ ಖಾತೆಗೆ ಕಮಿಷನ್ ರೂಪದಲ್ಲಿ ₹800 ಅನ್ನು ವಂಚಕರು ಜಮೆ ಮಾಡಿದ್ದರು. ಉಳಿದ ಹಣ ಡ್ರಾ ಮಾಡಿಕೊಳ್ಳಲು ₹8 ಸಾವಿರ ಜಮೆ ಮಾಡುವಂತೆ ಸೂಚಿಸಿದ್ದರು. ಆ ಹಣ ಜಮೆ ಮಾಡಿದ ಬಳಿಕ, ದೂರುದಾರರ ಖಾತೆಗೆ ಮತ್ತೆ ₹20 ಸಾವಿರ ಹಾಕಿದ್ದರು’ ಎಂದು ಪೊಲೀಸರು ಹೇಳಿದರು.

‘ದೂರುದಾರರಿಗೆ ಸೈಬರ್ ವಂಚಕರು ಆಸೆ ಹುಟ್ಟುವಂತೆ ಹಾಗೂ ನಂಬಿಕೆ ಬರುವಂತೆ ಮಾಡಿದ್ದರು. ಸ್ಕೋರ್ ಬ್ಯಾಲೆನ್ಸ್ ಶೀಟ್‌ನಲ್ಲಿ ₹10,83,502 ಇರುವಂತೆ ತೋರಿಸಿದ್ದರು. ಆ ಹಣವು ಬ್ಯಾಂಕ್ ಖಾತೆಗೆ ಜಮೆಯಾಗಬೇಕಾದರೆ ₹5 ಲಕ್ಷ ಹಣ ಜಮೆ ಮಾಡುವಂತೆ ಸೂಚಿಸಿದ್ದರು. ಸೈಬರ್ ವಂಚಕರು ತಿಳಿಸಿದಂತೆ ದೂರುದಾರರು, ಅಪರಿಚಿತರ ವಿವಿಧ ಬ್ಯಾಂಕ್ ಖಾತೆಗಳಿಗೆ ಹಣ ಜಮೆ ಮಾಡಿದ್ದರು. ಇನ್ನೂ ಹೆಚ್ಚಿನ ಹಣ ಬೇಕಾದರೆ, ಮತ್ತೆ ₹3.24 ಲಕ್ಷ ಜಮೆ ಮಾಡುವಂತೆ ವಂಚಕರು ತಿಳಿಸಿದ್ದರು. ಆಗ ಅನುಮಾನಗೊಂಡು ದೂರು ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಪ್ರಕರಣ ದಾಖಲಿಸಿಕೊಂಡು ದೂರುದಾರರು ಹಣ ವರ್ಗಾವಣೆ ಮಾಡಿದ್ದ ಬ್ಯಾಂಕ್ ಖಾತೆಯ ವಿವರ ಪಡೆದು ಖಾತೆದಾರರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಅವರನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದಾಗ ಆರೋಪಿಗಳ ಕೃತ್ಯ ಬಯಲಾಯಿತು’ ಎಂದು ಪೊಲೀಸರು ಹೇಳಿದರು.

ಒಂದು ಬ್ಯಾಂಕ್ ಖಾತೆಗೆ ₹20 ಸಾವಿರ ಕಮಿಷನ್

ಹಣ ವರ್ಗಾವಣೆಯಾದ ಬ್ಯಾಂಕ್ ಖಾತೆ ಉತ್ತರ ಪ್ರದೇಶದ ಫೆಡರಲ್ ಬ್ಯಾಂಕ್‌ನಲ್ಲಿ ಕಾರ್ಮಿಕನೊಬ್ಬನದ್ದು ಎಂದು ಪರಿಶೀಲನೆ ವೇಳೆ ಕಂಡುಬಂದಿತ್ತು. ಆತನಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಿದಾಗ ಮುಂಬೈನ ಗುತ್ತಿಗೆದಾರ (ಲೇಬರ್ ಕಂಟ್ರ್ಯಾಕ್ಟರ್) ಸೋನು ಎಂಬಾತ ಕಾರ್ಮಿಕನ ವೈಯಕ್ತಿಕ ದಾಖಲೆ ಪಡೆದು ಬ್ಯಾಂಕ್ ಖಾತೆ ತೆರೆದಿದ್ದು ಗೊತ್ತಾಗಿತ್ತು. ಪಾಸ್‌ಬುಕ್ ಸೇರಿ ಬ್ಯಾಂಕ್ ದಾಖಲಾತಿಗಳು ಆತನ ವಶದಲ್ಲಿರುವ ಮಾಹಿತಿ ಸಿಕ್ಕಿತ್ತು. ಈ ಮಾಹಿತಿ ಆಧರಿಸಿ ವಿಶೇಷ ತಂಡವು ಮುಂಬೈಗೆ ತೆರಳಿ ಸೋನು ಎಂಬಾತನನ್ನು ವಶಕ್ಕೆ ಪಡೆದುಕೊಂಡಿತು ಎಂದು ಮೂಲಗಳು ತಿಳಿಸಿವೆ.

‘ಸೋನು ತನ್ನ ಬಳಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಬ್ಯಾಂಕ್ ಖಾತೆಗಳ ವಿವರವನ್ನು ಉತ್ತರ ಪ್ರದೇಶದ ರಾಜ್ ಮಿಶ್ರಾ ಸೇರಿ ಮೂವರು ಆರೋಪಿಗಳಿಗೆ ನೀಡಿ ಕಮಿಷನ್ ರೂಪದಲ್ಲಿ ಹಣ ಪಡೆಯುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ರಾಜ್ ಮಿಶ್ರಾ ನೀಡಿದ ಮಾಹಿತಿ ಆಧರಿಸಿ ಪ್ರಯಾಗರಾಜ್‌ನಲ್ಲಿ 10 ಮಂದಿಯನ್ನು ಬಂಧಿಸಲಾಯಿತು. ರಾಷ್ಟ್ರೀಕೃತ ಬ್ಯಾಂಕ್ ಖಾತೆಯ ವಿವರ ನೀಡಿದರೆ ₹18 ಸಾವಿರದಿಂದ ₹20 ಸಾವಿರ (ಒಂದು ಖಾತೆಗೆ) ಹಾಗೂ ಸ್ಥಳೀಯ ಬ್ಯಾಂಕ್ ಖಾತೆ ವಿವರ ನೀಡಿದರೆ ₹3 ಸಾವಿರವನ್ನು ಸೈಬರ್ ವಂಚಕರು ನೀಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

400 ಸಿಮ್, 140 ಎಟಿಎಂ ಕಾರ್ಡ್ ಜಪ್ತಿ

ಆರೋಪಿಗಳಿಂದ 400 ಸಿಮ್ ಕಾರ್ಡ್, 140 ಎಟಿಎಂ ಕಾರ್ಡ್‌ಗಳು, 17 ಚೆಕ್‌ಬುಕ್, 27 ಮೊಬೈಲ್ ಫೋನ್, ವಿವಿಧ ಬ್ಯಾಂಕ್‌ಗಳ 27 ಪಾಸ್‌ಬುಕ್, ಆದಾಯ ಹಾಗೂ ಖರ್ಚುವೆಚ್ಚು ನಮೂದಿಸಿದ್ದ ಸ್ಪೈರಲ್ ಬೈಂಡ್ ಪುಸ್ತಕ, ₹15 ಸಾವಿರ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಉದ್ಯೋಗ ಕೊಡಿಸುವುದಾಗಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುರಾಷ್ಟ್ರೀಯ ಕಂಪನಿಗಳಲ್ಲಿ(ಎಂಎನ್‌ಸಿ) ಉದ್ಯೋಗ ಕೊಡಿಸುವುದಾಗಿ ನಂಬಿಸಿ ಎಂಟು ಅಭ್ಯರ್ಥಿಗಳಿಂದ ₹14.23 ಲಕ್ಷ ಹಣ ಪಡೆದು ವಂಚಿಸಿದ್ದ ಆರೋಪಿಯನ್ನು ಕೇಂದ್ರ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಜೆ.ಪಿ. ನಗರದ ಐದನೇ ಹಂತದಲ್ಲಿ ನೆಲಸಿದ್ದ ಪತ್ನೂಲ್ ಖಲಂದರ್ ಖಾನ್ (43) ಬಂಧಿತ ಆರೋಪಿ.

ಇದೇ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪಿಗಳಾದ ವೀರೇಶ್ ಹಾಗೂ ಇನಾಯತ್ ತಲೆಮರೆಸಿಕೊಂಡಿದ್ದಾರೆ. ಅವರ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದರು.

ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪತ್ನೂಲ್ ಖಲಂದರ್ ಖಾನ್

ಆರೋಪಿಯಿಂದ ₹1.50 ಲಕ್ಷ ಜಪ್ತಿ ಮಾಡಿಕೊಳ್ಳಲಾಗಿದೆ.

ಅಭ್ಯರ್ಥಿ ಗೀತಾ ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು ಎಂದು ಪೊಲೀಸರು ಹೇಳಿದರು.

‘2024ರಲ್ಲಿ ಉದ್ಯೋಗ ಅರಸಿ ಬೆಂಗಳೂರಿಗೆ ಬಂದಿದ್ದ ಪತ್ನೂಲ್ ಖಲಂದರ್‌ಗೆ ಸೂಕ್ತ ಕೆಲಸ ಸಿಕ್ಕಿರಲಿಲ್ಲ. ನಂತರ, ಬಿಟಿಎಂ ಲೇಔಟ್‌ನ ಡಾಲರ್ಸ್ ಕಾಲೊನಿಯಲ್ಲಿರುವ ಮ್ಯಾಗ್ನಾಮಿಕ್ಸ್ ಸರ್ವಿಸ್ ಕಂಪನಿಯಲ್ಲಿ ಕೆಲಸ ಸಿಕ್ಕಿತ್ತು. ಕಂಪನಿಯ ಮಾನವ ಸಂಪನ್ಮೂಲ ವಿಭಾಗದಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ ಆರೋಪಿ, ಸಿಂಥೆಟಿಕ್ ಸಾಫ್ಟ್‌ವೇರ್ ಕಂಪನಿ ಹಾಗೂ ಮ್ಯಾಗ್ನಾಮಿಕ್ಸ್ ಸರ್ವಿಸ್ ಕಂಪನಿಗೆ ಕೆಲಸಕ್ಕೆ ಬರುತ್ತಿದ್ದ ಅಭ್ಯರ್ಥಿಗಳ ಬಳಿ ಇನ್ನೂ ಉತ್ತಮ ಎಂಎನ್‌ಸಿಗಳಲ್ಲಿ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿ, ಎಂಟು ಅಭ್ಯರ್ಥಿಗಳಿಂದ ಹಣ ಪಡೆದುಕೊಂಡಿದ್ದ. ಕೃತ್ಯಕ್ಕೆ ವೀರೇಶ್ ಹಾಗೂ ಇನಾಯತ್ ಬೆಂಬಲ ನೀಡಿದ್ದರು. ಹಣ ನೀಡಿದ ಅಭ್ಯರ್ಥಿಗಳು, ಆರೋಪಿ ಪತ್ನೂಲ್ ಖಲಂದರ್ ಖಾನ್ ಬಳಿ ಕೆಲಸದ ಬಗ್ಗೆ ವಿಚಾರಣೆ ನಡೆಸುತ್ತಿದ್ದರು. ಅಭ್ಯರ್ಥಿಗಳಿಗೆ ಆರೋಪಿ ಭರವಸೆ ನೀಡುತ್ತಲೇ ದಿನದೂಡುತ್ತಿದ್ದ. ಕೆಲವು ತಿಂಗಳುಗಳು ಕಳೆದ ಬಳಿಕ ವಂಚನೆ ಎಂಬುದು ಗೊತ್ತಾಗಿ ದೂರು ನೀಡಿದ್ದರು’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಬಾಷ್, ಮೈಕ್ರೊಸಾಫ್ಟ್ ಸೇರಿದಂತೆ ವಿವಿಧ ಎಂಎನ್‌ಸಿ ಕಂಪನಿಗಳಲ್ಲಿ ಕೆಲಸ ಕೊಡಿಸುವುದಾಗಿ ಪ್ರತಿ ಅಭ್ಯರ್ಥಿಯಿಂದ ₹2.70 ಲಕ್ಷ ಹಣವನ್ನು ಆರೋಪಿಗಳು ಪಡೆದುಕೊಂಡಿದ್ದರು. ಅಭ್ಯರ್ಥಿಗಳಿಂದ ಹಂತ ಹಂತವಾಗಿ ಫೋನ್ ಪೇ ಹಾಗೂ ಗೂಗಲ್ ಮೂಲಕ ಹಣ ಪಡೆದುಕೊಂಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಂಧ್ರದಲ್ಲಿ 80 ಪ್ರಕರಣ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಶ್ರೀನಿವಾಸ್

ಬೆಂಗಳೂರು: ಮನೆ ಕಳ್ಳತನ ಹಾಗೂ ಸೈಬರ್ ವಂಚನೆ ಸೇರಿ ವಿವಿಧ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ಆರೋಪಿಯನ್ನು ಕೊಡಿಗೆಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಕಾಮೆಪಲ್ಲಿ ಮೂಲದ ಶ್ರೀನಿವಾಸ್ (35) ಬಂಧಿತ ಆರೋಪಿ.

ಆರೋಪಿಯ ವಿರುದ್ಧ ಆಂಧ್ರಪ್ರದೇಶದ ವಿವಿಧ ಪೊಲೀಸ್ ಠಾಣೆಗಳಲ್ಲಿ 80ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ ₹9.20 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

‘ಶ್ರೀನಿವಾಸ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಪದವಿ ಪಡೆದಿದ್ದ. ಆರಂಭದಲ್ಲಿ ಆಂಧ್ರಪ್ರದೇಶದಲ್ಲಿ ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ. ನಂತರ, ಆನ್‌ಲೈನ್ ಗೇಮ್‌ನ ಗೀಳಿಗೆ ಬಿದ್ದು, ಹಣ ಕಳೆದುಕೊಂಡಿದ್ದ. ಸಾಲ ತೀರಿಸಲು ಕಳ್ಳತನ ಮಾಡಲು ಆರಂಭಿಸಿದ್ದ. 2008ರಲ್ಲಿ ಮೊದಲ ಬಾರಿಗೆ ಲ್ಯಾಪ್‌ಟಾಪ್ ಕಳ್ಳತನ ಮಾಡಿದ್ದ. ಈ ಪ್ರಕರಣದಲ್ಲಿ ಶ್ರೀನಿವಾಸ್ ಜೈಲು ಸೇರಿದ್ದ’ ಎಂದು ಪೊಲೀಸರು ಮಾಹಿತಿ ನೀಡಿದರು.

‘ಆಂಧ್ರಪ್ರದೇಶದ ವಿವಿಧೆಡೆ 80ಕ್ಕೂ ಹೆಚ್ಚು ಸ್ಥಳಗಳಲ್ಲಿ ಆರೋಪಿ ಕಳ್ಳತನ ಮಾಡಿದ್ದ. ಅಲ್ಲಿಂದ ಮೈಸೂರಿಗೆ ಬಂದು ಬಾಡಿಗೆಗೆ ಮನೆ ಪಡೆದು ನೆಲಸಿದ್ದ. ಅಲ್ಲಿಂದಲೇ ಬೆಂಗಳೂರು, ಧಾರವಾಡ, ಬೀದರ್‌ಗೆ ತೆರಳಿ ಕಳ್ಳತನ ಮಾಡುತ್ತಿದ್ದ. ಕಳೆದ ಏಪ್ರಿಲ್ 20ರಂದು ಕೊಡಿಗೆಹಳ್ಳಿಯ ಬಾಲಾಜಿ ಲೇಔಟ್‌ನಲ್ಲಿ ಎರಡು ಹಾಗೂ ಪಾರ್ವತಮ್ಮ ಲೇಔಟ್‌ನ ಒಂದು ಮನೆಯಲ್ಲಿ ಚಿನ್ನಾಭರಣ, ಬೆಳ್ಳಿಯ ವಸ್ತುಗಳನ್ನು ಕದ್ದು ಆರೋಪಿ ಪರಾರಿ ಆಗಿದ್ದ. ತನಿಖೆ ಕೈಗೊಂಡು ನಾಗವಾರದ ಬಳಿ ಪಿ.ಜಿಯೊಂದರ ಎದುರು ಆರೋಪಿಯನ್ನು ಬಂಧಿಸಲಾಯಿತು. ಕದ್ದ ಚಿನ್ನ ಹಾಗೂ ಬೆಳ್ಳಿ ಸಾಮಗ್ರಿಯನ್ನು ಪೇಯಿಂಗ್ ಗೆಸ್ಟ್ ಹಾಗೂ ಸ್ನೇಹಿತನ ಮನೆಯಲ್ಲಿ ಬಚ್ಚಿಟ್ಟಿದ್ದ’ ಎಂದು ಪೊಲೀಸರು ಹೇಳಿದರು.

ಸಿಬಿಎಸ್‌ಇ: ಹರ್ಷ ಶಾಲೆಗೆ ಶೇ 100 ಫಲಿತಾಂಶ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಪಟ್ಟಣದ ಹರ್ಷ ಶಾಲೆಗೆ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಶೇ100 ಫಲಿತಾಂಶ ಬಂದಿದೆ.

ಒಟ್ಟು 68 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 19 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಹರ್ಷ ಸಮೂಹ ಸಂಸ್ಥೆಯ ಅಧ್ಯಕ್ಷ ಎಸ್.ಶಿವಕುಮಾರ್ ತಿಳಿಸಿದ್ದಾರೆ.

ಜಿ.ಮೋನಿಶಾ (ಶೇ 95.20), ಜಿ.ಎ.ಅದಿತಿ ಕುಲಕರ್ಣಿ(ಶೇ 95.20), ಆರ್.ರೋಹನ್ (ಶೇ 94.60), ಮಿಲನಾ (ಶೇ 93.40), ಇಂಚರ.ವಿ.ರೈ (ಶೇ 93.40), ಎಸ್.ಹೇಮಪ್ರಭ (ಶೇ 93), ದೃತಿ ಚಿಲ್ಮತುರ್ ಶ್ರೀವತ್ಸ (ಶೇ 92.20), ಎಸ್.ಅಭಿನವ್ ಕೃಷ್ಣ (ಶೇ 91.40), ಚಿರಂತ್.ವೈ.ಕಶ್ಯಪ್ (ಶೇ 91), ಡಿ.ವೈಷ್ಣವಿ (ಶೇ 90.20) ಅತ್ಯುತ್ತಮ ಅಂಕ ಗಳಿಸಿದ್ದಾರೆ ಎಂದು ತಿಳಿಸಿದ್ದಾರೆ.

ಜಿ.ಮೋನಿಶಾ (ಶೇ 95.20)

ಜಿ.ಎ.ಅದಿತಿ (ಶೇ 95.20)

ಸಿಬಿಎಸ್‌ಇ: ಸಾಧಕರು

ಬೆಂಗಳೂರಿನ ನ್ಯಾಷನಲ್ ಹಿಲ್ ವ್ಯೂ ಪ್ರೌಢಶಾಲೆಯ ವಿದ್ಯಾರ್ಥಿ ಅರ್ಣವ್ ಹತ್ತನೇ ತರಗತಿ ಸಿ.ಬಿ.ಎಸ್.ಇ. ಪರೀಕ್ಷೆಯಲ್ಲಿ ಶೇ 99.33 ಅಂಕಗಳೊಂದಿಗೆ ಉತ್ತೀರ್ಣನಾಗಿದ್ದಾನೆ.

ಹೆಸರಘಟ್ಟ ಹೋಬಳಿಯ ಬ್ಯಾಲಕೆರೆಯ ಸೇಂಟ್ ಫಿಲೋಮಿನಾ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ದಿಗಂತ್ ಎಂ. ಹತ್ತನೇ ತರಗತಿ ಸಿ.ಬಿ.ಎಸ್.ಇ. ಪರೀಕ್ಷೆಯಲ್ಲಿ ಶೇ 95ರಷ್ಟು ಅಂಕಗಳನ್ನು ಗಳಿಸಿ, ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದಾನೆ.

ಪಾರ್ಟಿ ವೇಳೆ ಗಲಾಟೆ, ಪೇಂಟರ್ ಕೊಲೆ

ಅಪಘಾತದ ಕಥೆ ಕಟ್ಟಿದ ಆರೋಪಿಗಳು

ಪ್ರಜಾವಾಣಿ ವಾರ್ತೆ

ವೀರಮಣಿ

ಪವನ್

ಬೆಂಗಳೂರು: ಪಾರ್ಟಿ ವೇಳೆ ನಡೆದ ಗಲಾಟೆಯಲ್ಲಿ ಹಲ್ಲೆ ನಡೆಸಿ ಪೇಂಟಿಂಗ್ ಕೆಲಸ ಮಾಡುತ್ತಿದ್ದ ಅಹಮದ್ ಅಜೀಜ್ (28) ಎಂಬಾತನನ್ನು ಕೊಲೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಅಮೃತಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ವೀರಮಣಿ ಹಾಗೂ ಪವನ್ ಬಂಧಿತ ಆರೋಪಿಗಳು.

ವೀರಮಣಿ, ಪವನ್ ಹಾಗೂ ಅಜೀಜ್ ಸ್ನೇಹಿತರು. ಮೂವರು ಪೇಂಟಿಂಗ್ ಕೆಲಸ ಮಾಡುತ್ತಿದ್ದರು. ಮೇ 8ರಂದು ದಾಸರಹಳ್ಳಿ ಮುಖ್ಯರಸ್ತೆಯ ಪಕ್ಕದ ಖಾಲಿ ನಿವೇಶನದಲ್ಲಿ ಮದ್ಯದ ಪಾರ್ಟಿ ನಡೆಸಿದ್ದರು. ಆಗ ಗಲಾಟೆ ನಡೆದು ಪವನ್ ಮೇಲೆ ಅಜೀಜ್ ಹಲ್ಲೆ ನಡೆಸಿದ್ದ. ಇದರಿಂದ ಸಿಟ್ಟಿಗೆದ್ದ ಪವನ್ ಹಾಗೂ ವೀರಮಣಿ, ಮರದ ತುಂಡುಗಳಿಂದ ಅಜೀಜ್ ಮೇಲೆ ಹಲ್ಲೆ ಮಾಡಿದ್ದರು. ಬಳಿಕ ತೀವ್ರವಾಗಿ ಅಸ್ವಸ್ಥಗೊಂಡಿದ್ದ ಅಜೀಜ್‌ನನ್ನು ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದರು. ಅಪಘಾತದಲ್ಲಿ ಅಜೀಜ್ ಗಾಯಗೊಂಡಿರುವುದಾಗಿ ವೈದ್ಯರ ಬಳಿ ಹೇಳಿದ್ದರು. ಬಳಿಕ ಅಜೀಜ್‌ನನ್ನು ಹೆಚ್ಚಿನ ಚಿಕಿತ್ಸೆಗಾಗಿ ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅಜೀಜ್ ಮೃತಪಟ್ಟಿದ್ದರು ಎಂದು ಪೊಲೀಸರು ಹೇಳಿದರು.

‘ಅಪಘಾತದಿಂದ ಅಜೀಜ್‌ನ ಸಾವು ಸಂಭವಿಸಿಲ್ಲ ಎಂಬುದಾಗಿ ಆಸ್ಪತ್ರೆ ವೈದ್ಯರು ತಿಳಿಸಿದ್ದರು. ಅದನ್ನು ಆಧರಿಸಿ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಯಿತು. ಸ್ಥಳೀಯರು ನೀಡಿದ ಮಾಹಿತಿ ಆಧರಿಸಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ನಡೆಸಿರುವುದು ಬಯಲಾಯಿತು’ ಎಂದು ಪೊಲೀಸರು ಹೇಳಿದರು.

ಪಾಕ್ ಪರ ಘೋಷಣೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ



ಶುಭಾಂಶು ಶುಕ್ಲಾ

ಬೆಂಗಳೂರು: ಪ್ರಶಾಂತ್ ಲೇಔಟ್‌ನ ಪೇಯಿಂಗ್ ಗೆಸ್ಟ್‌ವೊಂದರಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ್ದ ಯುವಕನನ್ನು ವೈಟ್‌ಫೀಲ್ಡ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಛತ್ತೀಸಗಢದ ಶುಭಾಂಶು ಶುಕ್ಲಾ (26) ಬಂಧಿತ ಆರೋಪಿ.

ನಗರದ ಐ.ಟಿ ಕಂಪನಿಯೊಂದರಲ್ಲಿ ಶುಭಾಂಶು ಶುಕ್ಲಾ ಕೆಲಸ ಮಾಡುತ್ತಿದ್ದ. ಪಿ.ಜಿ.ಯಲ್ಲಿ ನೆಲಸಿದ್ದ. ಮೇ 9ರಂದು ಮಧ್ಯರಾತ್ರಿ 12.30ರ ಸುಮಾರಿಗೆ ಪಿ.ಜಿ.ಯಲ್ಲಿದ್ದ ಯುವಕರು ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯ ಯಶಸ್ಸು ಕುರಿತು ಸಂಭ್ರಮಾಚರಣೆ ನಡೆಸುತ್ತಿದ್ದರು. ಆಗ ಬಾಲ್ಕನಿಯಲ್ಲಿ ನಿಂತಿದ್ದ ಶುಕ್ಲಾ ಪಾಕಿಸ್ತಾನ ಪರ ಘೋಷಣೆಗಳನ್ನು ಕೂಗಿದ್ದಾನೆ ಎಂದು ಮೂಲಗಳು ಹೇಳಿವೆ.

ಆರೋಪಿ ಪಾಕ್ ಪರ ಘೋಷಣೆ ಕೂಗುತ್ತಿದ್ದ ದೃಶ್ಯವನ್ನು ಪಿ.ಜಿಯಲ್ಲಿ ನೆಲಸಿದ್ದ ಯುವಕನೊಬ್ಬ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದ. ನಂತರ ಅಲ್ಲಿದ್ದ ಯುವಕರು, ಪೊಲೀಸ್ ಸಹಾಯವಾಣಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು, ಇಬ್ಬರನ್ನೂ ವಶಕ್ಕೆ ಪಡೆದುಕೊಂಡಿದ್ದರು. ಶುಭಾಂಶು ಶುಕ್ಲಾ ಪಾಕ್ ಪರ ಘೋಷಣೆ ಕೂಗಿದ್ದು ವಿಚಾರಣೆ ವೇಳೆ ದೃಢಪಟ್ಟಿತ್ತು. ಪ್ರಕರಣ ದಾಖಲಿಸಿಕೊಂಡು ಆತನನ್ನು ಪೊಲೀಸರು ಬಂಧಿಸಿದ್ದಾರೆ.

ಇನ್ನಷ್ಟು ಉದ್ಯೋಗಾವಕಾಶ

ಬ್ಯಾಂಕ್ ಆಫ್ ಬರೋಡ (ಬಿಒಬಿ) 500 ಕಚೇರಿ ಸಹಾಯಕ (ಆಫೀಸ್ ಅಸಿಸ್ಟೆಂಟ್) ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುತ್ತಿದೆ. ನಮ್ಮ ರಾಜ್ಯದಲ್ಲಿ 31 ಹುದ್ದೆಗಳಿದ್ದು, ಕನ್ನಡ ಬಲ್ಲವರಿಗೇ ಈ ಹುದ್ದೆಗಳನ್ನು ನೀಡಲಾಗುತ್ತದೆ. ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಈಗಾಗಲೇ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭಗೊಂಡಿದೆ. ಅರ್ಜಿ ಸಲ್ಲಿಸಲು ದಿನಾಂಕ: 23-05-2025 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್: https://www.bankofbaroda.in

ಐಡಿಬಿಐ ಬ್ಯಾಂಕ್ 676 ಜ್ಯೂನಿಯರ್ ಅಸಿಸ್ಟೆಂಟ್ ಮ್ಯಾನೇಜರ್ (ಜೆಎಎಂ) ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುತ್ತಿದೆ. ಯಾವುದೇ ಪದವೀಧರರು ಈ ಹುದ್ದೆಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಈಗಾಗಲೇ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭಗೊಂಡಿದೆ. ಅರ್ಜಿ ಸಲ್ಲಿಸಲು ನಾಂಕ: 20-05-2025 ಕೊನೆಯ ದಿನವಾಗಿರುತ್ತದೆ. ಯಾವುದೇ ವಿಷಯದಲ್ಲಿ ಪದವಿ ಪಡೆದವರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಆನ್‌ಲೈನ್ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ನೇಮಕ ಮಾಡಿಕೊಳ್ಳಲಾಗುತ್ತದೆ. **ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್:** https://www.idbibank.in

ನಮ್ಮ ರಾಜ್ಯದಲ್ಲಿನ ಬ್ಯಾಂಕುಗಳಲ್ಲಿ ಕನ್ನಡದಲ್ಲಿ ಮಾತನಾಡುವ ಅಧಿಕಾರಿಗಳೇ ಕಡಿಮೆ ಎಂದು ನಾವು ದೂರುತ್ತಲೇ ಇರುತ್ತೇವೆ. ಎಸ್‌ಬಿಐನಲ್ಲಿನ ಅಧಿಕಾರಿ ಹುದ್ದೆ ಪಡೆಯುವ ಈ ಅವಕಾಶವನ್ನು ರಾಜ್ಯದ ಅಭ್ಯರ್ಥಿಗಳು ಬಳಸಿಕೊಳ್ಳಬಹುದು.

ಎಸ್‌ಬಿಐನಲ್ಲಿ ಅಧಿಕಾರಿ ಹುದ್ದೆಗಳಿಗೆ ನೇಮಕ

ರಾಮಸ್ವಾಮಿ ಹುಲಕೋಡು

ದೇಶದ ಅತ್ಯಂತ ದೊಡ್ಡ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ'(ಎಸ್‌ಬಿಐ) ಸರ್ಕಲ್ ಬೇಸ್ಡ್ ಆಫೀಸರ್ (ಸಿಬಿಒ) ಹುದ್ದೆಗಳ ನೇಮಕಕ್ಕೆ ಅಧಿಸೂಚನೆ ಹೊರಡಿಸಿದೆ. ಒಟ್ಟು2,964 ಹುದ್ದೆಗಳಿಗೆ ನೇಮಕ ನಡೆಯುತ್ತಿದ್ದು, ಇದರಲ್ಲಿ 364 ಹುದ್ದೆಗಳು ಬ್ಯಾಕ್‌ಲಾಗ್ ಹುದ್ದೆಗಳಾಗಿದೆ.

ಎಸ್‌ಬಿಐನ ಬೆಂಗಳೂರು ವೃತ್ತದಲ್ಲಿ 250 ರೆಗ್ಯೂಲರ್ ಹಾಗೂ 39 ಬ್ಯಾಕ್‌ಲಾಗ್ ಹುದ್ದೆಗಳಿದ್ದು, ಈ ಹುದ್ದೆಗಳಿಗೆ ಕನ್ನಡ ಬಲ್ಲ ಅಭ್ಯರ್ಥಿಗಳನ್ನೇ ನೇಮಕ ಮಾಡಿಕೊಳ್ಳಲಾಗುತ್ತದೆ. ಇದಕ್ಕಾಗಿ ಭಾಷಾ ಪರೀಕ್ಷೆಯನ್ನು ಕೂಡ ನೇಮಕದ ಸಂದರ್ಭದಲ್ಲಿ ನಡೆಸಲಾಗುತ್ತದೆ. ನಮ್ಮ ರಾಜ್ಯದ ಕೊಂಕಣಿ ಬಲ್ಲ ಅಭ್ಯರ್ಥಿಗಳು ಮುಂಬೈ ಮೆಟ್ರೊ ವೃತ್ತದಲ್ಲಿನ 100 ಹುದ್ದೆಗಳಿಗೂ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಅರ್ಜಿ ಸಲ್ಲಿಸುವುದು ಹೇಗೆ?

ಈಗಾಗಲೇ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಅರಂಭಗೊಂಡಿದ್ದು, ಅರ್ಜಿ ಸಲ್ಲಿಸಲು ದಿನಾಂಕ 29-05-2025 ಕೊನೆಯ ದಿನವಾಗಿರುತ್ತದೆ. ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಲು (ವೆಬ್‌ಸೈಟ್ ಲಿಂಕ್: https://sbi.co.in/web/careers/Current-openings) ಅವಕಾಶ ನೀಡಲಾಗಿದೆ. ಅರ್ಜಿಯೊಂದಿಗೆ ಅರ್ಜಿ ಶುಲ್ಕವನ್ನೂ ಪಾವತಿಸಬೇಕಿರುತ್ತದೆ. ಸಾಮಾನ್ಯ,ಇಡಬ್ಲ್ಯುಎಸ್ ಹಾಗೂ ಒಬಿಸಿ ಅಭ್ಯರ್ಥಿಗಳು ₹ 750 ಅರ್ಜಿ ಶುಲ್ಕವನ್ನು ಪಾವತಿಸಬೇಕಿದ್ದು, ಎಸ್‌ಸಿ/ಎಸ್‌ಟಿ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ಇರುವುದಿಲ್ಲ. ಆನ್‌ಲೈನ್‌ನಲ್ಲಿಯೇ ಶುಲ್ಕ ಪಾವತಿಸಲು ಅವಕಾಶ ನೀಡಲಾಗಿರುತ್ತದೆ.

ಅರ್ಜಿ ಸಲ್ಲಿಸುವಾಗ ಶೈಕ್ಷಣಿಕ ಅರ್ಹತೆ, ವಯಸ್ಸು, ಉದ್ಯೋಗ, ವೇತನ, ಅನುಭವಕ್ಕೆ ಸಂಬಂಧಿಸಿದ ದಾಖಲೆಗಳನ್ನುಅಪ್‌ಲೋಡ್ ಮಾಡಬೇಕಿರುತ್ತದೆ.

ಅರ್ಹತೆಗಳೇನು?

ಯಾವುದೇ ವಿಷಯದಲ್ಲಿ ಪದವಿ ಪಡೆದವರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ವೈದ್ಯಕೀಯ, ಎಂಜಿನಿಯರಿಂಗ್, ಸಿ.ಎ. ಮಾಡಿದವರು ಕೂಡ ಅರ್ಜಿ ಸಲ್ಲಿಸಬಹುದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಪದವಿಯ ಜತೆಯಲ್ಲಿ ಸ್ಥಳೀಯ ಭಾಷಾ ಜ್ಞಾನವನ್ನು (ಬರೆಯುವ, ಓದುವ ಮತ್ತು ಅರ್ಥಮಾಡಿಕೊಳ್ಳುವ) ಅಭ್ಯರ್ಥಿಯು ಹೊಂದಿರಬೇಕು. ಅಭ್ಯರ್ಥಿಗಳ ಕನಿಷ್ಠ ವಯಸ್ಸು 21 ವರ್ಷ. ಗರಿಷ್ಠ ವಯೋಮಿತಿ 30 ವರ್ಷ ಎಂದು ನಿಗದಿಪಡಿಸಲಾಗಿದೆ. ವಯಸ್ಸನ್ನು ದಿನಾಂಕ 30-04-2025ಕ್ಕೆ ಲೆಕ್ಕಾಚಾರ ಹಾಕಲಾಗುತ್ತದೆ. ಗರಿಷ್ಠ ವಯೋಮಿತಿಯಲ್ಲಿ ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷ ಸಡಿಲಿಕೆ ನೀಡಲಾಗಿರುತ್ತದೆ.

ಅಭ್ಯರ್ಥಿಯು ಎರಡು ವರ್ಷ ಯಾವುದೇ ವಾಣಿಜ್ಯ ಬ್ಯಾಂಕ್, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಅಥವಾ ಆರ್‌ಬಿಐನಿಂದ ಅಂಗೀಕೃತವಾಗಿರುವ ಯಾವುದೇ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕಿರುತ್ತದೆ. ಅಲ್ಲದೆ, ಉತ್ತಮ ಸಿಬಿಲ್ ಸ್ಕೋರ್ ಹೊಂದಿರಬೇಕಾದದೂ ಅಗತ್ಯ.

ನೇಮಕ ಹೇಗೆ?

ಮೊದಲಿಗೆ ಆನ್‌ಲೈನ್ ಪರೀಕ್ಷೆ ನಡೆಸಲಾಗುತ್ತದೆ. ಇದರಲ್ಲಿ ಅರ್ಹತೆ ಪಡೆದ ಅಭ್ಯರ್ಥಿಯ ದಾಖಲೆಗಳನ್ನು ಬ್ಯಾಂಕಿನ 'ಪರಿಶೀಲನಾ ಸಮಿತಿ' (Screening Committee) ಪರಿಶೀಲಿಸಿ, ವೃತ್ತವಾರು ಮೆರಿಟ್ ಪಟ್ಟಿಯನ್ನು ಪ್ರಕಟಿಸಲಿದೆ. ಈ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಸಂದರ್ಶನ ನಡೆಸಿ, ಆನ್‌ಲೈನ್ ಪರೀಕ್ಷೆಯಲ್ಲಿ ಪಡೆದ ಅಂಕ ಮತ್ತು ಸಂದರ್ಶನದಲ್ಲಿ ಪಡೆದ ಅಂಕವನ್ನು 75:25 ಅನುಪಾತದಲ್ಲಿ ಲೆಕ್ಕಾಚಾರ ಹಾಕಿ ಹೆಚ್ಚು ಅಂಕಪಡೆದ ಅಭ್ಯರ್ಥಿಗಳ (ಮೀಸಲಾತಿ ಅನ್ವಯಿಸಿ) ಅಂತಿಮ ಆಯ್ಕೆ ಪಟ್ಟಿ ಸಿದ್ಧಪಡಿಸಲಾಗುತ್ತದೆ. ಈ ಅಭ್ಯರ್ಥಿಗಳಲ್ಲಿ ಅಗತ್ಯ ಇರುವ ಅಭ್ಯರ್ಥಿಗಳಿಗೆ ಭಾಷಾ ಪರೀಕ್ಷೆ ನಡೆಸಿ, ಇದರಲ್ಲಿ ಅರ್ಹತೆ ಪಡೆದವರನ್ನು ನೇಮಕಮಾಡಿಕೊಳ್ಳಲಾಗುತ್ತದೆ. ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿಯಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಓದಿ, ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಈ ಭಾಷಾ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿರುತ್ತದೆ.

ಆನ್‌ಲೈನ್ ಪರೀಕ್ಷೆಯು 120 ಅಂಕಗಳಿಗೆ ನಡೆಯಲಿದ್ದು, ನಾಲ್ಕು ವಿಭಾಗಗಳನ್ನು ಹೊಂದಿರುತ್ತದೆ. ಅವುಗಳೆಂದರೆ;

1. ಇಂಗ್ಲಿಷ್ ಭಾಷೆ (English Language)
2. ಬ್ಯಾಂಕಿಂಗ್ ಕ್ಷೇತ್ರದ ಜ್ಞಾನ (Banking Knowledge)
3. ಸಾಮಾನ್ಯ ಜ್ಞಾನ/ಆರ್ಥಿಕತೆ (General Awareness/ Economy)
4. ಕಂಪ್ಯೂಟರ್ ಆಪ್ಟಿಟ್ಯೂಟ್ (Computer Aptitude)

ಒಟ್ಟು 120 ಪ್ರಶ್ನೆಗಳನ್ನು ಕೇಳಲಾಗುತ್ತದೆ. ಪರೀಕ್ಷೆ ಬರೆಯಲು 2 ಗಂಟೆ ಕಾಲಾವಕಾಶ ನೀಡಲಾಗುತ್ತದೆ.

ವಸ್ತುನಿಷ್ಠ ಮಾದರಿಯಲ್ಲಿ ನಡೆಯುವ ಈ ಪರೀಕ್ಷೆಯ ಪ್ರತಿ ವಿಭಾಗದಲ್ಲಿಯೇ ಇಂತಿಷ್ಟೇ ಅಂಕ ಪಡೆದಿರಲೇಬೇಕೆಂಬ ನಿಯಮವೇನೂ ಇರುವುದಿಲ್ಲ. ಅಂತೆಯೇ ಋಣಾತ್ಮಕ ಮೌಲ್ಯಮಾಪನ ಕೂಡ ಇರುವುದಿಲ್ಲ.

ಈ ಪರೀಕ್ಷೆಯ ಜತೆಯಲ್ಲಿಯೇ ಇಂಗ್ಲಿಷ್ ಭಾಷೆಗೆ ಸಂಬಂಧಿಸಿದ ವಿವರಣಾತ್ಮಕ ಪರೀಕ್ಷೆ (Descriptive Test)ನಡೆಯಲಿದೆ.

ಪತ್ರ ಮತ್ತು ಪ್ರಬಂಧ ಬರೆಯುವುದಕ್ಕೆ ಸಂಬಂಧಿಸಿದಂತೆ ತಲಾ ಒಂದೊಂದು ಪ್ರಶ್ನೆ ಕೇಳಲಾಗಿರುತ್ತದೆ. ಇದಕ್ಕೆ ಉತ್ತರ ಬರೆಯಲು 30 ನಿಮಿಷ ಕಾಲಾವಕಾಶ ನೀಡಲಾಗುತ್ತದೆ. 50 ಅಂಕಗಳಿಗೆ ಈ ಪರೀಕ್ಷೆ ನಡೆಯಲಿದೆ. ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಕಲಬುರಗಿ ಮತ್ತು ಮೈಸೂರಿನಲ್ಲಿ ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗಲೇ ತಮ್ಮ ಹತ್ತಿರದ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬಹುದು. ಸಂದರ್ಶನಕ್ಕೆ 50 ಅಂಕ ನಿಗದಿಪಡಿಸಲಾಗಿರುತ್ತದೆ. ಇದರಲ್ಲಿ ಬ್ಯಾಂಕ್ ನಿಗದಿಪಡಿಸಿರುವಷ್ಟು ಕನಿಷ್ಠ ಅಂಕ ಪಡೆದ ಅಭ್ಯರ್ಥಿಗಳನ್ನು ಮಾತ್ರ ನೇಮಕಕ್ಕೆ ಪರಿಗಣಿಸಲಾಗುತ್ತದೆ.

18 ಸಾವಿರ ಹುದ್ದೆಗಳಿಗೆ ನೇಮಕ

ಎಸ್‌ಬಿಐ ಬ್ಯಾಂಕ್ ಮುಂದಿನ ಆರ್ಥಿಕ ಸಾಲಿನ ಒಳಗೆ 18 ಸಾವಿರ ಹೊಸ ಉದ್ಯೋಗಿಗಳನ್ನು ಬ್ಯಾಂಕಿಗೆ ಸೇರ್ಪಡೆ ಮಾಡಿಕೊಳ್ಳಲು ಉದ್ದೇಶಿಸಿದೆ. ಈ ವಿಷಯವನ್ನು ಬ್ಯಾಂಕಿನ ಅಧ್ಯಕ್ಷ ಸಿ.ಎಸ್. ಶೆಟ್ಟಿ ಮೊದಲ ತ್ರೈಮಾಸಿಕದ ವರದಿ ಪ್ರಕಟಿಸುವ ಸಂದರ್ಭದಲ್ಲಿ ತಿಳಿಸಿದ್ದಾರೆ. ಹೀಗಾಗಿ ಸದ್ಯವೇ ಬ್ಯಾಂಕಿನಿಂದ ಬೃಹತ್ ನೇಮಕ ಪ್ರಕ್ರಿಯೆ ಅರಂಭವಾಗಬಹುದು ಎಂದು ಅಂದಾಜಿಸಲಾಗುತ್ತಿದೆ.

ಐಬಿಪಿಎಸ್‌ನಿಂದ ಸದ್ಯವೇ ಅಧಿಸೂಚನೆ ದೇಶದ ರಾಷ್ಟ್ರೀಯಕೃತ ಬ್ಯಾಂಕುಗಳಲ್ಲಿನ ವಿವಿಧ ಹುದ್ದೆಗಳಿಗೆ ನೇಮಕ ಮಾಡುವ 'ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ' (ಐಬಿಪಿಎಸ್) ಸದ್ಯವೇ ಈ ಸಾಲಿನ ನೇಮಕಾತಿ ಪರೀಕ್ಷೆಗಳನ್ನು ಆರಂಭಿಸಲಿದೆ. ಈಗಾಗಲೇ ಪರೀಕ್ಷೆಯ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಮೊದಲಿಗೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿನ (ಆರ್‌ಆರ್‌ಬಿ) ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ ನಡೆಸಲಿದ್ದು, ಮೇ ಅಂತ್ಯದೊಳಗೆ ಈ ಸಂಬಂಧ ಅಧಿಸೂಚನೆ ಪ್ರಕಟಿಸುವ ನಿರೀಕ್ಷೆ ಇದೆ. ಪೂರ್ವಭಾವಿ ಪರೀಕ್ಷೆಗಳು ಜುಲೈ ಕೊನೆಯ ವಾರದಿಂದ ಆರಂಭಗೊಂಡು ಸೆಪ್ಟೆಂಬರ್ ಮೊದಲ ವಾರದ ವರೆಗೆ ನಡೆಯಲಿವೆ. ಆನಂತರ ಪ್ರೊಬೆಷನರಿ ಆಫೀಸರ್/ ಮ್ಯಾನೇಜ್‌ಮೆಂಟ್ ಟ್ರೇನಿ ಹುದ್ದೆಗಳಿಗೆ, ಸ್ಪೆಷಲಿಸ್ಟ್ ಆಫೀಸರ್ ಹುದ್ದೆಗಳಿಗೆ ಹಾಗೂ ಕ್ಲರಿಕಲ್ ಕೇಡರ್‌ನ 'ಕಸ್ಟಮರ್ ಸರ್ವೀಸ್ ಅಸೋಸಿಯೇಟ್ಸ್' (ಸಿಎಸ್‌ಎ) ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ ನಡೆಸಲಾಗುತ್ತದೆ.

ಬೆಂಗಳೂರು ವೃತ್ತದಲ್ಲಿನ ರೆಗ್ಯೂಲರ್ 250 ಹುದ್ದೆ	
ಎಸ್‌ಸಿ ಅಭ್ಯರ್ಥಿಗಳಿಗೆ	37
ಎಸ್‌ಟಿ ಅಭ್ಯರ್ಥಿಗಳಿಗೆ	18
ಒಬಿಸಿ	67
ಇಡಬ್ಲ್ಯುಎಸ್	25
ಸಾಮಾನ್ಯ ಅಭ್ಯರ್ಥಿಗಳಿಗೆ	103
ಇದೇ ಪ್ರಕಾರವಾಗಿ ಬ್ಯಾಕ್‌ಲಾಗ್ 39 ಹುದ್ದೆ	
ಎಸ್‌ಸಿ ಅಭ್ಯರ್ಥಿಗಳಿಗೆ	20
ಎಸ್‌ಟಿ ಅಭ್ಯರ್ಥಿಗಳಿಗೆ	9
ಒಬಿಸಿ ಅಭ್ಯರ್ಥಿಗಳಿಗೆ	10

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಕೋಕೋ ಬೀಜದ ಉತ್ಪಾದನೆಯನ್ನು ಭಾರತದಲ್ಲಿ ಹೆಚ್ಚಿಸಲು ಕೆಳಗಿನ ಯಾವ ಕೇಂದ್ರ ಸಂಸ್ಥೆ ಸಂಶೋಧನಾ ಚಟುವಟಿಕೆಯಲ್ಲಿ ತೊಡಗಿಕೊಂಡಿದೆ?
ಎ. ಸೆಂಟ್ರಲ್ ಪ್ಲಾಂಟೇಷನ್ ಕ್ರಾಪ್ಸ್ ರಿಸರ್ಚ್ ಇನ್‌ಸ್ಟಿಟ್ಯೂಟ್
ಬಿ. ರಾಷ್ಟ್ರೀಯ ತೋಟಗಾರಿಕೆ ಸಂಶೋಧನಾ ಕೇಂದ್ರ.
ಸಿ. ರಾಷ್ಟ್ರೀಯ ಕೃಷಿ ಉತ್ಪನ್ನಗಳ ಸಂಶೋಧನಾ ಕೇಂದ್ರ.
ಡಿ. ಈಶಾನ್ಯ ತೋಟಗಾರಿಕೆ ಸಂಶೋಧನಾ ಕೇಂದ್ರ.
ಉತ್ತರ : ಎ

2. ಭಾರತದ ಕೆಳಗಿನ ಯಾವ ರಾಜ್ಯಗಳಲ್ಲಿ ಕೋಕೋ ಬೇಸಾಯವನ್ನು ಹೆಚ್ಚಾಗಿ ಕಾಣಬಹುದಾಗಿದೆ?
1. ಆಂಧ್ರಪ್ರದೇಶ.
2. ಮಹಾರಾಷ್ಟ್ರ.
3. ಕರ್ನಾಟಕ.
4. ತಮಿಳುನಾಡು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 1, 3 ಮತ್ತು 4
ಸಿ. 2 ಮತ್ತು 3 ಡಿ. 3 ಮತ್ತು 4
ಉತ್ತರ : ಬಿ

3. ವಿಶ್ವ ವನ್ಯಜೀವಿ ಅಪರಾಧ ವರದಿ-2024 ಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಈ ವರದಿಯನ್ನು ಯುನೈಟೆಡ್ ನೇಷನ್ಸ್ ಆಫೀಸ್ ಆನ್ ಡ್ರಗ್ಸ್ ಅಂಡ್ ಕ್ರೈಂ ಸಂಸ್ಥೆಯು ಬಿಡುಗಡೆ ಮಾಡುತ್ತದೆ.
2. ಯುನೈಟೆಡ್ ನೇಷನ್ಸ್ ಆಫೀಸ್ ಆನ್ ಡ್ರಗ್ಸ್ ಅಂಡ್ ಕ್ರೈಂ ಸಂಸ್ಥೆಯನ್ನು 1997 ರಲ್ಲಿ ಸ್ಥಾಪಿಸಲಾಯಿತು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.
ಉತ್ತರ : ಸಿ

4. ವಿಶ್ವ ವನ್ಯಜೀವಿ ಅಪರಾಧ ವರದಿ-2024 ರ ಅನ್ವಯ ಕೆಳಗಿನ ಯಾವ ಪ್ರಾಣಿ ಪ್ರಭೇದದ ಉತ್ಪನ್ನಗಳನ್ನು ಹೆಚ್ಚಾಗಿ ಕಳ್ಳ ಸಾಗಾಣಿಕೆ ಮಾಡಲಾಗಿದೆ?
ಎ. ಘೇಂಡಾಮೃಗದ ಕೊಂಬುಗಳು.
ಬಿ. ಆನೆ ದಂತಗಳು.
ಸಿ. ಹುಲಿ ಚರ್ಮ.
ಡಿ. ಸಿಂಹದ ಮೂಳೆಗಳು.
ಉತ್ತರ : ಎ

5. ಕೆಳಗಿನ ಯಾವ ಕಾಯ್ದೆಯ ಅನ್ವಯ ಭಾರತೀಯ ಔಷಧೀಯ ವಲಯವನ್ನು ಪ್ರಸ್ತುತ ಸಂದರ್ಭದಲ್ಲಿ ನಿರ್ವಹಿಸಲಾಗುತ್ತಿದೆ?
ಎ. ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ಆ್ಯಕ್ಟ್-1940.
ಬಿ. ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ನಿಯಮಾವಳಿಗಳು-1980.
ಸಿ. ಆರೋಗ್ಯದ ಉದ್ದೇಶಗಳಿಗಾಗಿ ಔಷಧಿಗಳ ನಿಯಮಾವಳಿ-1967.
ಡಿ. ಇಂಡಿಯನ್ ಪೇಟೆಂಟ್ ಆಕ್ಟ್-1976.
ಉತ್ತರ : ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಇಂಗ್ಲಿಷ್

Unit-1 Prose : A Hero

Refusing:
a) Thank you for the suggestion. I will certainly think about it.
b) That may be a good idea. Let me think about it.
c) I think, on the whole, I'd rather not. Thank you all the same.
d) It is certainly a possibility. May I think about it?
e) That's very good of you but I am not sure I want to.
f) Do you mind if I didn't? I know you are being kind.

Answer:
Father: Swami, can you think of learning and doing a trekking during this summer vacation?
Swami: Thank you for the suggestion. I will certainly think about it.
Father: You can start with practicing at rock climbing club in town sports complex during weekends.
Swami: That may be good idea. Let me think about it.
Father: You may also learn map reading with help of your school NCC officer.
Swami: I think, on the whole, I would rather not.
Father: If you master the electronic map reading, I will buy you a GPS navigator
Swami: Thank you all the same.
Father: Would you like to increase your physical fitness by accompanying me on morning running?
Swami: It is certainly a possibility. May I think about it?
Father: If you do not want to run with me, would you want to run on your own at school?
Swami: That's very good of you but I am not sure I want to.
Father: Can you at least practice running on the spot at home?
Swami: Do you mind if I didn't? I know you are being kind.

Read and Respond:
Task 1: A man went to the astrologer
Astrologer:- Come my child, your name is Suraj khanna,
Khanna:- yes, indeed!
Astrologer:- You have two sons and two daughters
Khanna:- How true!
Astrologer:- You brought four kilos of sugar and five kilos of rice yesterday, and there are five members of your household remaining after your parents passed away.
Khanna:- I am impressed. But can you tell me about my future?
Astrologer:- Okay then. Come back with your horoscope booklet tomorrow. And, here, take your ration card back

Questions:
1) Mr Khanna was surprised at the astrologer's prediction. What made him feel so?
2) Why astrologer wasn't able to predict Mr Khanna's future?
3) In the conversation given above, who do you think has better common sense?

Answers:
1) Mr Khanna was surprised as astrologer very accurately said his name, details of family members and even details of grocery brought by him on previous day.
2) Astrologer wasn't able to predict the future as Mr Khanna hadn't brought his horoscope.
3) Astrologer has better common sense. He was able to impress Mr Khanna using his ration card.

****

Unit-1 Poem
Grandma Climbs a Tree

Author: Ruskin Bond:- Born in Kasauli in 1934, Ruskin Bond now lives in Missouri. He wrote first novel, 'The Room on the Roof', when he was seventeen and has written more than thirty books for children. 'Grandma Climbs a Tree' shows Bond's great ability to enjoy Unusual events and actions. In his autobiography, 'Scene from Writer's Life', Bond talks about his Calcutta granny as a strange person who sat alone in the evenings playing Patience, a card game.

Understand the poem

1. The speaker in the poem does not call his grandmother 'childish', what else was she according to him? Why does he consider her to be so? {Line 1-4}
Ans: The speaker calls his grandmother a genius. He calls her so for a special ability she had at the age of sixty two. She could climb any tree high or wide in a trice.

2. Grandma had been in the habit of climbing trees for a very long period. Identify the lines that suggest this
Ans: (a) "ever since child hood she'd had this gift",
(b) "When last climbed a tree she was sixty two".

3. Look at the line 7 and 8 'She would be told…..' Who do you think would tell her so?
Ans: It could be poet's father and family who might have told that climbing of trees should stop when one grew old and growing old should be gone gracefully.

4. Do you find anything odd in the reply given by the grandma? If so, why do you think it is odd? {Line 10-11}
Answer: Yes. reply given by grandma was odd. It is odd because the society demands and every one wish to comply with it by growing old gracefully. Here, grandma wishes to grow old disgracefully as she does tree climbing even better.

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

II PUC- BIOLOGY

REPRODUCTION
Reproduction in flowering plants

20. How does pollination take place in Zostera?
Ans:- Zostera (Sea Grass) is marine angiosperm. Pollen grains are long and ribbon-like, upto 2500 mm in size. Exine is absent. The filamentous pollen grains float below the surface of water as they have a specific gravity exactly similar to that of water stigmas are also quite long. The two have a fair chance to come in contact for pollination.

21. What is Epihydrophily?
Ans:- Epihydrophily is a mode of pollination which takes place on the surface of water. ***Eg:-*** *Lemna, Vallisneria.*

22. How does pollination take place in Vallisneria?
Ans:- Vallisneria (Tape Grass or Eel Grass) is submerged, dioecious, fresh water plant. Male plant produces a large number of male flowers which after breaking, rise upward in closed state and open on the surface of water. Each male flower has two functional stamens, two tepals forming boat like structure while a third small upwardly bent tepal forms a sail. Female plant produces female flowers singly at the tip long pedicels that bring the flowers on the surface of water. Stigma is trifid. During floating, male flowers are drawn in the depression of female flower. Ripe anthers of open male flowers come in contact with large trifid stigma of the female to effect pollination. After the pollination, female flower closes again. It is brought down into water by coiling of stalk.

Male and Female flowers of Vallisneria



23. What is Zoophily?
Ans:- Zoophily is a mode of pollination in which the biotic agency of animals is used for transfer of pollens from anthers of one flower to the stigma of another flower.

24. Mention the subtypes of Zoophily.
Ans:- Zoophily has several subtypes, they are - entomophily, malacophily, chiropterophily, ornithophily, myrmecophily and anthrophily.

25. Mention some animals carrying out Zoophily.
Ans:- Gecko Lizard, Garden Lizard (reptiles), arboreal (tree dwelling) rodents, lemurs (primates).

26. What is Entomophily?
Ans:- Entomophily is transfer of pollen grains from anthers of one flower to the stigma of another flower with the help of insects like moths, bees, wasps, butterflies, beetles, wasps, ants, flies, etc.

27. Mention the characteristics of Entomophilous Flowers.
Ans:- Some characteristics of Entomophilous Flowers are -
(i) Flowers are coloured for attracting the insects. Moths are attracted towards the white flowers. Reddish flowers attract butterflies and waps. Honey bees are attracted towards the bluish-purplish-violet-yellow flowers which appear coloured in ultra-violet vision of bees. Honey bees rarely visit a red flower because it appears black in ultra-violet radiations.
(ii) Both sepals and petals are well developed.
(iii) Petals are usually coloured. Where petals are not showy, other flower parts become conspicuous. e.g., coloured bract in *Bougainvillea*, involucres in *Euphorbia* and *Poinsettia*, coloured leaves in *Euporbia Pulcherrima*, Spathes in arioids, one sepal enlarged in *Mussaenda*, stamens in ***Callistemon*** (Bottle Brush), *Acacia* and *Mimosa.*
iv) Flowers are generally large in size so that they become conspicuous from a distance. Where flowers are small in size, they are aggregated to from conspicuous groups.
v) Flowers commonly produce odour. It can be pleasant (Jasmine, Rose, Mustard, Chameli, Champa) or foul (*Aristolochia*, Arum, *Rafflesia*). Foul odour attracts flies and beetles. Foul smell of *Rafflesia* (largest flower) attracts carrion flies for pollination.
vi) Majority of flowers have landing platform for insects.
vii) Special markings are present on petals to guide the insects to nectar. They are called **nectar guides** or **honey guides,** *e.g., Viola.*
viii) Visiting insects are fed by either nectar as in case of *Adhatoda*, Buttercup, Jasmine, Bottle Brush and Larkspur or edible pollen as in *Magnolia, Papaver, Rosa and Clematis.* Bees visit flowers for obtaining both nectar and edible pollen. They have special sacs for gathering pollen. The same are called **pollen baskets.**
Some flowers provide **shelter** to pollinators. Others provide them safe place to deposit eggs *e.g.,* ***Amorphophallus.***
ix) Pollen grains are covered by a yellow sticky substance called **pollenkitt.**
x) Pollen grains are **Spiny** and heavy.
xi) Normally stamens are inserted except when they take part in insect attraction, *e.g., Mimosa.*
xii) Stigma is inserted and sticky.
Honey bees rarely visit a red flower because it appears black in ultra-violet radiations.

28. What is Ornithophily?
Ans:- Ornithophily is the mode of pollination where the birds are the agents of pollination.

29. Name some of the birds that bring about pollination?
Ans:- Sun birds, Humming birds, Myna, Parrot, Bulbul and Crow.

30. Mention the characteristics of Ornithophilous Flowers.
Ans:- The characteristics of Ornithophilous Flowers are -
(i) Flowers are large sized.
(ii) They are brightly coloured with yellowish, orange, reddish or bluish colour.
(iii) Odour is generally absent.
(iv) Corolla is often funnel shaped.
(v) Floral parts are strong and leathery.
(vi) Flowers secrete a lot of nectar.

31. Name some of the common Ornithophilous Flowers.
Ans:- Some of the common Ornithophilous Flowers are – Bignonia, Tecomaria (Honey Suckle), Butea monosperma, Erythrina and Graillea, Callistemon, Bombax, Agave, etc.

ಯಕ್ಷಧ್ರುವ ಪಟ್ಲ ಟ್ರಸ್ಟ್‌ಗೆ ₹4 ಕೋಟಿ ದೇಣಿಗೆ

ಮಂಗಳೂರು: ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ಗೆ ಫೌಂಡೇಶನ್‌ನ ಗೌರವಾಧ್ಯಕ್ಷರೂ ಆಗಿರುವ ಉದ್ಯಮಿ ಕೆ. ಸದಾಶಿವ ಶೆಟ್ಟಿ ಕನ್ಯಾನ ಅವರು ₹3 ಕೋಟಿ ಹಾಗೂ ಮುಂಬೈನ ಉದ್ಯಮಿ ದಿವಂಗತ ಚಿಲ್ಲಡ ಕುಸುಮೋದರ ಡಿ. ಶೆಟ್ಟಿ ಅವರು ₹1 ಕೋಟಿ ದೇಣಿಗೆ ನೀಡಿದ್ದಾರೆ.

'ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ದಶಮ ಸಂಭ್ರಮ ಜೂನ್ 1ರಂದು ಇಲ್ಲಿ ನಡೆಯಲಿದೆ. ಈ ಬಾರಿ ದಾನಿಗಳು ಮತ್ತು ಕಲಾ ಪೋಷಕರಿಂದ ಕನಿಷ್ಠ ₹10 ಕೋಟಿ ದೇಣಿಗೆ ಸಂಗ್ರಹಿಸಲು ತೀರ್ಮಾನಿಸಲಾಗಿದೆ. ಈ ಹಣದಿಂದ ಯಕ್ಷಗಾನ ಕಲಾವಿದರಿಗೆ ನೆರವು ನೀಡಲಾಗುವುದು' ಎಂದು ಟ್ರಸ್ಟ್ ಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ ತಿಳಿಸಿದ್ದಾರೆ.

10 ವರ್ಷಗಳಲ್ಲಿ ಈ ಟ್ರಸ್ಟ್ ₹15 ಕೋಟಿ ಮೊತ್ತದ ಸೇವಾ ಕಾರ್ಯ ಅನುಷ್ಠಾನಗೊಳಿಸಿದೆ. ಪ್ರತಿ ವರ್ಷ ಹಣ ಸಂಗ್ರಹಿಸುವುದನ್ನು ಬಿಟ್ಟು, ಒಮ್ಮೆಲೆ ₹10 ಕೋಟಿ ಸಂಗ್ರಹಿಸಲು ಈಗ ತೀರ್ಮಾನಿಸಲಾಗಿದೆ ಎಂದಿದ್ದಾರೆ.

ಔರಾದ್ ತಾಲ್ಲೂಕಿನ ಸಂತಪುರ ಪ್ರೌಢಶಾಲೆಯ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳಿಂದ ಪಾಠ

ಸರ್ಕಾರಿ ಶಾಲೆಯಲ್ಲಿ ಬೇಸಿಗೆ ಶಿಬಿರ

• ಮನ್ನಥಪ್ಪ ಸ್ವಾಮಿ

ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಸಂತಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ಬೇಸಿಗೆ ಶಿಬಿರದಲ್ಲಿ ಪಾಲ್ಗೊಂಡ ವಿದ್ಯಾರ್ಥಿನಿಯರು

ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ಸ್ಪರ್ಧೆ ಎದುರಿಸುವ ಜೊತೆಗೆ ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಿಸಲು ಈ ಬೇಸಿಗೆ ಶಿಬಿರ ಆಯೋಜಿಸಲಾಗಿದೆ

ಅಜಯಕುಮಾರ ದುಬೆ
ಮುಖ್ಯ ಶಿಕ್ಷಕ

ಈ ಶಿಬಿರದಲ್ಲಿ ಒಟ್ಟು 14 ಜನ ಸಂಪನ್ಮೂಲ ವ್ಯಕ್ತಿಗಳು ನಮಗೆ ಸಮಯ ಕೊಟ್ಟಿದ್ದಾರೆ. ಇದರಿಂದ ಮಕ್ಕಳಲ್ಲಿ ಉತ್ಸಾಹ ಹೆಚ್ಚಿದೆ

ಶಿವಲಿಂಗ ಹೇಡೆ
ಬೇಸಿಗೆ ಶಿಬಿರದ ಆಯೋಜಕ

ಔರಾದ್ (ಬೀದರ್ ಜಿಲ್ಲೆ): ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಗಿಂತ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳೇನು ಕಡಿಮೆ ಇಲ್ಲ ಎಂಬ ಸಂದೇಶ ರವಾನಿಸುವ ನಿಟ್ಟಿನಲ್ಲಿ ತಾಲ್ಲೂಕಿನ ಸಂತಪುರ ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತಿದ್ದಾರೆ.

ಫಲಿತಾಂಶ ಹೆಚ್ಚಳದ ಜತೆ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವ ನಿಟ್ಟಿನಲ್ಲಿ ಸಂತಪುರ ಶಾಲೆಯಲ್ಲಿ ವಿಶೇಷ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಏಪ್ರಿಲ್ 28ರಿಂದ ಆರಂಭವಾದ ಈ ಶಿಬಿರ ಮೇ 25ರ ವರೆಗೆ ನಡೆಯಲಿದ್ದು, ಸುಮಾರು 13 ಗ್ರಾಮಗಳ 86 ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದಾರೆ. ಇವರಲ್ಲಿ ಶೇ 60ರಷ್ಟು ವಿದ್ಯಾರ್ಥಿನಿಯರಿದ್ದಾರೆ. ಈ ರೀತಿ ಶಿಬಿರ ನಡೆಸುವಂತೆ ಸರ್ಕಾರ ಆದೇಶ ಹೊರಡಿಸಿಲ್ಲ. ಶಿಕ್ಷಕರೇ ಸ್ವಯಂ ಪ್ರೇರಣೆಯಿಂದ ಮಕ್ಕಳಿಗೆ ಅನುಕೂಲವಾಗಲಿ ಎಂಬ ಕಳಕಳಿಯಿಂದ ಬೇಸಿಗೆ ರಜೆಯಲ್ಲೂ ಒಂದಿಷ್ಟು ಸಮಯ ವಿದ್ಯಾರ್ಥಿಗಳಿಗಾಗಿ ನೀಡುತ್ತಿದ್ದಾರೆ.

ಬೆಳಿಗ್ಗೆ 9ರಿಂದ ಬೇಸಿಗೆ ವಿಶೇಷ ತರಗತಿ ನಡೆಯುತ್ತಿದ್ದು, ಮೊದಲಿಗೆ ಒಂದೂವರೆ ಗಂಟೆ ವ್ಯಕ್ತಿತ್ವ ವಿಕಸನ (ಪರೀಕ್ಷೆ ಎದುರಿಸುವ) ಬಗ್ಗೆ ನಿತ್ಯ ಒಬ್ಬ ಸಂಪನ್ಮೂಲ ವ್ಯಕ್ತಿ ಬಂದು ಹೇಳಿ ಕೊಡುತ್ತಾರೆ. ನಂತರ ಎರಡು ಗಂಟೆ ಪಠ್ಯ ವಿಷಯದ ಬಗ್ಗೆ ಶಾಲೆ ಶಿಕ್ಷಕರು ಪಾಠ ಮಾಡುತ್ತಾರೆ. ಶಿಬಿರ ನಡೆಯುವ 28 ದಿನಗಳ ವೇಳಾಪಟ್ಟಿ ಮೊದಲೇ ತಯಾರಿಸಿದ್ದು, ನಿಗದಿತ ದಿನದಂದು ಆಯಾ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು ಬಂದು ಪಾಠ ಮಾಡಿ ಹೋಗುತ್ತಾರೆ ಎಂದು ಶಿಬಿರದ ಆಯೋಜಕರೂ ಆದ ಶಿಕ್ಷಕ ಶಿವಲಿಂಗ ಹೇಡೆ ಹೇಳಿದರು.

'ಶಿಬಿರದಲ್ಲಿ ಕಠಿಣ ವಿಷಯಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಜತೆಗೆ ಕಲಿಕೆಯಲ್ಲಿ ಒಂದಿಷ್ಟು ಹಿಂದಿರುವ ಮಕ್ಕಳ ಕಡೆಗೂ ನಿಗಾ ವಹಿಸಲಾಗುತ್ತಿದ್ದು, ಒಟ್ಟಿನಲ್ಲಿ ನಮ್ಮ ಸರ್ಕಾರಿ ಶಾಲೆ ಯಾವ ವಿದ್ಯಾರ್ಥಿಯೂ ಹಿಂದೆ ಬೀಳಬಾರದು ಎಂಬುದು ನಮ್ಮ ಈ ಶಿಬಿರದ ಉದ್ದೇಶ' ಎಂದು ಹೇಡೆ ತಿಳಿಸಿದರು.

ಶಿಬಿರದಲ್ಲಿ ಮಕ್ಕಳ ದೈಹಿಕ, ಬೌದ್ಧಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಬೇಕಾದ ಮಾರ್ಗದರ್ಶನ ನೀಡಲಾಗುತ್ತಿದೆ. ಕೆಲ ಮಕ್ಕಳಲ್ಲಿ ನಕಾರಾತ್ಮಕ ವಿಚಾರಗಳು ಹೆಚ್ಚಿಗೆ ಕಂಡುಬರುತ್ತಿದ್ದು, ಅದನ್ನು ಬದಲಾಯಿಸುವುದಕ್ಕಾಗಿ ವಿವಿಧ ವಿಷಯಗಳ ತರಬೇತಿ ನೀಡಲಾಗುತ್ತಿದೆ. ವ್ಯಕ್ತಿತ್ವ ವಿಕಸನದ ಪಾಠಗಳಿಂದಾಗಿ ಮಕ್ಕಳ ಮನೋಭಾವದಲ್ಲಿ ಬದಲಾವಣೆಗಳು ಕಂಡುಬರುತ್ತಿದ್ದು, [illegible] ಎನ್ನುತ್ತಾರೆ ಶಿಕ್ಷಕ ಶಿವಲಿಂಗ ಹೇಡೆ.

'ಇಂತಹ ಬೇಸಿಗೆ ಬಿಸಿಲಲ್ಲಿ ನಾವು ಶಿಬಿರದಲ್ಲಿ ಪಾಲ್ಗೊಳ್ಳುತ್ತಿದ್ದರೂ ಏನೂ ಕಷ್ಟ ಅನಿಸುತ್ತಿಲ್ಲ. ಶಾಲೆಯಲ್ಲಿ ಶುದ್ಧ ನೀರಿದೆ. ಫ್ಯಾನ್ ಇದೆ. ಗಾಳಿ, ಬೆಳಕು ಬರುತ್ತದೆ. ಶಿಬಿರದ ವ್ಯವಸ್ಥೆ ಮಾಡಿದ ನಮ್ಮ ಶಿಕ್ಷಕರಿಗೆ ನಾವು ಆಭಾರಿ' ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

ನಂದಳಿಕೆ ಬಾಲಚಂದ್ರ ರಾವ್ ನಿಧನ



ಬಾಲಚಂದ್ರ ರಾವ್

ಮಂಗಳೂರು: ಕರ್ಣಾಟಕ ಬ್ಯಾಂಕ್‌ನಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ನಿವೃತ್ತಿಯಾಗಿದ್ದ ನಂದಳಿಕೆ ಬಾಲಚಂದ್ರ ರಾವ್ (72) ಬುಧವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ.

ಬಾಲಚಂದ್ರ ರಾವ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಇದೇ 15ರ ಗುರುವಾರ ಬೆಳಿಗ್ಗೆ 6ರಿಂದ ಬೆಳಿಗ್ಗೆ 10ರ ವರೆಗೆ ಮಂಗಳೂರಿನ ಬಿಜೈನ ಚೌಟನ್ ಕಾಂಪೌಂಡ್‌ನಲ್ಲಿರುವ ಅವರ ಸ್ವಗೃಹದಲ್ಲಿ ವ್ಯವಸ್ಥೆ ಮಾಡಲಾಗಿದೆ. ನಂತರ ಕಾರ್ಕಳ ತಾಲ್ಲೂಕು ನಂದಳಿಕೆಯ ಐಸಿರಿ ಮನೆಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಿದ್ದು, ನಂದಳಿಕೆಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕವಿ ಮುದ್ದಣ ಹುಟ್ಟೂರಾದ ನಂದಳಿಕೆಯಲ್ಲಿ ಮುದ್ದಣ ಸ್ಮಾರಕ ಮಿತ್ರಮಂಡಳಿ ಸ್ಥಾಪಿಸಿ ನಿರಂತರವಾಗಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದರು. ಕವಿ ಮುದ್ದಣ ಸಮಗ್ರ ಕಾವ್ಯ ಸಂಪುಟ ಬಿಡುಗಡೆ, ಮುದ್ದಣ ಮನೋರಮೆಯರ ಸಂಭಾಷಣೆಯ ಡಿವಿಡಿ, ಮುದ್ದಣನ ನೆನಪಿನ ಗ್ರಂಥಾಲಯ, ಮುದ್ದಣ ಸ್ಮಾರಕ, ಮುದ್ದಣನ ಯಕ್ಷಗಾನ ಸಂಪುಟಗಳು, ಮುದ್ದಣ ಸ್ಮಾರಕ ಪ್ರಶಸ್ತಿ ಪೀಠ ಸ್ಥಾಪನೆ, ಮಂಗಳೂರು ವಿವಿಯಲ್ಲಿ ಕವಿಯ ನೆನಪಿನ ಅಧ್ಯಯನ ಪೀಠಕ್ಕಾಗಿ ಅವರು ಶ್ರಮಿಸಿದ್ದರು.

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
3ನೇ ಮಹಡಿ, ಟಿ.ಟಿ.ಎಂ.ಸಿ 'ಬಿ' ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027.
ದೂರವಾಣಿ ಸಂಖ್ಯೆ: 080–22223753 / 22237588
ಸಂಖ್ಯೆ: ಡಿಡಿಯುಟಿಟಿಎಲ್/ತಾ.ವಿ/2025–26/81 ದಿನಾಂಕ: 13–05–2025

ಟೆಂಡರ್ / ಇ–ಹರಾಜು ಪ್ರಕಟಣೆ

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ ಸಂಸ್ಥೆಯು ವಿಜಯನಗರ ಜಿಲ್ಲೆ ಹೊಸಪೇಟೆ ತಾಲ್ಲೂಕು, ಅಮರಾವತಿ ಟ್ರಕ್ ಟರ್ಮಿನಲ್ ಆವರಣದಲ್ಲಿ 21 ಗೋಡೌನ್ ನಿವೇಶನ, ಯಶವಂತಪುರ ಟ್ರಕ್ ಟರ್ಮಿನಲ್ ಆವರಣದಲ್ಲಿ 05 ವಾಣಿಜ್ಯ ನಿವೇಶನ, 03 ಗೋಡೌನ್ ನಿವೇಶನಗಳನ್ನು ಮತ್ತು ಹೊಸಪೇಟೆ ಅಮರಾವತಿ ಟ್ರಕ್ ಟರ್ಮಿನಲ್‌ನ ಆವರಣದ ಡಾರ್ಮಿಟರಿ ಕಟ್ಟಡದಲ್ಲಿ ಉಳಿಕೆ 37 ಏಸಿಬ್ ಕಛೇರಿಗಳನ್ನು "ಹೇಗಿದೆಯೋ ಹಾಗೆ" ಇ–ಹರಾಜು ಮೂಲಕ ವಿಲೇವಾರಿ ಮಾಡಲು ಇ–ಹರಾಜು ಆಹ್ವಾನಿಸಲಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್: **https://kppp.karnataka.gov.in** ಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಲು ಕೋರಿದೆ. ಇ–ಹರಾಜಿನಲ್ಲಿ ಭಾಗವಹಿಸಲು ಕೊನೆಯ ದಿನಾಂಕಗಳನ್ನು ಪ್ರತ್ಯೇಕವಾಗಿ ನಿಗಧಿಪಡಿಸಲಾಗುವುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಡಿಡಿಯುಟಿಟಿಎಲ್, ಬೆಂಗಳೂರು.
ವಾಸಾಸಂಇ/ವಾ.ಪ್ರ/626/ಅಡ್ವರ್ಟೋರ್/2025–26

ಅರುಣಾಚಲ: ಚೀನಾ ಮತ್ತೆ ಖ್ಯಾತೆ

ಒಂದನೇ ಪುಟದಿಂದ...

ನಿರ್ಬಂಧದ ಬಳಿಕ ವಾಪಸ್: ಪಾಕಿಸ್ತಾನದ ಅಪಪ್ರಚಾರಗಳನ್ನು ಸುದ್ದಿ ಮಾಡಿದ್ದಕ್ಕಾಗಿ ಚೀನಾದ 'ಗ್ಲೋಬಲ್ ಟೈಮ್ಸ್' ಮತ್ತು 'ಷಿನ್‌ಹುವಾ' ಪತ್ರಿಕೆಗಳ 'ಎಕ್ಸ್' ಖಾತೆಗಳಿಗೆ ಭಾರತ ಬುಧವಾರ ನಿರ್ಬಂಧ ಹೇರಿತ್ತು. ಈ ಖಾತೆಗಳಿಗೆ ನಿರ್ಬಂಧ ಹೇರುವಂತೆ ಕೇಂದ್ರ ಸರ್ಕಾರವು 'ಎಕ್ಸ್'ಗೆ ಸೂಚನೆ ನೀಡಿತ್ತು. ಆದರೆ, ನಿರ್ಬಂಧ ಹೇರಿದ ಕೆಲವೇ ಗಂಟೆಗಳಲ್ಲಿ ವಾಪಸ್ ಪಡೆದಿದೆ.

ಉತ್ತಮಗೊಳ್ಳುತ್ತಿದ್ದ ಸಂಬಂಧ

2020ರಲ್ಲಿ ಚೀನಾ ಹಾಗೂ ಭಾರತದ ಸೈನಿಕರ ಮಧ್ಯೆ ಲಡಾಖ್‌ನ ಗಾಲ್ವನ್ ಕಣಿವೆಯಲ್ಲಿ ಭಾರಿ ಸಂಘರ್ಷ ನಡೆದಿತ್ತು. ಈ ಬಳಿಕ ಎರಡೂ ದೇಶಗಳ ಸಂಬಂಧ ಹಳಸಿತ್ತು. ಕಳೆದ ವರ್ಷದಿಂದ ಚೀನಾ–ಭಾರತ ಮಧ್ಯೆ ದ್ವಿಪಕ್ಷೀಯ ಮಾತುಕತೆಗಳು ನಡೆಯಲು ಆರಂಭಿಸಿದ್ದವು. ತಮ್ಮ ನಡುವಿನ ಸಂಘರ್ಷ ಶಮನಕ್ಕೆ ಹಲವು ಕ್ರಮಗಳನ್ನೂ ಕೈಗೊಂಡಿದ್ದವು.

- ಗಾಲ್ವನ್ ಸಂಘರ್ಷದ ಬಳಿಕ ಕಳೆದ ಐದು ವರ್ಷಗಳಿಂದ ನೇರ ವಿಮಾನಯಾನ ರದ್ದುಗೊಂಡಿತ್ತು. ಜೊತೆಗೆ ಮಾನಸ ಸರೋವರ ಯಾತ್ರೆಯನ್ನೂ ನಿಲ್ಲಿಸಲಾಗಿತ್ತು (ಕೋವಿಡ್ ಕಾರಣದಿಂದಲೂ ಯಾತ್ರೆಯನ್ನು ನಿಲ್ಲಿಸಲಾಗಿತ್ತು. ಸಂಘರ್ಷ ಬಳಿಕ ಈ ಸ್ಥಿತಿ ಮುಂದುವರಿಯಿತು). ಎರಡೂ ದೇಶಗಳ ಮಾತುಕತೆಗಳ ಬಳಿಕ ನೇರ ವಿಮಾನಯಾನವನ್ನೂ ಮಾನಸ ಸರೋವರ ಯಾತ್ರೆಯನ್ನೂ ಪುನರ್ ಆರಂಭಿಸಲಾಗಿದೆ
- ಡೆಮ್‌ಚೊಕ್ ಮತ್ತು ದೆಪ್ಸಾಂಗ್ ಪ್ರದೇಶಗಳಲ್ಲಿ ನಿಯೋಜಿಸಲಾಗಿದ್ದ ಸೇನೆಯನ್ನು ಎರಡೂ ದೇಶಗಳು ಹಿಂಪಡೆದುಕೊಂಡಿದ್ದವು
- ಪ್ರಧಾನಿ ನರೇಂದ್ರ ಮೋದಿ ಹಾಗೂ ಚೀನಾ ಅಧ್ಯಕ್ಷ ಷಿ ಜಿಂಗ್‌ಪಿಂಗ್ ಅವರು ರಷ್ಯಾದ ಕಜಾನ್‌ನಲ್ಲಿ 2024ರಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ದ್ವಿಪಕ್ಷೀಯ ಸಂಬಂಧ ಉತ್ತಮಪಡಿಸಿಕೊಳ್ಳುವುದಕ್ಕೆ ಇಬ್ಬರೂ ಒಪ್ಪಿಗೆ ನೀಡಿದ್ದರು
- ಭಾರತ ಮತ್ತು ಚೀನಾದ ದ್ವಿಪಕ್ಷೀಯ ಸಂಬಂದಕ್ಕೆ 75 ವರ್ಷ ಸಂದ ಸಂದರ್ಭದಲ್ಲಿ ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಅವರು ಚೀನಾದ ರಾಯಭಾರಿಯೊಂದಿಗೆ ದೆಹಲಿಯಲ್ಲಿ ಕೇಕ್ ಕತ್ತರಿಸಿ ಸಂಭ್ರಮಿಸಿದ್ದರು

ಕೇಂದ್ರದಿಂದ ಬಾಕಿ ₹4,195 ಕೋಟಿ

ಒಂದನೇ ಪುಟದಿಂದ...

ರಾಜ್ಯ ಸರ್ಕಾರವೇ ಬಹುತೇಕ ನೆರವು ನೀಡುವ ಯೋಜನೆಗಳಿಗೂ ಪ್ರಧಾನ ಮಂತ್ರಿ ಹಾಗೂ ಕೇಂದ್ರದ ಹೆಸರಿದೆ. ಆದರೆ, ಸಣ್ಣ ಮೊತ್ತವೂ ಕೇಂದ್ರದಿಂದ ಬಂದಿಲ್ಲ. ಇಂತಹ ಅನ್ಯಾಯವನ್ನು ಎಲ್ಲ ಸಂಸದರು ಒಟ್ಟಾಗಿ ಪ್ರಶ್ನಿಸಬೇಕು. ಮೌನ ಮುರಿದು ಗಟ್ಟಿಧ್ವನಿಯಲ್ಲಿ ಮಾತನಾಡಬೇಕು ಎಂದರು.

ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯ ಎರಡು ವರ್ಷದ ಪಾಲು ₹10 ಸಾವಿರ ಕೋಟಿ ಬಾಕಿ ಇದೆ. ಕೇಂದ್ರ ಜಲಜೀವನ್ ಮಿಷನ್‌ನಲ್ಲಿ 23-24ನೇ ಸಾಲಿನ ₹7,656 ಕೋಟಿ, 24-25ನೇ ಸಾಲಿನ ₹3,233 ಕೋಟಿ ಬರಬೇಕಿದೆ. ಮನರೇಗಾದಲ್ಲೂ ಬಾಕಿ ಉಳಿದಿದೆ ಎಂದು ವಿವರ ನೀಡಿದರು.

ಕೇಂದ್ರ ಸರ್ಕಾರ, ಸಚಿವರು, ಪ್ರಧಾನ ಮಂತ್ರಿಗೆ ನಿರಂತರವಾಗಿ ಪತ್ರ ಬರೆಯಲಾಗಿದೆ. ರಾಜ್ಯದಿಂದ ₹4.5 ಲಕ್ಷ ಕೋಟಿ ತೆರಿಗೆ ಕೊಟ್ಟರೂ ಸಣ್ಣ ನೆರವೂ ರಾಜ್ಯಕ್ಕೆ ಸಿಗುತ್ತಿಲ್ಲ. ಮತ್ತೊಂದು ಕಡೆ ಅಭಿವೃದ್ಧಿ ಯೋಜನೆಗಳಿಗೆ ರಾಜ್ಯ ಸರ್ಕಾರದ ಬಳಿ ಹಣವಿಲ್ಲ ಎಂದು ಕೇಂದ್ರ ಸಚಿವರು, ಬಿಜೆಪಿ ಸಂಸದರೇ ಆರೋಪ ಮಾಡುತ್ತಾರೆ ಎಂದು ದೂರಿದರು.

ರಾಜ್ಯಸಭೆ ಸದಸ್ಯ ಲಹರ್ ಸಿಂಗ್ ಸಿರೋಯಾ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಭೆಯಲ್ಲಿ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಮುಂದುವರಿದ ಮಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಕಲಬುರಗಿ: ರಾಜ್ಯದ ಹಲವೆಡೆ ಬುಧವಾರವೂ ಮಳೆ ಸುರಿದಿದೆ. ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ತಾಲ್ಲೂಕಿನ ಕಟಗೇರಿ ಗ್ರಾಮದಲ್ಲಿ ಮಂಗಳವಾರ ಸಂಜೆ ಸಿಡಿಲು ಬಡಿದು ಪಾರ್ವತೆವ್ವ ಹನಮಂತ ಅಪ್ಪನ್ನವರ (56) ಮೃತಪಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿ ಮಂಗಳವಾರ ಚರಂಡಿಯಲ್ಲಿ ಮಳೆ ನೀರಿನೊಂದಿಗೆ ಕೊಚ್ಚಿಹೋಗಿದ್ದ ಕಾಟೆಪ್ಪ ದುರಗಪ್ಪ ಶಿರಹಟ್ಟಿ (52) ಎಂಬುವರ ಶವ ಬುಧವಾರ ಪತ್ತೆಯಾದೆ. ಚರಂಡಿ ದಾಟುವ ವೇಳೆ ಅವರು ಆಯ ತಪ್ಪಿ ಬಿದ್ದಿದ್ದರು.

ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ, ಕಲಬುರಗಿ ನಗರ ಹಾಗೂ ಬೀದರ್ ಜಿಲ್ಲೆಯ ವಿವಿಧೆಡೆ ಬಿರುಸಿನ ಮಳೆಯಾಗಿದೆ.

ಬಾಗೇಪಲ್ಲಿ ವರದಿ: ಪಟ್ಟಣದಲ್ಲಿ ಗುಡುಗು, ಮಿಂಚು ಸಹಿತ ಭಾರಿ ಮಳೆ ಸುರಿಯಿತು. ಹೊಲ–ಗದ್ದೆಗಳಲ್ಲಿ ನೀರು ಸಂಗ್ರಹವಾಗಿ ಭತ್ತ, ಜೋಳ, ಹೂವು ಬೆಳೆ ನೆಲ ಕಚ್ಚಿದೆ. ಕುರಿ, ಮೇಕೆ, ಎತ್ತು, ಹಂದಿ ಶೆಡ್‌ಗಳಿಗೆ ಮಳೆ ನೀರು ನುಗ್ಗಿದೆ.

ರಾಮನಗರ ವರದಿ: ರಾಮನಗರ ಜಿಲ್ಲೆಯಾದ್ಯಂತ ಉತ್ತಮ ಮಳೆ ಸುರಿಯಿತು.

ಹುಬ್ಬಳ್ಳಿಯಿಂದ ಬ್ಯಾಹಟ್ಟಿಗೆ ಸಂಪರ್ಕ ಕಲ್ಪಿಸುವ ರಸ್ತೆ ಮಧ್ಯದಲ್ಲಿನ ಹಳ್ಳ ತುಂಬಿ ಹರಿಯುತ್ತಿದ್ದು, ಬುಧವಾರ ಬೈಕ್ ಸವಾರರೊಬ್ಬರು ಅದರಲ್ಲೇ ಸಾಗಿದರು
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ತಂಬಾಕು ಬೆಳೆಗಾರರಲ್ಲಿ ಸಂತಸ

ಮೈಸೂರು: ಹಾಸನ, ಕೊಡಗು, ಚಾಮರಾಜನಗರ ಜಿಲ್ಲೆಯ ವಿವಿಧೆಡೆ ಹಾಗೂ ಮೈಸೂರಿನಲ್ಲಿ ಬುಧವಾರ ಸಂಜೆ ಬಿರುಸಿನ ಮಳೆ ಸುರಿದಿದ್ದು, ತಂಬಾಕು, ಜೋಳ ಬೆಳೆಗಾರರ ಮುಖದಲ್ಲಿ ಹರ್ಷ ಮೂಡಿದೆ.

ಮೈಸೂರು ಸೇರಿದಂತೆ ಜಿಲ್ಲೆಯ ಹಲವೆಡೆ ಗುಡುಗು, ಸಿಡಿಲು ಸಹಿತ ಮಳೆಯಾಯಿತು. ಹಾಸನ ಜಿಲ್ಲೆಯ ಅರಕಲಗೂಡು ಹಾಗೂ ಸುತ್ತಮುತ್ತ ಸುಮಾರು ಅರ್ಧಗಂಟೆ ಮಳೆ ಸುರಿಯಿತು.

ಕೊಡಗು ಜಿಲ್ಲೆಯಲ್ಲೂ ಉತ್ತಮ ಮಳೆಯಾಗಿದೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಇಲಾಖೆ
ವಿಭಾಗ ಕೊಪ್ಪಳ. ದೂ:08539–220054.
ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2025–26/1670
ದಿ:12.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ರಾಯಚೂರು ಜಿಲ್ಲೆಯ 04 ಟೆಂಡರ ಕಾಮಗಾರಿಗಳನ್ನು ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ. 100.00 ಹಾಗೂ ಗರಿಷ್ಠ ಅಂದಾಜು ಮೊತ್ತ. ರೂ 600.00 ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: **15–05–2025** ರಿಂದ ದಿನಾಂಕ: **23–05–2025** ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ **20–05–2025** ರಂದು ಬೆಳ್ಳಿಗ್ಗೆ 11.00 ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: **26–05–2025** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: **28–05–2025** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆಪಿಪಿಪಿ" ವೆಬ್‌ಸೈಟ್ https://kppp.karnataka.gov.in/ ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ದಿ ವಿಭಾಗ. ಕೊಪ್ಪಳ.
ಡಿಐಪಿಆರ್/ಕೊಪ್ಪಳ/88/ಕೆಎಸ್‌ಎಂಸಿಎ/2025–26

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ
ಟಿ.ಬಿ. ಸರ್ಕಲ್ ಹತ್ತಿರ, ತುಮಕೂರು ರಸ್ತೆ, ದೊಡ್ಡಬಳ್ಳಾಪುರ – 561203,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ: 0829799416
ಇ–ಮೇಲ್: apmc.dbpur@gmail.com
ಸಂಖ್ಯೆ:ಕೃಉಮಾಸ/ದೊ/ಭದ್ರತಾಸಿಬ್ಬಂದಿ/60/2025–26 ದಿನಾಂಕ: 12–05–2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2025–26 ನೇ ಸಾಲಿಗೆ ದೊಡ್ಡಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದಲ್ಲಿರುವ ಚರಾಸ್ಥಿ ಮತ್ತು ಸ್ಥಿರಾಸ್ಥಿಗಳ ಸಂರಕ್ಷಣೆ, ಸಂಚಾರ, ನಿಯಂತ್ರಣ ಹಾಗೂ ಇನ್ನಿತರೆ ಸಮಿತಿಯ ಕಾರ್ಯಗಳಿಗೆ 08 ಜನ ಅರ್ಹ ಹಾಗೂ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಏಜೆನ್ಸಿಯಿಂದ ಕನಿಷ್ಠ ವೇತನ ಕಾಯ್ದೆ ಅನ್ವಯ ಈ ಕೆಳಕಂಡಂತೆ ನಮೂದಿಸಿದ ಸೇವೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಹ ಸಂಸ್ಥೆ / ಏಜೆನ್ಸಿಯವರು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪ್ರಕಟಿಸುವಂತೆ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಬಹುದಾಗಿದೆ.

ಕ್ರ.ಸಂ.	ಭದ್ರತಾ ಸಿಬ್ಬಂದಿಗಳ ವಿವರ	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	1) ಕಂಪ್ಯೂಟರ್ ಆಪರೇಟರ್ಸ್ – 01 2) ವಾಹನ ಚಾಲಕರು – 01 3) ಭದ್ರತಾ ಗಾರ್ಡ್‌ಗಳು – 06	50,000.00

1) ಇ–ಟೆಂಡರ್ ಫಾರಂನ್ನು ವೆಬ್‌ಸೈಟ್‌ನಲ್ಲಿಯೇ ತುಂಬಿ ಸಲ್ಲಿಸಲು ಕೊನೆಯ ದಿನಾಂಕ: **10–06–2025 ರಂದು ಸಾಯಂಕಾಲ 5.00 ಗಂಟೆಯವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12–06–2025 ರಂದು ಬೆಳಿಗ್ಗೆ 11.00 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **16–06–2025 ರಂದು ಬೆಳಿಗ್ಗೆ 11.00 ಗಂಟೆಗೆ.** 4) ಷರತ್ತು ಮತ್ತು ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃಉಮಾಸ, ದೊಡ್ಡಬಳ್ಳಾಪುರ
ಸಹಿ/– ಆಡಳಿತಾಧಿಕಾರಿಗಳು, ಕೃಉಮಾಸ, ದೊಡ್ಡಬಳ್ಳಾಪುರ
ವಾಸಾಸಂಇ/ವಾ.ಪ್ರ/659/ಅಡ್ವರ್ಟೋರ್/2025–26

ಕರ್ನಾಟಕ ಸರ್ಕಾರ
ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯಕೋಶ),
ನಂ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–5600652. ದೂರವಾಣಿ: 080–22254710
ಸಂಖ್ಯೆ: ಜೆಪಿ/ಎನ್.ಸಿ.ಇ/06/ಇ-ಟೆಂಡರ್/25-26 ದಿನಾಂಕ: 14.05.2025

ಟೆಂಡರ್ ಪ್ರಕಟಣೆ

2025-26ನೇ ಸಾಲಿನ ಎನ್.ಸಿ.ಸಿ ಇಲಾಖೆಯಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳನ್ನು ಹೊರಗುತ್ತಿಗೆ / ಸೇವಾ ಒಪ್ಪಂದದ ಮೂಲಕ ಭರ್ತಿಮಾಡಲು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ವಿವರಗಳು **http://kppp.karnataka.gov.in** ಎಂಬ ವೆಬ್‌ಸೈಟ್‌ನಲ್ಲಿ **ದಿನಾಂಕ: 15–05–2025 ರಿಂದ ಲಭ್ಯವಿದ್ದು,** ಇ-portal ಮೂಲಕ ಟೆಂಡರ್ ಸಲ್ಲಿಸಲು **22.05.2025 ಕೊನೆಯ ದಿನಾಂಕವಾಗಿರುತ್ತದೆ.** ಟೆಂಡರ್ ಸಂಖ್ಯೆ: **NCC/2025-26/SE0003/CALL-2**

ಸಹಿ/– (ಮಲ್ಲಿನಾಥ) ಆಡಳಿತಾಧಿಕಾರಿಗಳು
ಎನ್.ಸಿ.ಸಿ. ಉಪಮಹಾನಿರ್ದೇಶಕರ ಪರವಾಗಿ
DIPR/CP/AAPL/RO648/25-26

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
CIN : U41000KA2016SGC097260
ಸಂ.148, ಎಂಬೆಸ್ಸಿ ಚೌಕ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001.
ಸಂ.ವ್ಯನಿ/ಆಡಳಿತ/ವ್ಯ ಮತ್ತು ನೇ/ನೇಮಕಾತಿ/2025–26/424 ದಿ: 14.05.2025

ನೇಮಕಾತಿ ಅಧಿಸೂಚನೆ

ಈ ಕೆಳಕಂಡ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆ	ಅವಧಿ
ಕಂಪನಿ ಕಾರ್ಯದರ್ಶಿ–ಗ್ರೇಡ್ II	ಐದು ವರ್ಷ
ಅಥವಾ	
ಸಹಾಯಕ ಕಂಪನಿ ಕಾರ್ಯದರ್ಶಿ (ಸಕಕಾ)	

ಅರ್ಜಿಗಳನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕ 16ನೇ ಜೂನ್ 2025. ವಿವರಗಳಿಗಾಗಿ ವಿಜನಿನಿಯ ವೆಬ್‌ಸೈಟ್: **www.vjnl.karnataka.gov.in** ವೃತ್ತಿ ಮತ್ತು ನೇಮಕಾತಿ ಪುಟಕ್ಕೆ ಭೇಟಿ ನೀಡಿ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಮಹಾಲಕ್ಷ್ಮೀಪುರಂ ವಿಭಾಗ,
12ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ವೆಸ್ಟ್ ಆಫ್ ಕಾರ್ಡ್ ರೋಡ್,
ಮಹಾಲಕ್ಷ್ಮೀಪುರಂ ಬೆಂಗಳೂರು.
ಸಂಖ್ಯೆ:ಕಾಪಾಅ/ಮಲಪು/ಟೆಂಡರ್/ಕೆಪಿಪಿ/03/2025-26 ದಿನಾಂಕ: 13-05-2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

(ವೆಬ್‌ಸೈಟ್: **https://kppp.karnataka.gov.in** ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ, ಬಿ.ಬಿ.ಎಂ.ಪಿ ಬೆಂಗಳೂರು ರವರು ಈ ಕೆಳಕಂಡ ಕಾಮಗಾರಿಗಳಿಗೆ ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1)	ವಾರ್ಡ್ ನಂ.53ರ ವೃಷಭಾವತಿ ನಗರದಲ್ಲಿ ನಂಜಪ್ಪ ಬಡಾವಣೆಯ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣೆ ಮತ್ತು ಇತರ ಅಭಿವೃದ್ಧಿ ಕಾಮಗಾರಿಗಳು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: **250.00.** ಇಎಂಡಿ ಮೊತ್ತ (ರೂ. ಗಳಲ್ಲಿ): **3,75,000/-.**
2)	ವಾರ್ಡ್ ನಂ.48ರ ಮಹಾಲಕ್ಷ್ಮಿಪುರಂನ ಗಣೇಶ ಬ್ಲಾಕ್, ಸರಸ್ವತಿಪುರ ಮತ್ತು ಜೆ.ಸಿ.ನಗರದ ಹಾಗೂ ವಾರ್ಡ್ ಸಂಖ್ಯೆ 46ರ ರಾಜೀವ್‌ನಗರದ ಕೃಷ್ಣಾನಂದನಗರ, ರಸ್ತೆಗಳು, ಒಳಚರಂಡಿಗಳ ಸುಧಾರಣೆ ಮತ್ತು ಇತರ ಕಾಮಗಾರಿಗಳು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: **250.00.** ಇಎಂಡಿ ಮೊತ್ತ (ರೂ. ಗಳಲ್ಲಿ): **3,75,000/-.**

ಟೆಂಡರ್‌ನ ಕಾರ್ಯಸೂಚಿ: 1) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **21–05–2025 ರ ಸಂಜೆ 3:00 ಗಂಟೆಯವರೆಗೆ.** 2) ಪೂರ್ವ-ಬಿಡ್ ಸಭೆಯ **ದಿನಾಂಕ: 21–05–2025 ರಂದು ಸಂಜೆ 3:30 ಗಂಟೆಗೆ.** 3) ಭರ್ತಿಯಾದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ **ದಿನಾಂಕ: 27–05–2025 ರಂದು ಸಂಜೆ 4:00 ಗಂಟೆಯವರೆಗೆ.** 4) ಕೆಪಿಪಿಪಿ ಪೋರ್ಟಲ್ ಮೂಲಕ ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ **ದಿನಾಂಕ: 28–05–2025ರ ಸಂಜೆ 4:30 ಗಂಟೆಯ ನಂತರ.**

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ, ಬಿ.ಬಿ.ಎಂ.ಪಿ.

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2025–26/267
ದಿನಾಂಕ:13.05.2025

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟಿ ಪದ್ದತಿ)

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2024–25 ನೇ ಸಾಲಿನ ಲೆಶೀ 5054 ಯೋಜನೆಯಡಿಯಲ್ಲಿ ಇಂಡೆಂಟ ನಂ. RDPR/2025-26/RD/WORK_INDENT14505 ಒಟ್ಟು 1 ಕಾಮಗಾರಿಗೆ ಕೆ.ಡಬ್ಲೂ–4 ರ ಪ್ರಕಾರ ರೂ. 511.25 ಲಕ್ಷದವರೆಗೆ ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: 267 **ದಿನಾಂಕ: 13.05.2025** ರಂತೆ ಕಾಮಗಾರಿಗಳನ್ನು ಇ–ಟೆಂಡರ್‌ನ್ನು ಆಹ್ವಾನಿಸಿದ್ದು, ಕೆ.ಪಿ.ಪಿ ಪ್ರೋಟಲ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 28.05.2025** ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿಗದಿಪಡಿಸಿರುತ್ತದೆ.

ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/72/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜನಿಯರ್, ನಂ2 ಕಟ್ಟಡಗಳ ವಿಭಾಗ, 1ನೇ ಮಹಡಿ,
ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 08022122856
E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2025–26
ದಿನಾಂಕ: 13–05–2025

ಕಾರ್ಯಪಾಲಕ ಅಭಿಯಂತರರು, ನಂ. 2 ಕಟ್ಟಡಗಳ ವಿಭಾಗ, ಲೋಕೋಪಯೋಗಿ ಇಲಾಖೆ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ (ಕೆ.ಪಿ–4)ನಿಯಮದಂತೆ ಈ ಕೆಳಕಂಡ ಕಾಮಗಾರಿಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ **IDD Empanelled Consultants** ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಈ ಕೆಳಕಂಡ ಕಾಮಗಾರಿಗಳಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಬೆಲೆಯನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು(ದ) ಬೆಂಗಳೂರು ರವರ ಕಛೇರಿಯಲ್ಲಿ ಪೂರ್ವಭಾವಿ ಸಭೆ ದಿನಾಂಕ: 26.05.2025 ಬೆಳಿಗ್ಗೆ 11.00 ಗಂಟೆಗೆ
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 12.06.2025 ಸಂಜೆ 4.00ಗಂಟೆ ಯವರೆಗೆ.
3. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ ದಿನಾಂಕ:16.06.2025 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಕಾಮಗಾರಿಗಳ ವಿವರ : **SELECTION OF CONSULTANT FOR PROVIDING TRANSACTION ADVISORY SERVICES FOR DEVELOPMENT OF LAND PARCELS (4 PROPERTIES) LOCATED AT BENGALURU DISTRICT ON PPP MODE PWD/2025-26/SE0326** ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : 200.00, ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ : 03 ತಿಂಗಳು, ಲೋ.ಇ ಅರ್ಹ ಗುತ್ತಿಗೆದಾರರ ದರ್ಜೆ : **Class III and above**

ಹೆಚ್ಚಿನ ವಿವರಗಳನ್ನು ಕರ್ನಾಟಕದ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ **(https://kppp.karnataka.gov.in/#/portal/portal-home)** ಮೂಲಕ ಪಡೆಯಬಹುದಾಗಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.
DIPR/CP/654/Zen/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು (ವಿಜಯನಗರ) ಕಛೇರಿ, ಶಾಸಕರ ಭವನ,
1ನೇ ಮಹಡಿ, 3ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು–560040
ಸಂಖ್ಯೆ: ಕಾ.ಪಾ.ಅ(ವಿಜನ)/ಸ.ಅ/ಕೆಪಿಪಿಪಿ/12/2025–26 ದಿನಾಂಕ : 13.05.2025

ತಿದ್ದುಪಡಿ–2

ವಿಷಯ : ಟೆಂಡರ್ ಷೆಡ್ಯೂಲ್ 'ಬಿ' ಗಳನ್ನು ಡೌನ್‌ಲೋಡ್ ಮಾಡುವ, ಸ್ವೀಕರಿಸುವ ಮತ್ತು ಟೆಂಡರ್ ತೆರೆಯುವ ದಿನಾಂಕ ಮುಂದೂಡಿರುವ ಬಗ್ಗೆ.
ಉಲ್ಲೇಖ : ಟೆಂಡರ್ ಪ್ರಕಟಣೆ ಸಂಖ್ಯೆ: EE(VJN)/AE/KPPP/12/2024-25, Date: 19.03.2025.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಟೆಂಡರ್‌ನ ಕ್ರಮಸಂಖ್ಯೆ 01 ರ IHPS FRU CHC 25 Bed ನ ಮಾರ್ಗಸೂಚಿಯಂತೆ ಮಾನವ ಸಂಪನ್ಮೂಲ ಮತ್ತು ಡಯಾಲಿಸಿಸ್ ಸೆಂಟರ್‌ಗೆ ಬೇಕಾಗಿರುವ drugs and lab regents, Linen Laundry services, Electricity Water, Bio Medical Waste, Telephone / internet printing & stationery other contingencies ಕಾಮಗಾರಿಯ ಟೆಂಡರ್ ಷೆಡ್ಯೂಲ್ ಬಿ ಗಳನ್ನು ಡೌನ್‌ಲೋಡ್ ಮಾಡುವ ದಿನಾಂಕ, ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಮತ್ತು ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕವನ್ನು ಈ ಕೆಳಕಂಡಂತೆ ಮುಂದೂಡಲಾಗಿದೆ. ಉಳಿದಂತೆ ಟೆಂಡರ್ ನಿಯಮಾವಳಿಗಳಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

(1) ಕಾಮಗಾರಿಯ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡುವ **ದಿನಾಂಕ : 02.06.2025 ರಿಂದ** (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ **ದಿನಾಂಕ : 13.06.2025 ರಂದು ಸಂಜೆ 4.00 ಗಂಟೆಯವರೆಗೆ** (3) ಕಾಮಗಾರಿಯ ಪೂರ್ವಭಾವಿ ಸಭೆ : **10.06.2025 ರಂದು ಮಧ್ಯಾಹ್ನ 3.00 ಗಂಟೆಗೆ.** (4) ತಾಂತ್ರಿಕ ಬಿಡ್ಡನ್ನು ತೆರೆಯುವ **ದಿನಾಂಕ : 16.06.2025 ರಂದು ಬೆಳಿಗ್ಗೆ 11.30 ಗಂಟೆಗೆ.**

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ

ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್)
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಾಯಿತ ಪ್ರಧಾನ ಕಚೇರಿ: ನಂ. 17, ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ (ರಿಚ್‌ಮಂಡ್ ರಸ್ತೆ), ಬೆಂಗಳೂರು–560025, ಕರ್ನಾಟಕ, ಭಾರತ.
ದೂರವಾಣಿ: 080–22271194/ 22243082, ಇ–ಮೇಲ್: kappec1996@gmail.com
ವೆಬ್‌ಸೈಟ್: www.kappec.karnataka.gov.in

ಪ್ರಕಟಣೆ

1. ಆಹ್ವಾನ ಪತ್ರ: ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ (ಕೆಪೆಕ್) ಇದನ್ನು ರಾಷ್ಟ್ರೀಯ ತೋಟಗಾರಿಕೆ ಮಂಡಳಿ (ಎನ್‌ಎಚ್‌ಬಿ), ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರವು ಚಿತ್ರದುರ್ಗದಲ್ಲಿ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮ (ಸಿಡಿಪಿ) ಅನುಷ್ಠಾನಕ್ಕಾಗಿ ಕ್ಲಸ್ಟರ್ ಅಭಿವೃದ್ಧಿ ಏಜೆನ್ಸಿಯನ್ನಾಗಿ (ಸಿಡಿಎ) ಗುರುತಿಸಿದೆ. ದಾಳಿಂಬೆಯ ಮೌಲ್ಯ ಸರಣಿಯ ಅಂದರೆ–(ಎ) ಉತ್ಪಾದನೆ ಪೂರ್ವ ಮತ್ತು ಉತ್ಪಾದನೆ, (ಬಿ) ಕೊಯ್ಲಿನ ನಂತರದ ನಿರ್ವಹಣೆ ಮತ್ತು ಮೌಲ್ಯ ವರ್ಧನೆ (ಸಿ) ಲಾಜಿಸ್ಟಿಕ್ಸ್, ಮಾರಾಟ ಮತ್ತು ಬ್ರ್ಯಾಂಡಿಂಗ್‌ಗೆ ಚಿತ್ರದುರ್ಗ ಕ್ಲಸ್ಟರ್‌ನ ವಿವಿಧ ಆಯಾಮಗಳ ಅನುಷ್ಠಾನಕ್ಕೆ ಅನುಷ್ಠಾನ ಏಜೆನ್ಸಿಗೆ (ಐಎ) ಸಿಡಿಎ ಶಿಫಾರಸ್ಸು ಮಾಡುವುದು.

ಚಿತ್ರದುರ್ಗ ದಾಳಿಂಬೆ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನಕ್ಕೆ ಆನ್‌ಲೈನ್ ಪೋರ್ಟಲ್:(**http://www.nhb.gov.in/OnlineApplication/RegistrationForm.aspx**) ಮೂಲಕ ತಮ್ಮ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಅರ್ಹ ಅನುಷ್ಠಾನ ಏಜೆನ್ಸಿಗಳಿಂದ ಪ್ರಸ್ತಾವನೆಗಳನ್ನು ಕೆಪೆಕ್ ಆಹ್ವಾನಿಸಿದೆ.

ಆಸಕ್ತಿಯುಳ್ಳ ಏಜೆನ್ಸಿಗಳು "ಪ್ರಸ್ತಾವನೆಗಳಿಗೆ ಆಹ್ವಾನ" ಸಲ್ಲಿಸಲು ಹೆಚ್ಚಿನ ಮಾಹಿತಿ ಮತ್ತು ಕ್ರಮಾವಳಿಗಳನ್ನು ವೆಬ್‌ಸೈಟ್: **www.nhb.gov.in** ಮತ್ತು **https://www.kappec.karnataka.gov.in** ಇಲ್ಲಿಂದ ಪಡೆದುಕೊಳ್ಳಬಹುದು. ಪ್ರಸ್ತಾವನೆ ಸಲ್ಲಿಸಲು ಕಡೆಯ **ದಿನಾಂಕ 08.07.2025.** ಯಾವುದೇ ಕಾರಣ ನೀಡದೆ ಯಾವುದೇ ಸಮಯದಲ್ಲಿ ಬಿಡ್ ಅನ್ನು ರದ್ದುಪಡಿಸುವ ಅಥವಾ ಆರ್‌ಎಫ್‌ಪಿ ದಸ್ತಾವೇಜಿನಲ್ಲಿ ಒಳಗೊಂಡಿರುವ ಯಾವುದೇ ನಿಯಮಗಳು ಮತ್ತು ನಿಬಂಧನೆಗಳನ್ನು ತಿದ್ದುಪಡಿ ಮಾಡುವ / ಹಿಂಪಡೆಯುವ ಹಕ್ಕನ್ನು ಕೆಪೆಕ್ ಕಾಯ್ದಿರಿಸಿಕೊಂಡಿದೆ.

ಸಹಿ/–ವ್ಯವಸ್ಥಾಪಕ ನಿರ್ದೇಶಕರು, ಕೆಪೆಕ್

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜನಿಯರ್‌ರವರ ಕಚೇರಿ, ಕಾನೀನಿನಿ.,
ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:03/2025–26
Date: 12.05.2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1ರ ನಿಯಮದನ್ವಯ ಎಗ್ಸಿಕ್ಯುಟಿವ್ ಇಂಜಿನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ(ನಿ) ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.,) ಬೆಂಗಳೂರು ರವರ ಪರವಾಗಿ PWD Class-IV and above of any State /Central Government /Public Sector organization ನಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ಏಕಲಕೋಟೆ ಪದ್ಧತಿಯಲ್ಲಿ 6 ಕಾಮಗಾರಿಗಳಿಗೆ ಮತ್ತು PWD Class-IV and above of any State /Central Government /Public Sector organization with Electrical License ನಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ 1 ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಒಟ್ಟು 7 ಕಾಮಗಾರಿಗಳ ಪೈಕಿ 4 ಕಾಮಗಾರಿಗಳನ್ನು Scheduled Caste (1Work), CAT-I (1Work), CAT-II(A) (1Work) ಮತ್ತು Scheduled Tribe (1Work) ಗುತ್ತಿಗೆದಾರರಿಗೆ ಹಂಚಿಕೆ ಮಾಡಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.15.17ಲಕ್ಷ ಹಾಗೂ ಕನಿಷ್ಠ ಟೆಂಡರ್ ಮೊತ್ತ ರೂ.3.38ಲಕ್ಷ. EMD ಮತ್ತು ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆ.ಪಿ.ಪಿ.ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://kppp.karnataka.gov.in ಮೂಲಕ ದಿನಾಂಕ:14.05.2025 ರಿಂದ 22.05.2025 ರ ವರೆಗೆ ಪಡೆಯಬಹುದು (Down load), ಆರ್ಥಿಕ ಬಿಡ್ ತೆರೆಯುವ ದಿನಾಂಕ 23.05.2025 ರ ಸಂಜೆ 5.00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https://kppp.karnataka.gov.in ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಅಣೆಕಟ್ಟು ವಿಭಾಗ, ಕಾನೀನಿನಿ, ಗೊರೂರು
ವಾಸಾಸಂಇ/ಹಿಸನಿ/ಹಾಸನ/102/ಕೆಎಸ್‌ಎಂಸಿಎ/2025–26

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಗೆಲ್ಲುತ್ತೇನೆ ಎಂದು ಬಂದವರು ಸೋಲುವುದಕ್ಕೂ ಸಿದ್ಧರಾಗಿರಬೇಕು. –ತ.ರಾ.ಸು.

ರೋಹಿತ್, ವಿರಾಟ್ ನಿವೃತ್ತಿ ಕ್ರಿಕೆಟ್‌ನ ಒಂದು ಯುಗಾಂತ್ಯ

ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಟೆಸ್ಟ್ ಮಾದರಿಗೆ ವಿದಾಯ ಹೇಳಿರುವುದರಿಂದ ಭಾರತದ ಕ್ರಿಕೆಟ್‌ನಲ್ಲಿ ಒಂದು ಸುವರ್ಣ ಯುಗದ ಅಂತ್ಯವಾದಂತಾಗಿದೆ. ಈ ಹದಿನೈದು ವರ್ಷಗಳ ಅವಧಿಯಲ್ಲಿ ಈ ಇಬ್ಬರೂ ನವಪೀಳಿಗೆಯನ್ನು ಪ್ರಭಾವಿಸಿದ ರೀತಿ ಅನನ್ಯ. ಟ್ವೆಂಟಿ–20 ಕ್ರಿಕೆಟ್ ಭರಾಟೆಯ ನಡುವೆಯೂ ಟೆಸ್ಟ್ ಮಾದರಿಗೆ ಹೊಸ ಚೈತನ್ಯ ತುಂಬಿದ ಶ್ರೇಯ ಈ ದಿಗ್ಗಜರಿಗೇ ಸಲ್ಲಬೇಕು. ಕ್ರಿಕೆಟ್‌ನ ಮೂರೂ ಮಾದರಿಗಳಲ್ಲಿ ಈ ಆಟಗಾರರು ಒಂದೇ ರೀತಿ ಮಿಂಚಿದರೂ ಟೆಸ್ಟ್ ಕ್ರಿಕೆಟ್ ಮೇಲೆಯೇ ಅವರ ಒಲವು ಹೆಚ್ಚಾಗಿತ್ತು ಎಂಬುದನ್ನು ಅಭಿಮಾನಿಗಳೆಲ್ಲ ಬಲ್ಲರು. ಸಚಿನ್ ತೆಂಡೂಲ್ಕರ್ ಬಳಿಕ ಭಾರತೀಯ ಕ್ರಿಕೆಟ್‌ನ ಅಸ್ಮಿತೆಯನ್ನು ಉಜ್ವಲವಾಗಿ ಬೆಳಗಿದ ಕ್ರಿಕೆಟಿಗ ಎಂದರೆ ಅದು ಕೊಹ್ಲಿ ಅವರೇ ಎಂಬುದರಲ್ಲಿ ಎರಡು ಮಾತಿಲ್ಲ. ದಶಕಕ್ಕೂ ಮೀರಿದ ತಮ್ಮ ಆಟದಲ್ಲಿ ವಿರಾಟ್ ಬರೀ ರನ್ ಗಳಿಸಲಿಲ್ಲ – ನಿರೀಕ್ಷೆಗಳನ್ನು ಮರು ವ್ಯಾಖ್ಯಾನಿಸಿದರು, ದೊಡ್ಡ ಸವಾಲುಗಳನ್ನು ಮೆಟ್ಟಿ ನಿಂತರು, ಭಾರತೀಯ ಕ್ರೀಡಾಶಕ್ತಿಯ ಮಾನವ ರೂಪವಾಗಿ ಕಂಗೊಳಿಸಿದರು. ವಿದೇಶಿ ನೆಲದಲ್ಲೂ ಗೆಲುವಿನ ರೂವಾರಿಯಾಗಿ ಮೆರೆದರು. ಭಾರತ ಕ್ರಿಕೆಟ್ ಕಂಡ ಅತ್ಯಂತ ಯಶಸ್ವಿ ನಾಯಕರಲ್ಲಿ ವಿರಾಟ್ ಅಗ್ರಗಣ್ಯರು. ಅವರ ನಾಯಕತ್ವದ ಅವಧಿ ಎಂದರೆ ಅದು ಭಾರತ ತಂಡದ ಪಾಲಿಗೊಂದು ಮಹಾನ್ ‘ವಿರಾಟಪರ್ವ’. ಪ್ರತಿಯೊಬ್ಬ ಕ್ರೀಡಾಪಟುವಿನ ವೃತ್ತಿ ಜೀವನದಲ್ಲಿ ಏಳುಬೀಳುಗಳು ಸಹಜ. ಆದರೆ, ವೈಫಲ್ಯಗಳನ್ನೆಲ್ಲ ಮೆಟ್ಟಿನಿಂತು ರೋಹಿತ್ ಮತ್ತು ವಿರಾಟ್ ತೋರಿದ ಸಾಧನೆ ಅನನ್ಯವಾದುದು. ವಿಶ್ವದ ಶ್ರೇಷ್ಠ ಬ್ಯಾಟರ್‌ಗಳಾಗುವುದರ ಜೊತೆಗೆ ನಾಯಕತ್ವದಲ್ಲಿಯೂ ಯಶಸ್ವಿಯಾದವರು ಅವರು. ತಮ್ಮ ವ್ಯಕ್ತಿತ್ವ ಮತ್ತು ನಡವಳಿಕೆಯ ಮೂಲಕ ಯುವಪೀಳಿಗೆಗೆ ಮಾದರಿಯಾದವರು ಕೂಡ.

ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ಸ್ಥಾನವನ್ನು ತುಂಬುವಂತಹ ಪ್ರತಿಭೆಗಳನ್ನು ಹುಡುಕುವ ಸವಾಲು ಈಗ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಆಯ್ಕೆ ಸಮಿತಿ ಮುಂದಿದೆ

ಹೊಸ ಪೀಳಿಗೆಯ ಕ್ರಿಕೆಟಿಗರಿಗೆ ಫಿಟ್‌ನೆಸ್ ಹವ್ಯಾಸ ರೂಢಿಸಿದ ಕೊಹ್ಲಿ ಇನ್ನೂ ಕೆಲವು ವರ್ಷ ಆಡುವ ಸಾಮರ್ಥ್ಯ ಹೊಂದಿದ್ದಾರೆ. 14 ವರ್ಷಗಳ ಅವಧಿಯಲ್ಲಿ 123 ಟೆಸ್ಟ್‌ಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದ ಕೊಹ್ಲಿ ಅವರ ಜನಪ್ರಿಯತೆ ಮತ್ತು ಬ್ರ್ಯಾಂಡ್ ಮೌಲ್ಯ ಉತ್ತುಂಗದಲ್ಲಿದೆ. ಆದರೆ, 36 ವರ್ಷ ವಯಸ್ಸಿನ ಈ ತಾರಾ ವರ್ಚಸ್ಸಿನ ಆಟಗಾರ ಯುವ ಆಟಗಾರರಿಗೆ ದಾರಿ ಬಿಟ್ಟುಕೊಟ್ಟಿದ್ದಾರೆ. ಅವರ ಸ್ಥಾನವನ್ನು ತುಂಬುವಂತಹ ಪ್ರತಿಭೆಗಳನ್ನು ಹುಡುಕುವ ಸವಾಲು ಈಗ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಆಯ್ಕೆ ಸಮಿತಿ ಮುಂದಿದೆ. ದಶಕದ ಹಿಂದೆ ರಾಹುಲ್ ದ್ರಾವಿಡ್ ಮತ್ತು ವಿ.ವಿ.ಎಸ್. ಲಕ್ಷ್ಮಣ್ ಅವರು ಅಲ್ಪಸಮಯದ ಅಂತರದಲ್ಲಿ ನಿವೃತ್ತಿ ಹೊಂದಿದಾಗಲೂ ಇಂತಹದೇ ಪರಿಸ್ಥಿತಿ ಇತ್ತು. ಪ್ರಸ್ತುತ ಕಾಲಘಟ್ಟದಲ್ಲಿ ದೇಶದುದ್ದಕ್ಕೂ ನೂರಾರು ಪ್ರತಿಭಾವಂತ ಕ್ರಿಕೆಟಿಗರು ಮಿಂಚುತ್ತಿದ್ದಾರೆ. ಅವರಲ್ಲಿಯೇ ಕೆಲವರು ರೋಹಿತ್–ವಿರಾಟ್ ಪರಂಪರೆ ಮುಂದುವರಿಸುವ ಸಾಮರ್ಥ್ಯ ಹೊಂದಿರಲೂಬಹುದು. ರೋಹಿತ್ ಮತ್ತು ಕೊಹ್ಲಿ ಅವರ ಆಟದ ದಾಖಲೆಗಳನ್ನು ಮುರಿಯುವಂತಹ ಆಟಗಾರರೂ ಸಿಗಬಹುದು. ಆದರೆ, ಅವರ ಬದ್ಧತೆ, ಸ್ನೇಹಪರತೆ ಮತ್ತು ಕ್ರೀಡಾಸ್ಫೂರ್ತಿಯ ವ್ಯಕ್ತಿತ್ವವನ್ನು ಸರಿಗಟ್ಟುವಂತಹವರು ಲಭಿಸುವರೇ ಎಂಬ ಪ್ರಶ್ನೆಯೂ ಮೂಡಿದೆ. ಅದಕ್ಕೆಲ್ಲ ಮುಂಬರುವ ಕಾಲವೇ ಉತ್ತರ ನೀಡಬೇಕು. ಈ ದಿಗ್ಗಜರ ನಿವೃತ್ತಿಯು ಒಂದು ಮಹತ್ವದ ಚರ್ಚೆಗೂ ಕಾರಣವಾಗಿದೆ. ಭಾರತದ ಕ್ರಿಕೆಟ್ ಬೆಳವಣಿಗೆಗೆ ಅಮೂಲ್ಯ ಕಾಣಿಕೆ ಕೊಟ್ಟ ಇಂತಹ ಆಟಗಾರರಿಗೆ ಗೌರವಯುತವಾದ ಬೀಳ್ಕೊಡುಗೆ ಲಭಿಸಬೇಕು ಎಂದು ಮಾಜಿ ಕ್ರಿಕೆಟಿಗ ಅನಿಲ್ ಕುಂಬ್ಳೆ ಸೇರಿದಂತೆ ಹಲವು ಆಟಗಾರರು ಪ್ರತಿಪಾದಿಸಿದ್ದಾರೆ. 12 ವರ್ಷಗಳ ಹಿಂದೆ ಸಚಿನ್ ತೆಂಡೂಲ್ಕರ್ ಅವರಿಗೆ ವಿದಾಯದ ಟೆಸ್ಟ್ ಸರಣಿ ಆಯೋಜಿಸುವ ಮೂಲಕ ಅರ್ಥಪೂರ್ಣ ಬೀಳ್ಕೊಡುಗೆ ನೀಡಲಾಗಿತ್ತು. ತಮ್ಮ ವಿದಾಯದ ಪಂದ್ಯಗಳ ನಂತರ ಅಭಿಮಾನಿಗಳ ಸಮ್ಮುಖದಲ್ಲಿ ನಿವೃತ್ತಿ ಪಡೆದು ಕ್ರೀಡಾಂಗಣದಿಂದ ನಿರ್ಗಮಿಸುವ ಅವಕಾಶವನ್ನು ರೋಹಿತ್ ಮತ್ತು ವಿರಾಟ್ ಅವರಿಗೂ ಬಿಸಿಸಿಐ ಕಲ್ಪಿಸಬೇಕಿತ್ತು ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ. ಟ್ವೆಂಟಿ–20 ಕ್ರಿಕೆಟ್ ಅಬ್ಬರದಲ್ಲಿಯೂ ಟೆಸ್ಟ್ ಮಾದರಿಯ ಘನತೆ ಉಳಿಸಿ ಬೆಳೆಸಲು ಕಾರಣರಾದ ರೋಹಿತ್ ಮತ್ತು ವಿರಾಟ್ ಅವರಂತೂ ಅರ್ಥಪೂರ್ಣವಾದ ಬೀಳ್ಕೊಡುಗೆಗೆ ಹೆಚ್ಚು ಅರ್ಹರಾಗಿದ್ದರು ಎಂಬುದರಲ್ಲಿ ಅನುಮಾನವೇ ಇಲ್ಲ.

ದಿನದ ಟ್ವೀಟ್

ಭಾಷಾ ವೈವಿಧ್ಯದ ಸೊಬಗು



ಸಂತಾಲೀ ಬುಡಕಟ್ಟು ಕುಟುಂಬಕ್ಕೆ ಸೇರಿದವರಾದ ನಮ್ಮ ರಾಷ್ಟ್ರಪತಿ, ಸಂತಾಲೀ ಭಾಷೆಯಲ್ಲಿ ಟ್ವೀಟ್ ಮಾಡಿದ್ದಾರೆ! ಎಷ್ಟು ಅದ್ಭುತ ಅಲ್ಲವೇ? ಈ ಲಿಪಿ ಅಚ್ಚರಿದಾಯಕವಾಗಿದೆ ಮತ್ತು ಬಹುತೇಕ ಪರಕೀಯ ಭಾಷೆಯಂತೆ ಕಾಣುತ್ತದೆ. ವಿಸ್ಮಯಕಾರಿ ಭಾರತ ಎಂಬುದು ಸತ್ಯವಾದ ಮಾತು.

ಸಂಗೀತಾ, ಲೇಖಕಿ

ಕಿಡಿನುಡಿ

ಅತ್ಯುತ್ತಮವಾದ ವಿಷಯ! ಆ ಮೂರ್ಖ ವ್ಯಕ್ತಿ ಸ್ವಲ್ಪವಾದರೂ ಬೆಲೆ ತೆರುವಂತೆ ಆಗುತ್ತದೆ ಎಂದು ಭಾವಿಸೋಣ.

(ಕರ್ನಲ್ ಸೋಫಿಯಾ ಖುರೇಷಿ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಮಧ್ಯಪ್ರದೇಶದ ಸಚಿವ ವಿಜಯ್ ಶಾ ವಿರುದ್ಧ, ಗಂಭೀರವಾದ ಅಪರಾಧಗಳಿಗೆ ಸಂಬಂಧಿಸಿದ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸುವಂತೆ ಜಬಲ್‌ಪುರ ಹೈಕೋರ್ಟ್‌ನ ವಿಭಾಗೀಯ ಪೀಠವು ಸ್ವಯಂಪ್ರೇರಿತ ನಿರ್ದೇಶನ ನೀಡಿರುವುದಕ್ಕೆ ಪ್ರತಿಕ್ರಿಯೆ)

ಅಜಯ್ ಕಾಮತ್, ನೇತ್ರತಜ್ಞ

25 ವರ್ಷಗಳ ಹಿಂದೆ

ಸೋಮವಾರ, 15-5-2000

● **ಆಲಮಟ್ಟಿ: ಪುನರ್ವಸತಿ ಸಮಸ್ಯೆ ಅಧ್ಯಯನಕ್ಕೆ ಸಮಿತಿ ರಚನೆ**

ಹುಬ್ಬಳ್ಳಿ, ಮೇ 14– ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಅಣೆಕಟ್ಟು ನಿರ್ಮಾಣದ ಹಿನ್ನೆಲೆಯಲ್ಲಿ ನಿರ್ವಸತಿಗರಾಗುವ ಜನರ ಪುನರ್ವಸತಿ ಸೇರಿದಂತೆ ಬಗೆಹರಿಯದೇ ಉಳಿದಿರುವ ವಿಷಯಗಳ ಅಧ್ಯಯನಕ್ಕಾಗಿ ಸರ್ಕಾರವು ನಿವೃತ್ತ ಐಎಎಸ್ ಅಧಿಕಾರಿ ಎ.ಎ.ಶೆಟ್ಟಿ ನೇತೃತ್ವದಲ್ಲಿ ತ್ರಿಸದಸ್ಯ ಸಮಿತಿಯೊಂದನ್ನು ರಚಿಸಿದೆ ಎಂದು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವ ಎಚ್.ಕೆ.ಪಾಟೀಲ ಇಂದು ಇಲ್ಲಿ ಹೇಳಿದರು.

‘ಪ್ರಜಾವಾಣಿ’ ಜೊತೆಗೆ ಮಾತನಾಡುತ್ತಿದ್ದ ಅವರು, ಸಮಿತಿಯ ಇತರ ಸದಸ್ಯರಾಗಿ ಆರ್.ಬಿ.ಪಾಟೀಲ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಂ.ಮಹದೇವಪ್ಪ ಅವರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಸಮಿತಿಯನ್ನು ಮೇ 9ರಂದು ರಚಿಸಲಾಗಿದ್ದು, ವಿಸ್ತೃತ ವರದಿಯನ್ನು ಒಂದು ತಿಂಗಳ ಒಳಗಾಗಿ ಸಲ್ಲಿಸುವಂತೆ ಸೂಚಿಸಲಾಗಿದೆ. ಅಣೆಕಟ್ಟು ಪ್ರದೇಶದಲ್ಲಿ ಭಾರಿ ಪ್ರಮಾಣದಲ್ಲಿ ನೀರು ಶೇಖರಣೆ ಆಗುವುದರ ಪರಿಣಾಮವಾಗಿ ಉಂಟಾಗಬಹುದಾದ ಮಲೇರಿಯಾ ಸಮಸ್ಯೆಯೂ ಸೇರಿದಂತೆ ವಿವಿಧ ಸಮಸ್ಯೆಗಳ ಕುರಿತು ಸಮಿತಿ ಅಧ್ಯಯನ ಮಾಡಲಿದೆ.

● **ಫಲಿಮಾರು ಮಠದ ವಿದ್ಯಾಮಾನ್ಯ ಶ್ರೀಗಳ ನಿಧನ**

ಉಡುಪಿ, ಮೇ 14– ಫಲಿಮಾರು ಭಂಡಾರಕೇರಿ ಮಠಾಧೀಶ ವಿದ್ಯಾಮಾನ್ಯ ತೀರ್ಥ ಸ್ವಾಮೀಜಿ (87) ಅವರು ಇಂದು ರಾತ್ರಿ 7.45ರ ಸುಮಾರಿಗೆ ನಿಧನರಾದರು.

ಸ್ವಾಮೀಜಿಯವರ ಪಾರ್ಥಿವ ಶರೀರವನ್ನು ಶ್ರೀಕೃಷ್ಣ ಮಠದ ವಸಂತ ಮಹಲ್‌ನಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು.

50 ವರ್ಷಗಳ ಹಿಂದೆ

ಗುರುವಾರ, 15-5-1975

● **ಕರ್ನಾಟಕ ಎಕ್ಸ್‌ಪ್ರೆಸ್ ಅಪಘಾತ ಮೂರು ಮಂದಿ ಸಾವು**

ಬೀರೂರು, ಮೇ 14– ಮೀರಜ್– ಬೆಂಗಳೂರು ಕರ್ನಾಟಕ ಎಕ್ಸ್‌ಪ್ರೆಸ್‌ನ ಡೀಸೆಲ್ ಎಂಜಿನ್ ಇಂದು ಬೆಳಗಿನ ಜಾವ 3–30ರ ಸಮಯದಲ್ಲಿ ಬೀರೂರು– ಅಜ್ಜಂಪುರ ನಿಲ್ದಾಣಗಳ ಮಧ್ಯೆ ಕಂಬಿ ತಪ್ಪಿದ ಕಾರಣ ಸಂಭವಿಸಿದ ಅನಾಹುತದಲ್ಲಿ ಮೂವರು ಪ್ರಯಾಣಿಕರು ಪ್ರಾಣ ಕಳೆದುಕೊಂಡರು.

ಗಾಯಗೊಂಡ 55 ಪ್ರಯಾಣಿಕರ ಪೈಕಿ ತೀವ್ರ ಪೆಟ್ಟಾಗಿರುವ ಆರು ಜನರನ್ನು ಬೀರೂರು ಆಸ್ಪತ್ರೆಗೆ ಸೇರಿಸಲಾಗಿದೆ.

● **ಬೆಟ್ಟ ಅಗೆದು ಇಲಿ ಹಿಡಿದಂತೆ?**

ಬೆಂಗಳೂರು, ಮೇ 14– ಕಾವೇರಿ ಯೋಜನೆ ಕಾರ್ಯಗತವಾದ ಮೇಲೆ ಬೆಂಗಳೂರು ನಗರದ ನೀರು ಸರಬರಾಜು ನಿರ್ವಹಣೆಗೆ ಪ್ರತ್ಯೇಕ ಮಂಡಳಿಯೊಂದರ ಅಗತ್ಯದ ಬಗ್ಗೆ ಅನೇಕರು ಸಂಶಯ ವ್ಯಕ್ತಪಡಿಸುತ್ತಿದ್ದಂತೆ ಲೋಕೋಪಯೋಗಿ ಸಚಿವ ಚನ್ನಬಸಪ್ಪ ಅವರೇ ಈ ಸಂಶಯ ಬಗೆಹರಿಸಿದರು.

ಮಂಡಳಿಯ ಅಗತ್ಯವಿಲ್ಲವೆಂದು ಕೆಲವು ವಾರಗಳ ಹಿಂದೆ ಚನ್ನಬಸಪ್ಪನವರು ಬಹಿರಂಗವಾಗಿ ಹೇಳಿದಾಗ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳಲು ಬಹುಮಂದಿ ಸಿದ್ಧರಿದ್ದರು. ಕಾರಣ, ಮಂಡಳಿಗಾಗಿ ವರ್ಷಕ್ಕೆ ಆಗುವ ವೆಚ್ಚ ಸುಮಾರು ಒಂದು ಕೋಟಿ ರೂಪಾಯಿ. ಅದನ್ನು ತೆರಬೇಕಾದವರು ನಾಗರಿಕರು.

ನಗರಸಭೆಯೇ ನೀರು ಸರಬರಾಜನ್ನು ಕೆಲವು ಲಕ್ಷ ರೂಪಾಯಿ ಹೆಚ್ಚಿನ ವೆಚ್ಚದಿಂದ ನಿರ್ವಹಿಸಬಲ್ಲದೆಂಬುದು ಸಾಕಷ್ಟು ಮಂದಿಯ ಅಭಿಪ್ರಾಯ. ಆದರೂ ಈ ಅಭಿಪ್ರಾಯವನ್ನು ಒಪ್ಪದೆ, ಮಂಡಳಿಯ ಅಗತ್ಯವಿದೆಯೆಂದು ಸದುದ್ದೇಶದಿಂದಲೇ ಹೇಳುವವರೂ ಇದ್ದಾರೆ.

ಶಿಕ್ಷಣದಲ್ಲಿ ತ್ರಿಭಾಷಾ ಸೂತ್ರ ಪಾಲನೆ ಕನ್ನಡದ ಮುನ್ನಡೆಗೆ ಅಪಾಯಕಾರಿ

ಬಹುಭಾಷೆಗಳಲ್ಲಿ ದ್ವಿಭಾಷೆಯೇ ದಿವ್ಯೌಷಧ

ವಿಶ್ಲೇಷಣೆ

ಹಂಪ ನಾಗರಾಜಯ್ಯ

ಸ್ವಾತಂತ್ರ್ಯಪೂರ್ವದಲ್ಲಿ ಭಾಷಾ ಸಮಸ್ಯೆ ಇರಲಿಲ್ಲ. ಅವರವರ ತಾಯಿನುಡಿಯಲ್ಲಿ ಕಲಿಕೆ ನಡೆಯುತ್ತಿತ್ತು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬದಲಾವಣೆಯ ಗಾಳಿ ಬೀಸಿತು. ಭಾಷಾವಾರು ಪ್ರಾಂತಗಳ ಪರಿಕಲ್ಪನೆ ಕೊನರಿತು. ತೆಲುಗು ಭಾಷಾ ಪ್ರದೇಶ ಸ್ವತಂತ್ರ ಪ್ರಾಂತವಾಗಬೇಕೆಂದು ಪೊಟ್ಟಿ ಶ್ರೀರಾಮುಲು ಆಮರಣಾಂತ ಉಪವಾಸ ಮಾಡಿ ಪ್ರಾಣತೆತ್ತ ಕಾರಣ ಆಂಧ್ರಪ್ರದೇಶ ನಿರ್ಮಾಣ ಆಯಿತು. ಅದು ಭಾಷಾವಾರು ಪ್ರಾಂತ ರಚನೆಗೆ ನಾಂದಿ ಆಗಿ 1956ರಲ್ಲಿ ಕರ್ನಾಟಕ ಏಕೀಕರಣ ಆಯಿತು.

ಆಗ, ಹಿಂದಿ ಭಾಷೆಗೆ ಜಾಗ ಕಲ್ಪಿಸಿ, ಪ್ರೌಢಶಾಲೆಯಲ್ಲಿ ಮೊದಲನೆಯ ಭಾಷೆ, ಎರಡನೆಯ ಭಾಷೆ, ಮೂರನೆಯ ಭಾಷೆ ಎಂದು ಮೂರು ಭಾಷೆಗಳನ್ನು ಕಲಿಯುವ ವ್ಯವಸ್ಥೆ ಜಾರಿಗೆ ಬಂತು. ಮೊದಲನೆಯ ಭಾಷೆಯಾಗಿ ಮಾತೃಭಾಷೆ ಕನ್ನಡ ಅಥವಾ ಬೇರೆ ಭಾಷೆಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿತ್ತು. ಎರಡನೆಯ ಭಾಷೆಯಾಗಿ ಇಂಗ್ಲಿಷ್ ಕಡ್ಡಾಯವಾಗಿತ್ತು. ಮೂರನೆಯ ಭಾಷೆಯಾಗಿ ಕನ್ನಡ ಅಥವಾ ಹಿಂದಿ ಇಲ್ಲವೇ ಇನ್ನೊಂದು ಭಾಷೆಯನ್ನು ಆರಿಸಿಕೊಳ್ಳಬಹುದಿತ್ತು. ಈ ತ್ರಿಭಾಷಾ ವ್ಯವಸ್ಥೆಯನ್ನು ರೂಪಿಸಿ ಜಾರಿಗೆ ತಂದುದರಲ್ಲಿ ದೊಡ್ಡ ಹುನ್ನಾರ ನಡೆದಿತ್ತು. ಇದು ಕನ್ನಡ ವಿರೋಧಿಯಾಗಿತ್ತು ಮತ್ತು ಜಾಣ ಕನ್ನಡ ವಿದ್ಯಾರ್ಥಿಗಳಿಗೆ ಘನಘೋರ ಅನ್ಯಾಯ ಎಸಗಿತ್ತು.

ಹೇಗೆಂದರೆ, ಕೆಲವರು ಪ್ರಥಮ ಭಾಷೆಯಾಗಿ ಕನ್ನಡದ ಬದಲು ಸಂಸ್ಕೃತವನ್ನು ಆಯ್ಕೆ ಮಾಡಿಕೊಂಡರು. ಅದಕ್ಕೆ ಕಾರಣ ಅವರ ಮಾತೃಭಾಷೆ ಸಂಸ್ಕೃತ ಎಂದಲ್ಲ ಅಥವಾ ಸಂಸ್ಕೃತದಲ್ಲಿ ಆಸಕ್ತಿ ಇದೆ ಎಂಬುದೂ ಅಲ್ಲ. ಈ ಆಯ್ಕೆಯ ಉದ್ದೇಶ ಸುಲಭವಾಗಿ ಹೆಚ್ಚು ಅಂಕಗಳನ್ನು ಪಡೆದು ರ್‍ಯಾಂಕು ಗಿಟ್ಟಿಸಬಹುದು ಎಂಬುದು. ಅದರಲ್ಲಿ ಇನ್ನೊಂದು ಒಳಗುಟ್ಟು ಇದೆ. ಸಂಸ್ಕೃತ ಆರಿಸಿಕೊಂಡರೆ ಪಠ್ಯ ಸುಲಭ, ಸರಳ ಬಾಲಬೋಧೆ. ಪರೀಕ್ಷೆಯಲ್ಲಿ ಉತ್ತರವನ್ನು ಕನ್ನಡದಲ್ಲೇ ಬರೆಯಬಹುದು. ಬಹಳ ಮುಖ್ಯವಾದ ಲಾಭವೆಂದರೆ ಅತಿ ಹೆಚ್ಚು ಅಂಕಗಳನ್ನು, ನೂರಕ್ಕೆ 85ರಿಂದ 100ರವರೆಗೆ ಧಾರಾಳವಾಗಿ ಪಡೆಯಬಹುದಿತ್ತು. ಇದಕ್ಕೆ ತದ್ವಿರುದ್ಧವಾಗಿ, ಕನ್ನಡ ಆರಿಸಿಕೊಂಡವರಿಗೆ ದೊಡ್ಡ ಪಠ್ಯಪುಸ್ತಕಗಳು, ಶ್ರಮ ಹೆಚ್ಚು, ಪರೀಕ್ಷೆಯಲ್ಲಿ ಉತ್ತರಕ್ಕೆ ಅನುಗುಣವಾಗಿ 50ರಿಂದ 80ರೊಳಗೆ ಅಂಕಗಳು. ಹೀಗಾಗಿ, ಎಲ್ಲಾ ವಿಷಯಗಳಲ್ಲಿ ಹೆಚ್ಚು ಅಂಕಗಳು ಬಂದಿದ್ದರೂ ಕನ್ನಡದಲ್ಲಿ ಕಡಿಮೆ ಅಂಕವಿದ್ದು ಉನ್ನತ ಶ್ರೇಣಿಯಲ್ಲಿ ಹಿಂದೆ ಇರುತ್ತಿದ್ದರು. ಸಂಸ್ಕೃತದಲ್ಲಿ ಅತಿ ಹೆಚ್ಚು ಅಂಕವಿದ್ದ ಕಾರಣ ನಿರಾಯಾಸವಾಗಿ ಉನ್ನತ ಶ್ರೇಣಿ ಪ್ರಾಪ್ತವಾಗುತ್ತಿತ್ತು. ಸಾರಾಂಶವೆಂದರೆ, ಕನ್ನಡವನ್ನು ಅಪ್ಪಿಕೊಂಡ ಕಾರಣಕ್ಕಾಗಿ ಕೆಳಗಾದರು, ಕನ್ನಡವನ್ನು ತೊರೆದ ‘ಮಾರ್ಕ್ಸ್‌ವಾದಿಗಳು’ ಮೇಲುಗೈ ಹೊಂದಿದರು.

ಈ ತ್ರಿಭಾಷಾ ವ್ಯವಸ್ಥೆಯನ್ನು ಹೇಗೆ ಕೆಲವರು ದುರುಪಯೋಗ ಅಲ್ಲಲ್ಲ ಸದುಪಯೋಗ ಮಾಡಿಕೊಂಡರೆಂಬುದು ತುಂಬಾ ತಡವಾಗಿ ಬೆಳಕಿಗೆ ಬಂತು. ಆ ವೇಳೆಗಾಗಲೇ ಕನ್ನಡ ಭಾಷೆಯನ್ನು ಆರಿಸಿಕೊಂಡ ಸಹಸ್ರಾರು ವಿದ್ಯಾರ್ಥಿಗಳಿಗೆ ಅನ್ಯಾಯವಾಗಿತ್ತು ಮತ್ತು ಸಂಸ್ಕೃತವನ್ನು ಆಯ್ಕೆ ಮಾಡಿಕೊಂಡು ರ್‍ಯಾಂಕು ಮೊದಲಾದ ಉನ್ನತಶ್ರೇಣಿ ಗಿಟ್ಟಿಸಿಕೊಂಡ ಸಮುದಾಯಕ್ಕೆ ದೊಡ್ಡ ಲಾಭವಾಯಿತು.

ತ್ರಿಭಾಷಾ ಶಿಕ್ಷಣ ಕ್ರಮದಿಂದ ಕನ್ನಡ ಭಾಷೆಗೆ ಉಂಟಾಗಿರುವ ಅಪಾಯ ಮತ್ತು ಕನ್ನಡ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನ್ಯಾಯದ ವಿಷಯ, 1976ರಲ್ಲಿ ಎಸ್.ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಸ್ತಾಪಿತವಾಗಿ ಸಾರ್ವಜನಿಕರ ಕಣ್ಣು ತೆರೆಸಿತು. ಅಲ್ಲಿ ಕೈಗೊಂಡ ಎರಡು ನಿರ್ಣಯಗಳು: 1. ಅನೇಕ ತರಗತಿಗಳ ಕನ್ನಡ ಮತ್ತು ಸಂಸ್ಕೃತ ವಿಷಯಗಳ ಪಾಠಕ್ರಮದ ಪಟ್ಟಿಯನ್ನು ಅವಲೋಕಿಸಿದಾಗ, ಸಂಸ್ಕೃತ ವಿಷಯಕ್ಕೆ ಒಂದೇ ಪಠ್ಯಪುಸ್ತಕ ಇದ್ದರೆ, ಕನ್ನಡಕ್ಕೆ ಅಧಿಕ ಪುಸ್ತಕಗಳಿದ್ದ ಕಾರಣ ವಿದ್ಯಾರ್ಥಿಗಳು ಹೆಚ್ಚಿಗೆ ಸಂಸ್ಕೃತದತ್ತ ಒಲಿದು ಕನ್ನಡ ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಿದ್ದಾರೆ. ಈ ಅಸಮತೆಯನ್ನು ಹೋಗಲಾಡಿಸಿ ಕನ್ನಡವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳಲು ತೊಂದರೆಯಾಗದಂತೆ ಸೂಕ್ತ ತಿದ್ದುಪಡಿಯನ್ನು ಪಾಠಕ್ರಮದಲ್ಲಿ ಮಾಡುವಂತೆ ಕಾಲೇಜು ಇಲಾಖೆ ನಿರ್ದೇಶಕರಿಗೂ ವಿಶ್ವವಿದ್ಯಾಲಯಗಳಿಗೂ ಸಮ್ಮೇಳನ ಸೂಚಿಸುತ್ತದೆ. 2. ರಾಜ್ಯದ ಪ್ರತಿ ಶಾಲೆಯಲ್ಲಿಯೂ ಒಂದರಿಂದ ಹತ್ತನೆಯ ತರಗತಿವರೆಗೆ ಕಡ್ಡಾಯವಾಗಿ ಕನ್ನಡ ಕಲಿಸುವ ವ್ಯವಸ್ಥೆ ಮಾಡಬೇಕು.

ಆನಂತರ 1979ರಲ್ಲಿ ಧರ್ಮಸ್ಥಳದಲ್ಲಿ ನಡೆದ 51ನೇ ಸಾಹಿತ್ಯ ಸಮ್ಮೇಳನವು ‘ಕರ್ನಾಟಕದ ಎಲ್ಲ ಪ್ರೌಢಶಾಲೆಗಳಲ್ಲಿಯೂ ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಕಡ್ಡಾಯವಾಗಿ ಕಲಿಸಲು ಒಡನೆಯೇ ವ್ಯವಸ್ಥೆ ಮಾಡಲು ಸರ್ಕಾರವನ್ನು ಒತ್ತಾಯಿಸಬೇಕು’ ಎಂಬ ಗೊತ್ತುವಳಿಯನ್ನು ಒಪ್ಪಿತು. ಅನೇಕ ಕಡೆ ಕನ್ನಡಪರ ಹಾಗೂ ಸಂಸ್ಕೃತ ವಿರೋಧದ ಧ್ವನಿ ಅನುರಣಿಸಿತು. ಇದರ ಪರಿಣಾಮವಾಗಿ, ರಾಜ್ಯ ಸರ್ಕಾರವು ಹಾಲಿ ಜಾರಿಯಲ್ಲಿದ್ದ ತ್ರಿಭಾಷೆಯ ಕ್ರಮವನ್ನು ಮಾರ್ಪಡಿಸಿ 1979ರ ಅಕ್ಟೋಬರ್‌ನಲ್ಲಿ ಮರುಆದೇಶ ಹೊರಡಿಸಿತು. ಅದರ ಪ್ರಕಾರ, ಸಂಸ್ಕೃತವನ್ನು ಮೊದಲನೆಯ ಭಾಷೆ ಪಟ್ಟಿಯಿಂದ ತೆಗೆದು ಮೂರನೆಯ ಭಾಷೆ ಪಟ್ಟಿಗೆ ಸೇರಿಸಲಾಗಿತ್ತು. ಇದರಿಂದ ನಿರಾಶರಾದ ಕಟ್ಟಾ ಸಂಸ್ಕೃತವಾದಿಗಳು ಹಳೆಯ ವ್ಯವಸ್ಥೆಯ ಮರುಸ್ಥಾಪನೆಗೆ ಕೋರಿ ಕೋರ್ಟಿನ ಮೆಟ್ಟಿಲೇರಿದರು. ಇದು ಕನ್ನಡಿಗರನ್ನು, ಚಳವಳಿಗಾರರನ್ನು ಕೆರಳಿಸಿತು. ವಿರೋಧ ಹೆಪ್ಪುಗಟ್ಟಿತು. ವಿಧಾನಮಂಡಲದ ಉಭಯ ಸದನಗಳಲ್ಲಿ ಇದು ಪ್ರತಿಧ್ವನಿಸಿತು.

ಎಚ್ಚೆತ್ತ ಸರ್ಕಾರ ಈ ವಿವಾದ ಬಗೆಹರಿಸಲು ಸಮಿತಿ ರಚಿಸಿತು. ವಿ.ಕೃ.ಗೋಕಾಕ್, ಜಿ.ನಾರಾಯಣ, ಎಸ್.ಕೆ.ರಾಮಚಂದ್ರ ರಾವ್, ತ.ಸು.ಶಾಮರಾಯ, ಕೆ.ಕೃಷ್ಣಮೂರ್ತಿ, ಎಚ್.ಪಿ.ಮಲ್ಲೇದೇವರು, ಸಾ.ಮಂಚಯ್ಯ ಸದಸ್ಯರಾಗಿದ್ದರು. ಸಮಿತಿಯ ಪರಿಶೀಲನೆಗೆ ವಹಿಸಿದ ವಿಷಯ: 1. ಶಾಲಾ ಪಠ್ಯದಲ್ಲಿ ಅಭ್ಯಾಸದ ವಿಷಯವಾಗಿ ಸಂಸ್ಕೃತ ಉಳಿಯಬೇಕೆ? 2. ಉಳಿಯಬೇಕಾದರೆ ಕನ್ನಡಕ್ಕೆ ಪರ್ಯಾಯವಾಗದೆ ಉಳಿಸುವುದು ಹೇಗೆ? 3. ತ್ರಿಭಾಷಾ ಸೂತ್ರದಂತೆ ಕನ್ನಡವನ್ನು ಕಡ್ಡಾಯ ಮಾಡಿ ಉಳಿದೆರಡು ಭಾಷೆಗಳ ಆಯ್ಕೆಯ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಬಿಡುವುದು ಸೂಕ್ತವೇ?

ಸಮಿತಿಯ ಸದಸ್ಯರ ಹೆಸರು ಬಹಿರಂಗವಾದ ಮೇಲೆ, ಕನ್ನಡಕ್ಕೆ ನ್ಯಾಯ ಸಿಗುವುದಿಲ್ಲ ಎಂಬ ಅಪನಂಬಿಕೆ ಜನರಲ್ಲಿ ಉಂಟಾಯಿತು. ಇದು ಸಂಸ್ಕೃತವಾದಿಗಳ ಸಮಿತಿ ಎಂದೂ ಕನ್ನಡ ವಿರೋಧಿ ಸಮಿತಿ ಎಂದೂ ಗದ್ದಲ ಶುರುವಾಯಿತು. ಪ್ರತಿಭಟನೆಯ ಕಿಡಿ ಹಬ್ಬಿತು. ಧಾರವಾಡದಲ್ಲಿ ‘ಗೋಕಾಕ್ ಗೋ ಬ್ಯಾಕ್’ ಎಂಬ ಘೋಷಣೆ ಮೊಳಗಿ ಸಮಿತಿಯ ಸದಸ್ಯರು ತೀವ್ರ ವಿರೋಧಕ್ಕೆ ಗುರಿಯಾಗಿ ವಿಚಲಿತರಾದರು. ಪರಿಸ್ಥಿತಿಯ ನಾಡಿಮಿಡಿತವನ್ನು ಅರಿತ ಸಮಿತಿಯು ಕನ್ನಡಕ್ಕೆ ಮೊದಲ ಭಾಷೆಯ ಮನ್ನಣೆಯಿತ್ತು ಸಂಸ್ಕೃತವನ್ನು ಮೂರನೆಯ ಸ್ಥಾನಕ್ಕೆ ತಳ್ಳಿತು.

ಈ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ ಅವಧಿಯಲ್ಲಿ ದೇವರಾಜ ಅರಸು ನೇತೃತ್ವದ ಸರ್ಕಾರ ಹೋಗಿ ಗುಂಡೂರಾವ್ ಮುಖ್ಯಮಂತ್ರಿಯಾದರು. ಅವರು ವರದಿಯನ್ನು ಅಂಗೀಕರಿಸುವ ವಿಚಾರಕ್ಕೆ ಗಮನಕೊಡದೆ ತಟಸ್ಥರಾಗಿದ್ದರು. ಇವರು ಕನ್ನಡಪರ ಅಲ್ಲವೆಂಬ ಗುಮಾನಿ ಪ್ರಬಲವಾಗಿ ಅದು ಕಾಳ್ಗಿಚ್ಚಿನಂತೆ ಹಬ್ಬಿತು. ಗೋಕಾಕ್ ವರದಿ ಜಾರಿಗೆ ಬರದ ಹೊರತು ವಿರಮಿಸುವುದಿಲ್ಲ ಎಂದು ಜನ ಬೀದಿಗಿಳಿದರು. ಜಾತಿಮತಧರ್ಮ ತಾರತಮ್ಯವಿರದೆ ನಾಡಿನ ಎಲ್ಲ ಸಂಘಟನೆಗಳೂ ಕನ್ನಡ ಚಳವಳಿಗಾರರೂ ಸಾಹಿತಿಗಳೂ ಒಕ್ಕೊರಲಿನಿಂದ ಪ್ರತಿಭಟಿಸತೊಡಗಿದರು. ಚಿತ್ರನಟ ರಾಜ್‌ಕುಮಾರ್ ಕೂಡ ಮುಂದಾಳುವಾಗಿ ನಿಂತದ್ದು ಈ ಹೋರಾಟಕ್ಕೆ ಆನೆಬಲ ತಂದಿತು. ಕವಿ ಕುವೆಂಪು ಅವರೂ ಬೀದಿಗಿಳಿದರು. ಮೈಸೂರಿನಲ್ಲಿ ಧರಣಿ ಕುಳಿತರು. ಇದಕ್ಕೆ ಮಣಿದ ಸರ್ಕಾರ ಮೈಸೂರಿನಲ್ಲೇ ಸಚಿವ ಸಂಪುಟ ಸಭೆ ನಡೆಸಿ, ವರದಿಯನ್ನು ಯಾವ ಬದಲಾವಣೆಯೂ ಇಲ್ಲದೆ ಅಂಗೀಕರಿಸಿತು.

ಇದು, ತ್ರಿಭಾಷಾ ಸೂತ್ರ ಕನ್ನಡದ ಮುನ್ನಡೆಗೆ ಅಪಾಯಕಾರಿ ಎಂಬುದನ್ನು ಬಿಂಬಿಸುತ್ತದೆ. ಪೂರ್ವಾಪರಗಳನ್ನು ವಸ್ತುನಿಷ್ಠವಾಗಿ ಪರ್ಯಾಲೋಚಿಸಿದರೆ ಶಿಕ್ಷಣದಲ್ಲಿ ದ್ವಿಭಾಷಾ ನೀತಿಪಾಲನೆ ಸೂಕ್ತ ಎಂದು ಮನವರಿಕೆ ಆಗುತ್ತದೆ. ರಾಜ್ಯಭಾಷೆ ಕನ್ನಡದ ಜೊತೆಗೆ ವಿದ್ಯಾರ್ಥಿಗಳು ಇಂಗ್ಲಿಷ್, ಸಂಸ್ಕೃತ ಅಥವಾ ಹಿಂದಿಯಲ್ಲಿ ತಮಗೆ ಬೇಕೆನಿಸಿದ್ದನ್ನು ಆಯ್ಕೆ ಮಾಡಿಕೊಳ್ಳಬಹುದು. ಇಂಗ್ಲಿಷ್ ಅನ್ನು ಬಹುಜನ ಬಯಸುತ್ತಿರುವುದರಿಂದ ಅವರ ಅಪೇಕ್ಷೆ ಈಡೇರುವುದಕ್ಕೆ ದ್ವಿಭಾಷಾ ನೀತಿಯಲ್ಲಿ ಅವಕಾಶವಿದೆ. ಶಿಕ್ಷಣದಲ್ಲಿ ಬೇರೆಬೇರೆ ವಿಷಯಗಳನ್ನು ಕಲಿಯಬೇಕಾಗಿರುತ್ತದೆ. ಅದರಿಂದ ಎರಡೇ ಭಾಷೆ ಇದ್ದರೆ ಮೂರು ಭಾಷೆ ಕಲಿಯಬೇಕಾದ ಹೊರೆ ನಿವಾರಣೆ ಆಗುತ್ತದೆ.

ಬಹುಭಾಷೆಗಳಲ್ಲಿ ದ್ವಿಭಾಷೆಯೇ ದಿವ್ಯೌಷಧ. ಏಕಕಾಲದಲ್ಲಿ ಅತ್ತ ಹಿಂದಿ ಹೇರಿಕೆಯಿಂದ ಪಾರಾಗುತ್ತೇವೆ, ಇತ್ತ ಸಂಸ್ಕೃತದ ಹೊಡೆತ ನಿವಾರಣೆಯಾಗುತ್ತದೆ, ಇಂಗ್ಲಿಷ್ ಬೇಡಿಕೆಯೂ ಈಡೇರುತ್ತದೆ. ಮಾತೃಭಾಷೆ ಗಟ್ಟಿಯಾಗಿ ನಿಲ್ಲುತ್ತದೆ.

ಚುರುಮುರಿ

ಯಶಸ್ಸಿನ ಕ್ರೆಡಿಟ್

● ಗುರು ಪಿ.ಎಸ್.

‘ಸಿಬಿಎಸ್‌ಇ ಸಿಲಬಸ್ ಟಫ್ ಆಗಿದ್ದರೂ ನನ್ನ ಮಗಳು ಎಸ್‌ಎಸ್‌ಎಲ್‌ಸಿಯಲ್ಲಿ ಎಷ್ಟೊಂದ್ ಮಾರ್ಕ್ಸ್ ತೆಗೆದಿದ್ದಾಳೆ ನೋಡು’ ಹೆಂಡತಿಗೆ ಹೆಮ್ಮೆಯಿಂದ ಹೇಳಿದೆ.

‘ನಿಮ್ಮ ಮಗಳು ಮಾತ್ರವಾ? ನನ್ನ ಮಗಳೂ ಹೌದಲ್ವಾ?’

‘ನಿನ್ನ ಮಗಳೂ ಇರಬಹುದು, ಆದರೆ ಬುದ್ಧಿವಂತಿಕೆಯೆಲ್ಲಾ ನನ್ನಂಗೆ’ ಎಂದೆ.

‘ನೀವೇನ್ರೀ, ಟ್ರಂಪ್ ಥರ ಆಡ್ತಿದ್ದೀರ. ಭಾರತ-ಪಾಕಿಸ್ತಾನ ಯುದ್ಧ ತಡೆದಿದ್ದು ನಾನೇ ಅಂತ ಆತ ಕ್ರೆಡಿಟ್ ತಗೊಂಡಂಗಾಯ್ತಿದು’ ಎಂದು ವ್ಯಂಗ್ಯವಾಡಿದ ಹೆಂಡತಿ, ‘ನಾನು ಮನೆಯಲ್ಲಿ ಚೆನ್ನಾಗಿ ಹೇಳಿಕೊಟ್ಟಿದ್ದರಿಂದಲೇ ಒಳ್ಳೆಯ ಮಾರ್ಕ್ಸ್ ಬಂದಿದೆ ಗೊತ್ತಾ?’ ಎಂದಳು.

‘ಹಾಗೇನಿಲ್ಲ, ನನ್ನ ಮಗಳಿಗೆ ನನ್ನ ಜೀನ್ಸ್ ಬಂದಿದೆ, ನಮ್ಮ ವಂಶದಲ್ಲಿ ಎಲ್ಲ ಬುದ್ಧಿವಂತರೇ’.

‘1971ರಲ್ಲಿ ಪಾಕ್ ಮೇಲಿನ ವಿಜಯ, ಬ್ರಹ್ಮೋಸ್ ಕ್ಷಿಪಣಿ ಸಾಮರ್ಥ್ಯ, ಇಸ್ರೊ ಸಾಧನೆಗೆಲ್ಲ ತಮ್ಮ ಪಕ್ಷವೇ ಕಾರಣ ಅಂತ ಕಾಂಗ್ರೆಸ್‌ನವರು, ಪಾಕಿಸ್ತಾನದ ಮೇಲೆ ಸರ್ಜಿಕಲ್ ಸ್ಟ್ರೈಕ್ ಮಾಡಿದ್ದಕ್ಕೆ ಬಿಜೆಪಿಯವರು ಕ್ರೆಡಿಟ್ ತಗೊಂಡಂಗಾಯ್ತು ಇದು. ನಾನು ಒಳ್ಳೆಯ ಊಟ ಉಣಿಸಿ, ಮಗಳನ್ನ ಚೆನ್ನಾಗಿ ನೋಡ್ಕೊಂಡಿರೋದ್ರಿಂದ ಹೆಚ್ಚು ಅಂಕ ತಗೊಂಡಿದ್ದಾಳೆ’.

‘ಯುದ್ಧ ಮಾಡಿದ ಸೈನಿಕರ ಬದಲು ಪಕ್ಷಗಳೇ ಎಲ್ಲ ಕ್ರೆಡಿಟ್ ತಗೊಂಡಂಗೆ, ಪಾಠ ಹೇಳಿಕೊಟ್ಟ ಶಿಕ್ಷಕರನ್ನ ಬಿಟ್ಟು ನೀನೇ ಎಲ್ಲ ಕ್ರೆಡಿಟ್ ತಗೊಳ್ತಿದ್ದೀಯಲ್ಲಮ್ಮ’.

‘ಹೀಗೆ ಎಲ್ಲರೂ ಕ್ರೆಡಿಟ್ ತಗೊಳ್ತಿರೋದ್ರಿಂದಲೇ ಪಾಕಿಸ್ತಾನ ಒಳಗಿಂದೊಳಗೇ ಐಎಂಎಫ್‌ನಿಂದ ‘ಕ್ರೆಡಿಟ್’ ತಗೊಂಡು ಬದುಕ್ಕೊಳ್ತು. ಇಲ್ಲದಿದ್ದರೆ ನಮ್ಮ ಸೈನಿಕರು ಆ ದೇಶವನ್ನ ಇಷ್ಟೊತ್ತಿಗೆ ಬೀದಿಪಾಲು ಮಾಡಿರೋರು. ಅದು ಹೋಗ್ಲಿ, ಮಗಳಿಗೆ ಮುಂದೆ ಯಾವ ವಿಭಾಗಕ್ಕೆ ಸೇರಿಸಬೇಕು ಅನ್ನೋದನ್ನ ಚರ್ಚೆ ಮಾಡೋಣ ಬನ್ನಿ’.

‘ರಾತ್ರಿ 8ಕ್ಕೆ ಮಾತಾಡ್ತೀನಿ’.

‘ಮಾತಾಡೋದಲ್ಲ ಚರ್ಚೆ ಮಾಡೋಣ’.

‘ಚರ್ಚೆ ಮಾಡೋದು, ಪ್ರಶ್ನೆ ಕೇಳೋದು ಏನಿಲ್ಲ. ನಾನು ಮಾತಾಡ್ತೀನಿ, ನೀನು ಕೇಳಿಸ್ಕೊಬೇಕಷ್ಟೇ’.

ಸಂಗತ

ತಂಬಾಕು ಉತ್ಪನ್ನ: ತೆರೆಮರೆಯ ಆಟ

ತಂಬಾಕಿನಿಂದ ವಿವಿಧ ಉತ್ಪನ್ನಗಳನ್ನು ಸೃಷ್ಟಿಸುವ ಕಂಪನಿಗಳಿಗೆ ಮಾರುಕಟ್ಟೆಯ ತಂತ್ರಗಾರಿಕೆ ಆಧಾರವಾಗಿರುತ್ತದೆಯೇ ವಿನಾ ವೈಜ್ಞಾನಿಕ ಸಂಶೋಧನೆಗಳಲ್ಲ

● ಡಾ. ಸುಶಿ ಕಾಡನಕುಪ್ಪೆ

‘ನಮ್ ಬಾಸು ಸಿಗರೇಟ್ ಸೇದೋ ಸ್ಟೈಲೇ ಸ್ಟೈಲು’ ಎಂದು ವಿದ್ಯಾರ್ಥಿಗಳು ತಮ್ಮ ನೆಚ್ಚಿನ ನಟನ ಬಗ್ಗೆ ಮಾತನಾಡಿಕೊಳ್ಳುವುದನ್ನು ನಾವು ಕೇಳಿಯೇ ಇರುತ್ತೇವೆ. ಚಿತ್ರನಟರು, ಸಂಗೀತಗಾರರು, ಆಟಗಾರರು, ಸೆಲೆಬ್ರಿಟಿಗಳು ಸಿಗರೇಟ್ ಸೇದುತ್ತಾ ಆಕರ್ಷಕ ಭಂಗಿಗಳಲ್ಲಿ ಮತ್ತು ಹಾಡಿನ ದೃಶ್ಯಗಳಲ್ಲಿ ಸಿನಿಮಾ ಹಾಗೂ ಸಾಮಾಜಿಕ ಮಾಧ್ಯಮದಲ್ಲಿ ಕಾಣಸಿಗುತ್ತಾರೆ. ಲಕ್ಷಾಂತರ ಲೈಕುಗಳನ್ನು ಪಡೆಯುವ ಇಂತಹ ವ್ಯಕ್ತಿಗಳಿಗೆ ಯುವಕರೇ ಅತಿ ಹೆಚ್ಚಿನ ಸಂಖ್ಯೆಯ ಹಿಂಬಾಲಕರಾಗಿದ್ದಾರೆ.

ಇ-ಸಿಗರೇಟುಗಳು, ನಿಕೋಟಿನ್ ಪೌಚ್‌ಗಳು ಮತ್ತು ಹುರಿದ ತಂಬಾಕು ಉತ್ಪನ್ನಗಳನ್ನು ಉತ್ತೇಜಿಸುವ ಮಾರ್ಕೆಟಿಂಗ್‌ಗೆ ಸಂಬಂಧಿಸಿದ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ನೂರಾರು ಕೋಟಿ ವೀಕ್ಷಣೆಗಳನ್ನು ಕಂಡಿವೆ. ಇದರ ಹಿಂದೆ ತಂಬಾಕು ಮತ್ತು ನಿಕೋಟಿನ್ ಉದ್ಯಮಗಳ ಕೈಚಳಕವಿದೆ.

ತಂಬಾಕು ಸೇವನೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳಿಂದ ಪ್ರತಿವರ್ಷ ವಿಶ್ವದಾದ್ಯಂತ ಸುಮಾರು 12 ಲಕ್ಷ ಜನ ಸಾಯುತ್ತಿದ್ದಾರೆ. ಈ ಭೂಮಿಯ ಬಹುಪಾಲು ಮಕ್ಕಳು ತಂಬಾಕು ಹೊಗೆಯಿಂದ ಕಲುಷಿತವಾದ ಗಾಳಿಯನ್ನೇ ಸೇವಿಸುತ್ತಿದ್ದಾರೆ. ಇವರಲ್ಲಿ ಪ್ರತಿವರ್ಷ ಸುಮಾರು 65,000 ಮಕ್ಕಳು ಉಸಿರಾಟದ ಸಮಸ್ಯೆಯಿಂದ ಸಾವನ್ನಪ್ಪುತ್ತಿದ್ದಾರೆ. ಈ ಮೂಲಕ ಕಳೆದುಕೊಳ್ಳುವ ತನ್ನ ಗ್ರಾಹಕರನ್ನು ತಂಬಾಕು ಉದ್ಯಮ ಮತ್ತೆ ಪಡೆಯುವುದು ಹೇಗೆ? ಅದು ಬಹಳ ಜಾಣತನದಿಂದ ತನ್ನ ಮಾರುಕಟ್ಟೆಯನ್ನು ಉಳಿಸಿಕೊಳ್ಳುತ್ತಾ, ವಿಸ್ತರಿಸಿಕೊಳ್ಳುತ್ತಾ ಬಂದಿದೆ. ಸಾವಿಗೀಡಾಗುವ ಲಕ್ಷಾಂತರ ಗ್ರಾಹಕರ ಜಾಗಕ್ಕೆ ಹೊಸ ಪೀಳಿಗೆಯ ಹದಿಹರೆಯದ ಮಕ್ಕಳು ಸೇರಿಕೊಳ್ಳುತ್ತಾರೆ. ಅವರ ಮಾರುಕಟ್ಟೆಯ ತಂತ್ರಗಳೆಲ್ಲಾ ಈ ವಯಸ್ಸಿನವರನ್ನೇ ಗುರಿಯಾಗಿಸಿಕೊಂಡಿರುತ್ತವೆ.

ತಂಬಾಕು ಉದ್ಯಮ ಎಲೆಕ್ಟ್ರಾನಿಕ್ ಸಿಗರೇಟನ್ನು ಮಾರುಕಟ್ಟೆಗೆ ತಂದಿದೆ. ಇ-ಸಿಗರೇಟನ್ನು 2019ರಲ್ಲಿ ಭಾರತ ಸರ್ಕಾರ ನಿಷೇಧಿಸಿತು. ಆದರೆ ಮಾರುಕಟ್ಟೆಯಲ್ಲಿ ಅದು ಅಕ್ರಮವಾಗಿ ಸಿಗುತ್ತಿದೆ. ಇ-ಸಿಗರೇಟುಗಳಲ್ಲಿ ತಂಬಾಕಿನ ದುಷ್ಪರಿಣಾಮ ಇಲ್ಲವೆಂದು ಹೇಳುವ ಕಂಪನಿಗಳು ನಿಕೋಟಿನ್ ಅಂಶವನ್ನು ಸೇರಿಸಿರುತ್ತವೆ. ನಿಕೋಟಿನ್ ಇಲ್ಲದೇ ಇರುವ ಇ-ಸಿಗರೇಟುಗಳು ಕೂಡ ಮಾರುಕಟ್ಟೆಯಲ್ಲಿ ಲಭ್ಯ. ಆದರೆ ಯಾವುದೇ ಇ-ಸಿಗರೇಟಾಗಲಿ ಶ್ವಾಸಕೋಶದ ಮೇಲೆ ದುಷ್ಪರಿಣಾಮ ಬೀರುವುದನ್ನು ವೈದ್ಯಕೀಯ ಸಂಶೋಧನೆಗಳು ತೋರಿಸಿವೆ. ತಂಬಾಕು ಕಂಪನಿಗಳು ಹದಿವಯಸ್ಕರನ್ನು ಗಮನದಲ್ಲಿ ಇರಿಸಿಕೊಂಡು ತಂಬಾಕು ಪದಾರ್ಥಗಳನ್ನು ಉತ್ಪಾದಿಸುತ್ತವೆ. ಯುವಕರು ಇಷ್ಟಪಡುವ ಬಬಲ್‌ಗಮ್, ಕಾಟನ್‌ಕ್ಯಾಂಡಿ, ಚೆರ್ರಿ, ಮಿಂಟ್, ವೆನಿಲಾದಂತಹ ಸುಮಾರು 16,000 ಫ್ಲೇವರ್‌ಗಳಲ್ಲಿ ತಂಬಾಕನ್ನು ಉತ್ಪಾದಿಸಿ ಮಾರುಕಟ್ಟೆಗೆ ಬಿಡಲಾಗುತ್ತದೆ. ಮಕ್ಕಳು ಇಷ್ಟಪಡುವ ಕ್ಯಾಂಡಿ ರೂಪದಲ್ಲೂ ದೊರೆಯುತ್ತದೆ.

ತಂಬಾಕು ಉತ್ಪನ್ನವನ್ನು ಹೆಸರಿಸದೆ ಬೇರೆ ಹೆಸರಿನ ಕೋಡ್ ಬಳಸಿ ಗ್ರಾಹಕರಿಗೆ ತಲುಪಿಸುವ ಜಾಲವೂ ಬಹಳ ವ್ಯವಸ್ಥಿತವಾಗಿ ಕಾರ್ಯಾಚರಿಸುತ್ತಿದೆ. ಹಾಗೆಯೇ ತಂಬಾಕಿನ ದುಷ್ಪರಿಣಾಮಗಳು ಇಲ್ಲವಾದರೂ ಅಷ್ಟೇ ಕಿಕ್ ಕೊಡುತ್ತವೆ ಎಂಬ ಭರವಸೆಯೊಂದಿಗೆ ಹೆಂಪ್ ಮತ್ತು ಹರ್ಬಲ್ ಉತ್ಪನ್ನಗಳಿಗೆ ತಂಬಾಕು ಉದ್ಯಮ ಪ್ರಚಾರ ಕೊಡುತ್ತದೆ. ಆದರೆ ಹಲವು ಬ್ರ್ಯಾಂಡ್‌ಗಳಲ್ಲಿ ತಂಬಾಕು ಅಥವಾ ಕ್ಯಾನಬಿಯನ್ನು ಬಳಸಲಾಗಿರುತ್ತದೆ. ಸಸ್ಯಜನ್ಯ ಉತ್ಪನ್ನಗಳಾದರೂ ಸಿಗರೇಟ್ ರೂಪದಲ್ಲಿ ಅವನ್ನು ಸುಟ್ಟು, ಹೊಗೆಯನ್ನು ಶ್ವಾಸಕೋಶಕ್ಕೆ ಎಳೆದುಕೊಳ್ಳುವುದರಿಂದ ಶ್ವಾಸನಾಳ ಮತ್ತು ಶ್ವಾಸಕೋಶಕ್ಕೆ ಹಾನಿಯುಂಟಾಗುತ್ತದೆ. ಹರ್ಬಲ್ ಸಿಗರೇಟನ್ನು ಸುಟ್ಟಾಗ ಕಾರ್ಬನ್ ಮೊನಾಕ್ಸೈಡ್ ಮತ್ತು ಕ್ಯಾನ್ಸರ್ ಉಂಟುಮಾಡುವ ಟಾರ್ ಉತ್ಪತ್ತಿಯಾಗುತ್ತವೆ.

ಈ ರೀತಿಯ ಪರ್ಯಾಯಗಳನ್ನು ಸೃಷ್ಟಿಸುವ ಕಂಪನಿಗಳಿಗೆ ಮಾರುಕಟ್ಟೆಯ ತಂತ್ರಗಾರಿಕೆ ಆಧಾರವಾಗಿ ಇರುತ್ತದೆಯೇ ವಿನಾ ವೈಜ್ಞಾನಿಕ ಸಂಶೋಧನೆಗಳಲ್ಲ. ತಂಬಾಕು ಉತ್ಪನ್ನಗಳನ್ನು ಯುವಕರಿಗೆ ಮುಟ್ಟಿಸಲು ಅವರಿಗೆ ಇಷ್ಟವಾಗುವ ಪ್ರಸಿದ್ಧ ವ್ಯಕ್ತಿಗಳಿಗೆ ದುಡ್ಡು ಕೊಟ್ಟು ಜಾಹೀರಾತು ಕೊಡಿಸುತ್ತದೆ. ಇವು ಜಾಹೀರಾತಿನಂತಿರದೆ ಅವರ ಇನ್‌ಸ್ಟಾಗ್ರಾಮ್ ಪೋಸ್ಟ್ ಅಥವಾ ಅವರ ಹಾಡು, ಸಿನಿಮಾ ದೃಶ್ಯಗಳಲ್ಲಿ ತಂಬಾಕು ಉತ್ಪನ್ನಗಳ ಬಳಕೆಯ ಮೂಲಕ ಆಸಕ್ತಿ ಕೆರಳಿಸುತ್ತವೆ. ನೆಚ್ಚಿನ ಸೆಲೆಬ್ರಿಟಿ ಸಿಗರೇಟು ಸೇದುವ ದೃಶ್ಯದ ಹಿಂದೆ ಈ ಕಂಪನಿಗಳ ಕೈವಾಡ ಇರುವುದು ನಿಶ್ಚಿತ. ಆ ಸೆಲೆಬ್ರಿಟಿಯನ್ನು ಅನುಸರಿಸುವ ನಾವು, ಅರಿವಿಲ್ಲದೇ ಕಂಪನಿಗಳ ಈ ತೆರೆಮರೆಯ ಆಟಕ್ಕೆ ಬಲಿಯಾಗುತ್ತೇವೆ.

ವಿಶ್ವ ಆರೋಗ್ಯ ಸಂಸ್ಥೆಯು ಪ್ರತಿವರ್ಷ ಮೇ 31ರಂದು ವಿಶ್ವ ತಂಬಾಕು ರಹಿತ ದಿನಾಚರಣೆಗೆ ಮುಂದಾಗಿದೆ. ‘ಆಕರ್ಷಕ ಉತ್ಪನ್ನಗಳು, ಕರಾಳ ಉದ್ದೇಶಗಳು: ಮುಖವಾಡವನ್ನು ಬಿಚ್ಚಿಡುವುದು’ ಎಂಬ ಘೋಷವಾಕ್ಯದಡಿ ತಂಬಾಕು ಉದ್ಯಮದ ತೆರೆಮರೆಯ ಆಟಗಳ ಬಗ್ಗೆ ಈ ವರ್ಷವಿಡೀ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸದಸ್ಯ ರಾಷ್ಟ್ರಗಳಿಗೆ ಕರೆ ಕೊಟ್ಟಿದೆ. ಅರಿವು ಮೂಡಿಸುವ ಕರ್ತವ್ಯವನ್ನಾದರೂ ಸರ್ಕಾರಗಳು ಮತ್ತು ಆರೋಗ್ಯ ವಿಶ್ವವಿದ್ಯಾಲಯಗಳು ನಿಭಾಯಿಸಬೇಕು. ಅರಿವಿನ ಬೆಳಕಿನಲ್ಲಿ ಆರೋಗ್ಯವಂತ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ.

ಲೇಖಕಿ: ಸಹಪ್ರಾಧ್ಯಾಪಕಿ, ವಿ.ಎಸ್. ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು

ವಾಚಕರ ವಾಣಿ

ಕನ್ನಡಕ್ಕೆ ಈಗ ಗೂಗಲ್ ಸಂಕಷ್ಟ

ಬೆಂಗಳೂರು ನಗರ ಸಾರಿಗೆ ಬಸ್‌ನ ಎಲೆಕ್ಟ್ರಾನಿಕ್ ಡಿಸ್‌ಪ್ಲೇ ಬೋರ್ಡ್‌ನಲ್ಲಿ, ನಿಲ್ದಾಣದ ಹೆಸರನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಗೂಗಲ್ ಮೂಲಕ ಅನುವಾದ ಮಾಡಿದ್ದರಿಂದ ಉಂಟಾದ ಅವಾಂತರದ ಬಗ್ಗೆ ಮಂಜುನಾಥ ಎಸ್.ಎಸ್. ಗಮನ ಸೆಳೆದಿದ್ದಾರೆ (ವಾ.ವಾ., ಮೇ 14). ಇದು, ಕನ್ನಡಿಗರ ಮತ್ತು ಆಡಳಿತದಲ್ಲಿ ಕನ್ನಡವನ್ನು ಜಾರಿಗೊಳಿಸಲು ಕಟಿಬದ್ಧವಾಗಿರುವ ಕರ್ನಾಟಕ ಸರ್ಕಾರದ ಕಣ್ಣು ತೆರೆಸಬೇಕು. ಏಳು ಕೋಟಿ ಕನ್ನಡಿಗರು ಇರುವ ಕರ್ನಾಟಕದಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಲು ಗೂಗಲ್ ಸಹಾಯ ಯಾಚಿಸುವುದು ಕನ್ನಡಿಗರ ದೌರ್ಭಾಗ್ಯ.

ವರ್ಷಗಳ ಹಿಂದೆ ಒಂದು ಶಾಲೆಯ ಎದುರಿಗೆ ನಗರಸಭೆಯವರು ‘ಇಲ್ಲಿ ಮೂತ್ರ ವಿಸರ್ಜನೆ ಮಾಡಬಾರದು’ ಎಂದು ಫಲಕ ಹಾಕುವ ಬದಲು, ಅದನ್ನು ಗೂಗಲ್ ಮೂಲಕ ಅನುವಾದಿಸಿ ‘ಇಲ್ಲಿ ಮೂತ್ರ ತೇರ್ಗಡೆ ಹೊಂದಿಲ್ಲ’ ಎಂದು ಹಾಕಿ ಜಾಲತಾಣದಲ್ಲಿ ಯದ್ವಾತದ್ವಾ ಛೇಡಿಸಿಕೊಂಡಿದ್ದರು. ಇದು ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿರುವುದನ್ನು ಸೂಚಿಸುತ್ತದೆಯೋ ನಮ್ಮ ಅಧಿಕಾರಿಶಾಹಿಯ ಕನ್ನಡದ ಜ್ಞಾನದ ಮಟ್ಟವನ್ನು ತಿಳಿಸುತ್ತದೆಯೋ ತಿಳಿಯದು. ತಪ್ಪು ಮಾಡುವುದು ಸಹಜ. ಆದರೆ ಇದು ಸಂಬಂಧಪಟ್ಟವರ ಅರಿವಿಗೆ ಬಾರದಿರುವುದು ಮಾತ್ರ ತೀರಾ ಆಶ್ಚರ್ಯಕರ.

ರಮಾನಂದ ಶರ್ಮಾ, ಬೆಂಗಳೂರು

ಜಾತಿ ಜನಗಣತಿ: ಸಾರ್ವಜನಿಕರೇ ಮಾಹಿತಿ ನಮೂದಿಸಲಿ

ರಾಜ್ಯದಲ್ಲಿ ಈಗ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಆರಂಭವಾಗಿದೆ. ಯಥಾಪ್ರಕಾರ ಈ ಜವಾಬ್ದಾರಿಯನ್ನು ಸರ್ಕಾರವು ಶಿಕ್ಷಕರಿಗೇ ವಹಿಸಿದೆ. ಆದರೆ ಈ ಕಾರ್ಯನಿರ್ವಹಣೆಗೆ ಮನೆ ಮನೆಗೆ ಅಲೆದಾಡುತ್ತಿರುವ ಶಿಕ್ಷಕರು ಸಾರ್ವಜನಿಕರಿಂದ ನಿಂದನೆಗೆ ಗುರಿಯಾಗುತ್ತಿದ್ದಾರೆ. ಸರ್ಕಾರ ವಹಿಸಿದ ಕೆಲಸವನ್ನು ಅವರು ಮಾಡುತ್ತಿದ್ದಾರೆ ಅಷ್ಟೇ. ಇದು ಸಾರ್ವಜನಿಕರಿಗೆ ತಿಳಿದಿಲ್ಲದ ವಿಚಾರವೇನಲ್ಲ. ಅವರ ರಾಜಕೀಯ ಒಲವು ನಿಲುವುಗಳನ್ನು ಅಸಹಾಯಕ ಶಿಕ್ಷಕರ ಮೇಲೆ ತೋರಿಸುವುದು ಸರಿಯಲ್ಲ.

ಜಾತಿ ಜನಗಣತಿ ಕಾರ್ಯ ಮಾಡುವವರು ನೇರವಾಗಿ ಆನ್‌ಲೈನ್‌ನಲ್ಲಿಯೇ ಮಾಹಿತಿಯನ್ನು ನಮೂದಿಸುವಂತೆ ಆಗಬೇಕು. ಕಾಗದದ ಮೇಲೆ ಬರೆದುಕೊಂಡು ಮತ್ತೆ ಅದನ್ನು ಆನ್‌ಲೈನ್‌ನಲ್ಲಿ ನಮೂದಿಸುವಾಗ ಮಾಹಿತಿಯನ್ನು ನಿಖರವಾಗಿ ದಾಖಲಿಸುತ್ತಾರೆ ಎಂಬುದನ್ನು ಖಚಿತವಾಗಿ ಹೇಳಲಾಗದು. ಈ ಜವಾಬ್ದಾರಿಯನ್ನು ನಾಗರಿಕರಿಗೆ ವಹಿಸುವುದು ಇನ್ನೂ ಒಳ್ಳೆಯದು. ಜಾತಿ, ಉಪಜಾತಿ, ಶೈಕ್ಷಣಿಕ ಮಾಹಿತಿಯ ಜೊತೆಗೆ ಬೇರೆ ಮಾಹಿತಿಯ ಅಗತ್ಯ ಇದ್ದರೆ ಅದನ್ನೂ ಸಾರ್ವಜನಿಕರೇ ಆಧಾರ್ ಕೇಂದ್ರಗಳಿಗೆ ತೆರಳಿ ನಮೂದಿಸುವಂತೆ ಮಾಡಿದರೆ ಸರ್ಕಾರಕ್ಕೆ ಹಣದ ಉಳಿತಾಯವಾಗುತ್ತದೆ. ಶಿಕ್ಷಕರ ಅಲೆದಾಟ, ಸಾರ್ವಜನಿಕರಿಂದ ಅವರು ನಿಂದನೆಗೆ ಒಳಗಾಗುವುದು ತಪ್ಪುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ಸಾರ್ವಜನಿಕರೇ ಖುದ್ದಾಗಿ ತೆರಳಿ ಮಾಹಿತಿ ದಾಖಲಿಸುವುದರಿಂದ ಶೇಕಡ 100ರಷ್ಟು ಖಚಿತತೆ ಸಿಗುತ್ತದೆ.

ಆಶ್ರಯ್ ಬಿ.ಎಸ್., ಬೆಂಗಳೂರು

ಆನೆಪಥ ಪುನರುಜ್ಜೀವನಕ್ಕೆ ಸಿಗಲಿ ಆದ್ಯತೆ

ಭದ್ರಾ ಅಭಯಾರಣ್ಯ ವ್ಯಾಪ್ತಿಯ ಎರಡು ಸಾವಿರ ಹೆಕ್ಟೇರ್ ಕಾಡಿನಲ್ಲಿ ‘ಆನೆ ವಿಹಾರಧಾಮ’ ಸ್ಥಾಪಿಸಲು ಅರಣ್ಯ ಇಲಾಖೆ ಮುಂದಾಗಿರುವುದು ವರದಿಯಾಗಿದೆ. ಉತ್ತರ ಕನ್ನಡದ ದಾಂಡೇಲಿ–ಕಿರವತ್ತಿ–ಹಾನಗಲ್ ಆನೆ ಕಾರಿಡಾರ್ ಪ್ರದೇಶದ ಸಣ್ಣರೈತನಾಗಿ ಹಾಗೂ ಇಲ್ಲಿನ ಮಾನವ-ಆನೆ ಸಂಘರ್ಷವನ್ನು ಕಳೆದೊಂದು ದಶಕದಿಂದ ಅಭ್ಯಸಿಸುತ್ತಿರುವವನಾಗಿ, ನನ್ನ ಅನುಭವ ಹಾಗೂ ಅಭಿಪ್ರಾಯದಲ್ಲಿ ಈ ಯೋಜನೆ ಸೂಕ್ತವೆಂದು ತೋರುವುದಿಲ್ಲ. ಆನೆಗೆ ವಿಶಾಲ ಕಾಡಿನ ಆವಾಸಸ್ಥಾನ ಬೇಕು. ಅಲ್ಲಿ ನಿಯಮಿತವಾಗಿ ಸಂಚರಿಸುವುದು ಅದರ ಜೀವನಚಕ್ರದ ಭಾಗ. ಅಂಥ ಆನೆಪಥ ಪ್ರದೇಶಗಳ ನೈಸರ್ಗಿಕ ಅರಣ್ಯ ಹಾಗೂ ಜಲಮೂಲವನ್ನು ಸಂರಕ್ಷಿಸಿ, ಆನೆಗೆ ಆಹಾರ ಒದಗಿಸುವ ಬಿದಿರು, ಫಲವೃಕ್ಷಗಳನ್ನು ಬೆಳೆಸಿದರೆ ಸಂಘರ್ಷವನ್ನು ತಗ್ಗಿಸಲು ಸಾಧ್ಯ. ಜೊತೆಗೆ, ಆ ಪ್ರದೇಶದ ಕೃಷಿಕರಿಗೆ ಬಲಿಷ್ಠ ತಡೆಬೇಲಿ ರಚಿಸಲು ಸಹಾಯ, ಸೂಕ್ತಬೆಳೆ ಬೆಳೆಸಲು ಪ್ರೋತ್ಸಾಹ ಹಾಗೂ ಬೆಳೆನಾಶವಾದಲ್ಲಿ ಸೂಕ್ತ ಪರಿಹಾರ ನೀಡಿದರೆ, ರೈತರೂ ಆನೆ ಸಂರಕ್ಷಣೆ ಕಾರ್ಯದಲ್ಲಿ ಕೈಜೋಡಿಸುತ್ತಾರೆ. ಸಹಾಯಧನ, ಪರಿಹಾರ ನೀಡುವಲ್ಲಿ ಅನಾದರ ಹಾಗೂ ಅಸಡ್ಡೆ ತೋರದೆ ರೈತಸ್ನೇಹಿಯಾದರೆ, ಸರ್ಕಾರದೊಂದಿಗೆ ಕೈಜೋಡಿಸಲು ಸದಾ ಸಿದ್ಧವೆಂಬುದನ್ನು ಉತ್ತರ ಕನ್ನಡದ ರೈತರು–ವನವಾಸಿಗಳು ತೋರಿಸಿದ್ದಾರೆ.

ಆದರೆ, ಇಂಥ ನಿಸರ್ಗಸ್ನೇಹಿ ಸುಸ್ಥಿರ ನೀತಿ ಅನುಸರಿಸುವ ಬದಲು, ₹ 53 ಕೋಟಿ ವೆಚ್ಚದಲ್ಲಿ ‘ಕೃತಕ ಆನೆಧಾಮ’ ರಚಿಸಲು ಅರಣ್ಯ ಇಲಾಖೆ ಮುಂದಾಗಿರುವುದು ಅವೈಜ್ಞಾನಿಕ. ನೂರಾರು ಆನೆಗಳಿಗೆ ಅದು ಸಣ್ಣ ಬಂದಿಖಾನೆಯಾಗಿ, ಹಸಿವು, ಕಾದಾಟ ಹಾಗೂ ರೋಗದಿಂದ ಅವು ಸಾಯುವುದು ನಿಶ್ಚಿತ. ಇತ್ತ, ರೈತರ ಹೊಲದಲ್ಲಿ ಹಂದಿ, ಕಾಡೆಮ್ಮೆ, ಮಂಗದಂತಹ ವನ್ಯಜೀವಿ ಸಂಘರ್ಷವೇನೂ ತಗ್ಗುವುದಿಲ್ಲ! ಹೀಗಾಗಿ, ಅರಣ್ಯ ಸಚಿವರು ಈ ಯೋಜನೆಯನ್ನು ತಕ್ಷಣ ತಡೆಹಿಡಿದು, ಪುನಃ ಸಮಾಲೋಚನೆ ಮಾಡಿ, ಮಲೆನಾಡಿನ ಎಲ್ಲ ಆನೆಪಥಗಳನ್ನು ಜನಸಹಭಾಗಿತ್ವದಲ್ಲಿ ಪುನರುಜ್ಜೀವನಗೊಳಿಸುವ ನಿಸರ್ಗಸ್ನೇಹಿ ಯೋಜನೆ ರೂಪಿಸಬೇಕು.

ಕೇಶವ ಎಚ್. ಕೊರ್ಸೆ, ಶಿರಸಿ

ವಕ್ಫ್ ಮಂಡಳಿಗೆ ಬೇಕು ಆನ್‌ಲೈನ್ ವ್ಯವಸ್ಥೆ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಸಂಪೂರ್ಣವಾಗಿ ಆನ್‌ಲೈನ್ ವ್ಯವಸ್ಥೆಗೆ ಒಳಪಡಬೇಕು ಎಂಬುದು ಹಲವು ವರ್ಷಗಳಿಂದ ಮುಸ್ಲಿಂ ಸಮುದಾಯದ ಬೇಡಿಕೆಯಾಗಿದೆ. ಈ ಹಿಂದೆ ಸ್ವಲ್ಪಮಟ್ಟಿಗೆ ಈ ವ್ಯವಸ್ಥೆ ಇತ್ತಾದರೂ ನಂತರ ಅದು ಸ್ಥಗಿತಗೊಂಡಿದೆ. ಮಂಡಳಿಯ ಈಗಿನ ಜಾಲತಾಣವು ಬರೀ ಅಧ್ಯಕ್ಷರು, ಸದಸ್ಯರು, ಕಾರ್ಯನಿರತ ಅಧಿಕಾರಿಗಳು, ಸಂಪರ್ಕ ಸಂಖ್ಯೆಗಳಿಗೆ ಮೀಸಲಾಗಿದೆಯೇ ವಿನಾ ಮಂಡಳಿಯ ಯಾವುದೇ ಸುತ್ತೋಲೆ, ಆದೇಶ, ನೂತನ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ನೀಡುವುದಿಲ್ಲ ಹಾಗೂ ಸಾರ್ವಜನಿಕ ಕುಂದುಕೊರತೆಯನ್ನು ಪರಿಹರಿಸುವಲ್ಲಿ ಪ್ರಯೋಜನಕ್ಕೆ ಬರುವುದಿಲ್ಲ. ಮಂಡಳಿಗೆ ಸಂಬಂಧಿಸಿದ ಯಾವುದೇ ಮಾಹಿತಿ ಪಡೆಯಬೇಕಾದರೂ ಬೆಂಗಳೂರಿಗೇ ಹೋಗಬೇಕಾಗುತ್ತದೆ. ಅನುದಾನ ಯಾರಿಗೆಲ್ಲ ಬಿಡುಗಡೆಯಾಗಿದೆ ಎಂಬ ಮಾಹಿತಿ ಪಡೆಯಲು ಸ್ಥಳೀಯ ಸಮಿತಿಗಳು ಸಹ ಬೆಂಗಳೂರಿನತ್ತ ಮುಖ ಮಾಡಬೇಕು. ಈ ಪರಿಸ್ಥಿತಿ ಬದಲಾಗಬೇಕೆಂದರೆ, ಮಂಡಳಿಯನ್ನು ಸಂಪೂರ್ಣವಾಗಿ ಆನ್‌ಲೈನ್ ವ್ಯವಸ್ಥೆಗೆ ಒಳಪಡಿಸಬೇಕು.

ಅಬ್ದುಲ ರಝಾಕ ಡಿ. ಟಪಾಲ, ಕೆರೂರು, ಬಾದಾಮಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೆಂಗಳೂರಿನಲ್ಲಿ ಹೆಚ್ಚಿದ ದುಸ್ಸಾಹಸ; ಹಳ್ಳಿ–ಪಟ್ಟಣಕ್ಕೂ ಹಬ್ಬಿದ ಪಿಡುಗು

ವ್ಹೀಲಿ ತಡೆಗಟ್ಟಲು ಕಠಿಣ ಕ್ರಮಕ್ಕೆ ಮುಂದಾಗಬೇಕು ಹಾಗೂ ಅಗತ್ಯ ಕಾನೂನು ತಿದ್ದುಪಡಿ ಮಾಡಬೇಕು ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ. ದ್ವಿಚಕ್ರ ವಾಹನದ ಮುಂದಿನ ಚಕ್ರವನ್ನು ಎತ್ತಿ ಓಡಿಸುವ (ವ್ಹೀಲಿ) ಪ್ರವೃತ್ತಿ ಈಚಿನ ವರ್ಷಗಳಲ್ಲಿ ಯುವಕರಲ್ಲಿ ಹೆಚ್ಚಾಗುತ್ತಿದೆ. ಅದು ಮೋಟಾರ್ ಬೈಕ್/ಸ್ಕೂಟರ್ ಚಾಲನೆ ಮಾಡುವವನೂ ಸೇರಿದಂತೆ ರಸ್ತೆಯ ಮೇಲೆ ಸಂಚರಿಸುವ ಇತರೆ ವಾಹನಗಳು ಹಾಗೂ ಪಾದಚಾರಿಗಳಿಗೆ ಅಪಾಯಕಾರಿ. ಕೆಲವು ಯುವಕರು ಥ್ರಿಲ್‌ಗಾಗಿ, ಉನ್ಮಾದಕ್ಕಾಗಿ, ರೀಲ್ಸ್‌ಗಾಗಿ ವ್ಹೀಲಿ, ರೇಸ್ ಮುಂತಾಗಿ ದುಸ್ಸಾಹಸ ಮಾಡಲು ಹೋಗಿ ತಮ್ಮ ಜೀವ ಕಳೆದುಕೊಳ್ಳುತ್ತಿದ್ದಾರೆ; ಇತರರ ಜೀವವನ್ನೂ ಅಪಾಯಕ್ಕೆ ಒಡ್ಡುತ್ತಿದ್ದಾರೆ

ವ್ಹೀಲಿ ಬೇಕಿದೆ ಕಠಿಣ ಶಿಕ್ಷೆ

ಏನೇನು ಕ್ರಮ?

- ಪ್ರಕರಣ ದಾಖಲು
- ವಾಹನಗಳ ಜಪ್ತಿ
- ಆರೋಪಿಗಳ ಬಂಧನ
- ವ್ಹೀಲಿ ಮಾಡಿದವರು 18ಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೆ, ಪೋಷಕರ ವಿರುದ್ಧ ಕ್ರಮ
- ಚಾಲನಾ ಪರವಾನಗಿ ಅಮಾನತು, ರದ್ದು
- ವಾಹನಗಳ ನೋಂದಣಿ ರದ್ದು

ಪ್ರಜಾವಾಣಿ ವಾರ್ತೆ

ಪ್ರಕರಣ 1: ಸ್ಥಳ:- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಬಳಿಯ ವಿಜಯಪುರ. ದಿನಾಂಕ: 2024ರ ಡಿಸೆಂಬರ್ 27

ಜಿಟಿ ಜಿಟಿ ಮಳೆಯಲ್ಲಿ ಬೈಕ್ ವ್ಹೀಲಿ ಮಾಡುತ್ತಾ ಬೈಪಾಸ್ ರಸ್ತೆಯಲ್ಲಿ ಸಾಗುತ್ತಿದ್ದ ಇಬ್ಬರು ಯುವಕರು ಆಯತಪ್ಪಿ ಕ್ಯಾಂಟರ್‌ಗೆ ಡಿಕ್ಕಿ ಹೊಡೆದಿದ್ದರು. ಕ್ಯಾಂಟರ್ ಚಾಲಕ ಅಪಘಾತ ತಪ್ಪಿಸಲು ಪ್ರಯತ್ನಿಸಿದ್ದರೂ ಅದು ಸಾಧ್ಯವಾಗಿರಲಿಲ್ಲ. ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದರು.

ಪ್ರಕರಣ 2: ಸ್ಥಳ:- ಬೆಂಗಳೂರು ಹೊರವಲಯದ ಹೊಸಕೋಟೆ. ದಿನಾಂಕ: 2023ರ ಆಗಸ್ಟ್ 15

ಸ್ವಾತಂತ್ರ್ಯ ದಿನಾಚರಣೆಯ ದಿನ ರಜೆ ಇದ್ದುದರಿಂದ ಬೆಂಗಳೂರಿನಿಂದ ಕೋಲಾರಕ್ಕೆ 20ಕ್ಕೂ ಹೆಚ್ಚು ಯುವಕ, ಯುವತಿಯರು ಹತ್ತಾರು ದ್ವಿಚಕ್ರ ವಾಹನಗಳಲ್ಲಿ ವ್ಹೀಲಿ ಮಾಡುತ್ತಾ ಸಾಗುತ್ತಿದ್ದರು. ಈ ವೇಳೆ ಆಕಸ್ಮಿಕವಾಗಿ ಎರಡು ಬೈಕ್‌ಗಳು ಒಂದಕ್ಕೊಂದು ಡಿಕ್ಕಿ ಹೊಡೆದು, ಕೆಳಕ್ಕೆ ಬಿದ್ದ ಯುವತಿಯೊಬ್ಬರು ಅಸುನೀಗಿದ್ದರು.

ಇಂಥ ಪ್ರಕರಣಗಳು ದೇಶದ ಬಹುತೇಕ ಎಲ್ಲ ರಾಜ್ಯಗಳಲ್ಲಿ, ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ನಡೆಯುತ್ತಲೇ ಇವೆ. ಸೂಪರ್ ಬೈಕ್‌ಗಳು, ದುಬಾರಿಯಾದ ಬೈಕ್‌ಗಳು, ಸ್ಕೂಟರ್‌ಗಳನ್ನು ಖರೀದಿಸಿ ಸಾರ್ವಜನಿಕ ರಸ್ತೆಗಳಲ್ಲಿ, ಟ್ರಾಫಿಕ್ ನಡುವೆಯೇ ವಿಪರೀತ ವೇಗವಾಗಿ ಚಲಾಯಿಸುವವರ, ವ್ಹೀಲಿ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ನಗರದ ವರ್ತುಲ ರಸ್ತೆಗಳಲ್ಲಿ, ಹೊರವಲಯದ ರಸ್ತೆಗಳಲ್ಲಿ, ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಇವು ಹೆಚ್ಚು. ನಗರಗಳ ಹೃದಯಭಾಗದ ರಸ್ತೆಗಳಲ್ಲೂ ವ್ಹೀಲಿ ಮಾಡುವ ಪುಂಡರ ಸಂಖ್ಯೆಯೇನೂ ಕಡಿಮೆ ಇಲ್ಲ. ಇಕ್ಕಟ್ಟು ಗಲ್ಲಿಗಳ ಯುವಕರಿಂದ ಪ್ರತಿಷ್ಠಿತ ಕಾಲೇಜುಗಳ ವಿದ್ಯಾರ್ಥಿಗಳವರೆಗೆ, ಮೆಕ್ಯಾನಿಕ್‌ನಿಂದ ಹಿಡಿದು ಐ.ಟಿ ಉದ್ಯೋಗಿವರೆಗೆ ವ್ಹೀಲಿ, ರೇಸ್ ಹುಚ್ಚು ಆವರಿಸಿದೆ. ಕೆಲವರು ಸಂಘಟಿತವಾಗಿ, ಬೆಟ್ಟಿಂಗ್ ಕಟ್ಟಿಕೊಂಡು ಜನನಿಬಿಡ ರಸ್ತೆಗಳಲ್ಲಿ ವ್ಹೀಲಿ, ರೇಸ್ ಮಾಡಿರುವುದೂ ಇದೆ. ಇತ್ತೀಚೆಗೆ ಕೈಯಲ್ಲಿ ಮಾರಕಾಸ್ತ್ರ ಹಿಡಿದು ಬೈಕ್‌ಗಳ ಮೇಲೆ ಬೆಂಗಳೂರಿನ ರಸ್ತೆಯಲ್ಲಿ ರೇಸ್ ಮಾಡಿದ ಯುವಕರ ತಂಡವೊಂದು ಸಾರ್ವಜನಿಕರಲ್ಲಿ ಆತಂಕ ಮೂಡಿಸಿತ್ತು. ಪೊಲೀಸರು ಅವರನ್ನು ಬಂಧಿಸಿ ರೌಡಿ ಪಟ್ಟಿಗೆ ಸೇರಿಸಿದ್ದರು. ಡ್ರಗ್ಸ್ ಸೇವಿಸಿ ವ್ಹೀಲಿ ಮಾಡುವವರ ಸಂಖ್ಯೆಯೂ ಗಮನಾರ್ಹವಾಗಿದೆ ಎಂದು ಹೇಳುತ್ತಾರೆ ಪೊಲೀಸರು.

ವ್ಹೀಲಿ, ರೇಸಿಂಗ್‌ಗೆ ತಕ್ಕಂತೆ ಬೈಕ್, ಸ್ಕೂಟರ್‌ಗಳನ್ನು ಬದಲಾಯಿಸಿಕೊಡುವ ಮೆಕ್ಯಾನಿಕ್‌ಗಳೂ ಹುಟ್ಟಿಕೊಂಡಿದ್ದಾರೆ. ಸೈಲೆನ್ಸರ್‌ಗಳನ್ನು ತೆಗೆದುಹಾಕಿ ಅಥವಾ ಮಾರ್ಪಡಿಸಿ, ರಸ್ತೆಯಲ್ಲಿ ಓಡಾಡುವವರನ್ನು ದಿಗಿಲುಗೊಳಿಸುವಂತೆ ಭಾರಿ ಸದ್ದು ಮಾಡುತ್ತಾ ಬೈಕ್, ಸ್ಕೂಟರ್, ಕಾರು ಚಲಾಯಿಸುವ ಉನ್ಮಾದಿಗಳ ಸಂಖ್ಯೆ ಹೆಚ್ಚುತ್ತಿದೆ. ಇದರಿಂದ ಅಪಘಾತಗಳು ನಡೆದು ಸಾವುಗಳು ಸಂಭವಿಸುತ್ತಿರುವುದಷ್ಟೇ ಅಲ್ಲ, ಒಂದು ರೀತಿಯ ಅರಾಜಕತೆ ಉಂಟಾಗುತ್ತಿದ್ದು, ಸಾರ್ವಜನಿಕರಲ್ಲಿ ಭಯ ಮೂಡಿಸಲಾಗುತ್ತಿದೆ.

ಮೊದಲು ಬೆಂಗಳೂರಿನಂಥ ನಗರಗಳಿಗೆ ಸೀಮಿತವಾಗಿದ್ದ ಈ ಅಪಾಯಕಾರಿ ಪ್ರವೃತ್ತಿ ಈಗ ಹಳ್ಳಿ–ಪಟ್ಟಣ ಎನ್ನುವ ಭೇದವಿಲ್ಲದೇ ಸರ್ವವ್ಯಾಪಿಯಾಗಿದೆ. ನಿದರ್ಶನಕ್ಕೆ ಕೋಲಾರ ಜಿಲ್ಲೆಯಲ್ಲಿ 2023ರಲ್ಲಿ 2 ಪ್ರಕರಣಗಳು ವರದಿಯಾಗಿದ್ದರೆ, 2024ರಲ್ಲಿ 27 ಪ್ರಕರಣಗಳು ದಾಖಲಾಗಿವೆ. ಆದರೆ, ಬೆಂಗಳೂರಿನಲ್ಲಿ ಈ ಸಂಖ್ಯೆ ಹೆಚ್ಚು. ಹೈದರಾಬಾದ್, ಚೆನ್ನೈ ನಗರಗಳಲ್ಲೂ ವ್ಹೀಲಿ ಪುಂಡಾಟಿಕೆ ಮಿತಿ ಮೀರಿದ್ದು, ಅಲ್ಲಿನ ಪೊಲೀಸರಿಗೆ ತಲೆನೋವಾಗಿದೆ. ಪೊಲೀಸರ ಗಮನಕ್ಕೆ ಬಂದು ವರದಿ ಆಗಿದ್ದಕ್ಕಿಂತಲೂ, ವರದಿಯಾಗದೇ ಉಳಿದ ಪ್ರಕರಣಗಳೇ ಹೆಚ್ಚು ಎನ್ನುವ ಮಾತುಗಳೂ ಇವೆ.

ದೇಶದ ಅನೇಕ ಖ್ಯಾತನಾಮರು, ಅವರ ಸಂಬಂಧಿಕರು ಹೀಗೆ ರೇಸಿಂಗ್, ವ್ಹೀಲಿ ಮಾಡಲು ಹೋಗಿ ಅಪಘಾತಗಳಿಗೆ ಕಾರಣವಾಗಿದ್ದಿದೆ; ಸಾವು ತಂದುಕೊಂಡಿದ್ದೂ ಇದೆ. ಕ್ರಿಕೆಟಿಗ ಮೊಹಮ್ಮದ್ ಅಜರುದ್ದೀನ್ ಮಗ ಅಯಾಜುದ್ದೀನ್ ಮತ್ತು ಅವರ ಸಂಬಂಧಿ ಅಜ್ಮಲ್, 2011ರಲ್ಲಿ ಹೈದರಾಬಾದ್‌ನ ರಿಂಗ್ ರಸ್ತೆಯಲ್ಲಿ ದುಬಾರಿ ಬೈಕ್‌ನಲ್ಲಿ 200 ಕಿ.ಮೀ. ವೇಗದಲ್ಲಿ ಬೈಕ್ ಚಲಾಯಿಸುವ ಥ್ರಿಲ್ ಅನುಭವಿಸಲು ಹೋಗಿ ಅಪಘಾತಕ್ಕೀಡಾಗಿ ಮೃತಪಟ್ಟಿದ್ದರು.

ವ್ಹೀಲಿ ಮಾಡುವ ಪುಂಡರ ವಿಡಿಯೊಗಳು ಆಗೀಗ ಸಾಮಾಜಿಕ ಜಾಲತಾಣಗಳಲ್ಲಿ ಕಾಣಿಸಿಕೊಳ್ಳುತ್ತವೆ. ಕೆಲವರು ತಾವೇ ಚಿತ್ರೀಕರಿಸಿ, ಅವನ್ನು ಅಪ್‌ಲೋಡ್ ಮಾಡುವುದೂ ಇದೆ. ಆಗ ಅವುಗಳ ಬಗ್ಗೆ ಪೊಲೀಸರು ಗಮನಹರಿಸಿ ಕ್ರಮ ಕೈಗೊಳ್ಳುತ್ತಿದ್ದಾರೆ. ಆದರೆ, ಪೊಲೀಸರು ಸ್ವಯಂಪ್ರೇರಣೆಯಿಂದ ಇಂಥವರ ವಿರುದ್ಧ ಪ್ರಕರಣ ದಾಖಲಿಸಿ, ಕ್ರಮ ಜರುಗಿಸಿದ ಪ್ರಕರಣಗಳು ಕಡಿಮೆ ಎನ್ನುವ ಅಸಮಾಧಾನ ಜನರಲ್ಲಿದೆ. ಇಂಥ ಎಷ್ಟು ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ ಎನ್ನುವ ಅಂಕಿಅಂಶ ಲಭ್ಯವಿಲ್ಲವಾದರೂ ಅಪರಾಧಿಗಳಿಗೆ ಶಿಕ್ಷೆ ಆಗುವ ಪ್ರಮಾಣ ಕಡಿಮೆ ಇದೆ. ಅನೇಕ ಬಾರಿ ತಪ್ಪಿತಸ್ಥರು ಸಣ್ಣ ದಂಡ ತೆತ್ತು ಪಾರಾಗುವುದೂ ಇದೆ. ಇಂಥವರನ್ನು ಜನರೇ ಗದರಿಸಿ, ಎಚ್ಚರಿಕೆ ನೀಡಿ ಕಳುಹಿಸಿರುವ ಅನೇಕ ಪ್ರಕರಣಗಳಿವೆ. ಒಮ್ಮೆ, ಬೆಂಗಳೂರಿನ ನೆಲಮಂಗಲ ರಸ್ತೆಯಲ್ಲಿ ವ್ಹೀಲಿ ಮಾಡುತ್ತಾ ರಸ್ತೆಯಲ್ಲಿ ಓಡಾಡುವವರಿಗೆ ತೊಂದರೆ ಮಾಡುತ್ತಿದ್ದವನ ಬೈಕನ್ನು ಜನರೇ ಕಸಿದು ಫ್ಲೈಓವರ್ ಮೇಲಿನಿಂದ ಕೆಳಕ್ಕೆ ಎಸೆದಿದ್ದ ಘಟನೆಯೂ ನಡೆದಿತ್ತು.

ಸಾರ್ವಜನಿಕ ರಸ್ತೆಗಳನ್ನು ತಮ್ಮ ಸ್ವಂತದ ಆಸ್ತಿ, ಆಟದ ಮೈದಾನ ಎನ್ನುವಂತೆ ಭಾವಿಸಿ ವ್ಹೀಲಿ, ರೇಸ್ ಮಾಡುತ್ತಾ ಪಾದಚಾರಿಗಳಲ್ಲಿ ಭೀತಿ ಹುಟ್ಟಿಸಲಾಗುತ್ತಿದೆ. ಹೀಗೆ ಕಾನೂನು ಸುವ್ಯವಸ್ಥೆಗೆ ಸಂಚಕಾರ ತರುತ್ತಿರುವ ಪುಂಡರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ದಿಕ್ಕಿನಲ್ಲಿ ಸರ್ಕಾರ ಗಂಭೀರ, ದೃಢ ಹೆಜ್ಜೆ ಇಡಬೇಕು ಎನ್ನುವ ಒತ್ತಾಯ ಕೇಳಿಬಂದಿದೆ. ಹೈಕೋರ್ಟ್ ಸೂಚನೆಯು ಜನರ ಧ್ವನಿಗೆ ಮತ್ತಷ್ಟು ಬಲ ನೀಡಿದೆ.

ಆಧಾರ: ಮೋಟಾರು ವಾಹನ ಕಾಯ್ದೆ–1988, ಮಾಧ್ಯಮ ವರದಿಗಳು

ಪೂರಕ ಮಾಹಿತಿ: ಪ್ರಜಾವಾಣಿಯ ಬ್ಯೂರೊಗಳು

ಬೆಂಗಳೂರಿನಲ್ಲಿ ವ್ಹೀಲಿ ವಿರುದ್ಧ ಕಾರ್ಯಾಚರಣೆ



ಪೋಷಕರ ವಿರುದ್ಧ ಕ್ರಮ

ವ್ಹೀಲಿ, ರೇಸಿಂಗ್, ಅತಿ ವೇಗದ ಚಾಲನೆಯಲ್ಲಿ ತೊಡಗುವವರಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕರೇ ಹೆಚ್ಚಿದ್ದಾರೆ. ಪೊಲೀಸರು ಇಂತಹ ಮಕ್ಕಳ ಪೋಷಕರ ವಿರುದ್ಧ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ.

ಉದಾಹರಣೆಗೆ, ಬಾಲಕರಿಗೆ ದ್ವಿಚಕ್ರ ವಾಹನ ನೀಡಿದ್ದ ಆರೋಪದ ಅಡಿ 2024ರಲ್ಲಿ 79 ಪೋಷಕರ ವಿರುದ್ಧ ಬೆಂಗಳೂರು ಸಂಚಾರ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು. 246 ಚಾಲನಾ ಪರವಾನಗಿಗಳನ್ನು (ಡಿ.ಎಲ್) ಸಾರಿಗೆ ಪ್ರಾಧಿಕಾರವು ರದ್ದು ಪಡಿಸಿತ್ತು.

ಈ ವರ್ಷದ ಮೇ 13ರ ವರೆಗೆ ಬಾಲಕರಿಗೆ ದ್ವಿಚಕ್ರ ವಾಹನ ನೀಡಿದ್ದ ಆರೋಪದ ಅಡಿ 62 ಪೋಷಕರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು, 65 ಡಿ.ಎಲ್‌ಗಳನ್ನು ಅಮಾನತು ಪಡಿಸಿದ್ದಾರೆ. 357 ವಾಹನಗಳ ನೋಂದಣಿ ರದ್ದು ಪಡಿಸುವಂತೆ ಕೋರಿ ಸಾರಿಗೆ ಪ್ರಾಧಿಕಾರಕ್ಕೆ ಪತ್ರವನ್ನೂ ಬರೆದಿದ್ದಾರೆ.

‘ಕಾರ್ಯಾಚರಣೆ ತೀವ್ರ’

ವ್ಹೀಲಿ ನಡೆಸುವವರ ವಿರುದ್ಧ ಬೆಂಗಳೂರಿನಲ್ಲಿ ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ. ದ್ವಿಚಕ್ರ ವಾಹನಗಳನ್ನು ಮಾರ್ಪಾಡು ಮಾಡಿಕೊಂಡವರು ವ್ಹೀಲಿ ನಡೆಸುತ್ತಿರುವುದು ಕಂಡುಬಂದಿದೆ. ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 281 ಹಾಗೂ ಮೋಟಾರು ವಾಹನ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ. ವ್ಹೀಲಿ ನಡೆಸುವವರನ್ನು ವಶಕ್ಕೆ ಪಡೆದು ಆಯಾ ವಿಭಾಗದ ಸಂಚಾರ ಡಿಸಿಪಿಗಳ ಎದುರು ಹಾಜರುಪಡಿಸಿ ₹1 ಲಕ್ಷ ಮೌಲ್ಯದ ಬಾಂಡ್ ಬರೆಸಿಕೊಳ್ಳಲಾಗುತ್ತಿದೆ.

ಎರಡನೇ ಬಾರಿ ವ್ಹೀಲಿ ನಡೆಸಿದ್ದು ಕಂಡುಬಂದರೆ ಆ ಬಾಂಡ್ ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಜತೆಗೆ ವಾಹನ ಚಾಲನಾ ಪರವಾನಗಿ ಅಮಾನತು ಹಾಗೂ ವಾಹನಗಳ ನೋಂದಣಿ ರದ್ದು ಮಾಡುವ ಕ್ರಮವನ್ನೂ ತೆಗೆದುಕೊಳ್ಳಲಾಗುತ್ತಿದೆ.

ಎಂ.ಎನ್.ಅನುಚೇತ್, ಜಂಟಿ ಪೊಲೀಸ್ ಕಮಿಷನರ್, ಸಂಚಾರ ವಿಭಾಗ, ಬೆಂಗಳೂರು

ಕಾನೂನು ಏನು ಹೇಳುತ್ತದೆ?

- ಮೋಟಾರು ವಾಹನ ಕಾಯ್ದೆ-1988ರ ಸೆಕ್ಷನ್, 189 ರೇಸಿಂಗ್ ಮತ್ತು ಪೈಪೋಟಿಯಲ್ಲಿ ವೇಗದ ಚಾಲನೆಗೆ ಸಂಬಂಧಿಸಿದ್ದಾಗಿದೆ. ಈ ಸೆಕ್ಷನ್ ಪ್ರಕಾರ, ರಾಜ್ಯ ಸರ್ಕಾರದ ಅನುಮತಿ ಪಡೆಯದೇ ಸಾರ್ವಜನಿಕ ಸ್ಥಳಗಳಲ್ಲಿ ವಾಹನಗಳ ರೇಸ್‌ನಲ್ಲಿ ಭಾಗವಹಿಸುವುದು ಅಥವಾ ಪೈಪೋಟಿಯಲ್ಲಿ ವೇಗದ ಚಾಲನೆ ಮಾಡುವುದು ಶಿಕ್ಷಾರ್ಹ ಅಪರಾಧ. ಈ ತಪ್ಪಿಗೆ ಗರಿಷ್ಠ ಒಂದು ತಿಂಗಳವರೆಗೆ ಶಿಕ್ಷೆ ಅಥವಾ ₹500ರವರೆಗೆ ದಂಡ ಅಥವಾ ಶಿಕ್ಷೆ ಹಾಗೂ ದಂಡ ಎರಡನ್ನೂ ವಿಧಿಸುವುದಕ್ಕೆ ಅವಕಾಶ ಇದೆ
- ಇದೇ ಕಾಯ್ದೆಯ 184ನೇ ಸೆಕ್ಷನ್ ಪ್ರಕಾರ, ಸಾರ್ವಜನಿಕರಿಗೆ ಅಪಾಯ ಆಗುವ ರೀತಿಯಲ್ಲಿ ಮತ್ತು ವೇಗದಲ್ಲಿ ವಾಹನಗಳನ್ನು ಚಾಲನೆ ಮಾಡುವುದು ಶಿಕ್ಷಾರ್ಹ ಅಪರಾಧ. ಯಾವುದೇ ವ್ಯಕ್ತಿ ಮೊದಲ ಬಾರಿಗೆ ಈ ತಪ್ಪು ಎಸಗಿದರೆ ಗರಿಷ್ಠ ಆರು ತಿಂಗಳವರೆಗೆ ಜೈಲು ಶಿಕ್ಷೆ ಅಥವಾ ₹1000 ವರೆಗೆ ದಂಡ ವಿಧಿಸಬಹುದು. ಮತ್ತು ಎರಡನೇ ಬಾರಿ ಅಥವಾ ನಂತರವೂ ಈ ತಪ್ಪು ಎಸಗಿದರೆ ಎರಡು ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ₹2000ವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು.
- ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) 281ನೇ ಸೆಕ್ಷನ್ ಅಪಾಯಕಾರಿ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆಯ ಕುರಿತಾಗಿದ್ದು, ಪೊಲೀಸರು ಈ ಸೆಕ್ಷನ್ ಅಡಿಯಲ್ಲೂ ವ್ಹೀಲಿ ಪ್ರಕರಣ ದಾಖಲಿಸುತ್ತಾರೆ

ರಾಜ್ಯದೆಲ್ಲೆಡೆ ಹಾವಳಿ

ಪೊಲೀಸ್ ಇಲಾಖೆಯ ಅಂಕಿ ಅಂಶಗಳನ್ನು ಗಮನಿಸಿದಾಗ ಬೆಂಗಳೂರಿನಲ್ಲೇ ವ್ಹೀಲಿ ಪ್ರಕರಣಗಳು ಹೆಚ್ಚು ದಾಖಲಾಗಿವೆ. ಅಂದ ಮಾತ್ರಕ್ಕೆ ಇದು ರಾಜಧಾನಿಗೆ ಸೀಮಿತವಾಗಿಲ್ಲ. ರಾಜ್ಯದಾದ್ಯಂತ ನಗರ, ಪಟ್ಟಣ, ಗ್ರಾಮೀಣ ಪ್ರದೇಶಗಳಲ್ಲೂ ಇದರ ಹಾವಳಿ ವ್ಯಾಪಕವಾಗಿದೆ. ಮೈಸೂರು, ಹುಬ್ಬಳ್ಳಿ ಧಾರವಾಡ, ಮಂಗಳೂರು ಸೇರಿದಂತೆ ಪ್ರಮುಖ ನಗರಗಳು, ನಗರಗಳ ಹೊರವಲಯಗಳು, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಯುವಕರು, ಬಾಲಕರು ಸ್ಕೂಟರ್, ಬೈಕ್‌ಗಳಲ್ಲಿ ವ್ಹೀಲಿ ನಡೆಸಿ ತಮ್ಮ ಜೀವಕ್ಕೆ ಸಂಚಕಾರ ತರುವುದಲ್ಲದೆ, ಸಾರ್ವಜನಿಕರ ಜೀವಕ್ಕೂ ಅಪಾಯ ಒಡ್ಡುತ್ತಿದ್ದಾರೆ. ಸ್ಟಂಟ್‌ಗಳು ಎಗ್ಗಿಲ್ಲದೆ ನಡೆಯುತ್ತಿದ್ದರೂ ಠಾಣೆಗಳಲ್ಲಿ ದಾಖಲಾಗುವುದು ಕೆಲವು ಪ್ರಕರಣಗಳು ಮಾತ್ರ.

ಮೈಸೂರಿನಲ್ಲಿ 2023ರಲ್ಲಿ 23, 2024ರಲ್ಲಿ 32 ಪ್ರಕರಣಗಳು ದಾಖಲಾಗಿವೆ. ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ವ್ಹೀಲಿ ಮತ್ತು ಸ್ಟಂಟ್ ಮಾಡುವವರ ವಿರುದ್ಧ 2024 ಮತ್ತು 2025ಲ್ಲಿ 98 ಪ್ರಕರಣಗಳನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ (ಎನ್‌ಎಚ್–275) ವ್ಹೀಲಿ ಹೆಚ್ಚು. ಮಂಡ್ಯದಲ್ಲೂ ಈ ಸಮಸ್ಯೆ ಇದೆ. ರಾಮನಗರ ಜಿಲ್ಲೆಯಲ್ಲಿ ಮೂರು ವರ್ಷಗಳಲ್ಲಿ 20ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿಗೆ ಹತ್ತಿರದಲ್ಲೇ ಇರುವ ತುಮಕೂರು ಜಿಲ್ಲೆಯಲ್ಲೂ ವರ್ಷದಿಂದ ವರ್ಷಕ್ಕೆ ವ್ಹೀಲಿ ಹೆಚ್ಚಾಗುತ್ತಿದೆ. 2022ರಲ್ಲಿ 6 ಪ್ರಕರಣಗಳಿದ್ದರೆ, 2023ರಲ್ಲಿ 17, 2024ರಲ್ಲಿ 18 ಪ್ರಕರಣಗಳು ದಾಖಲಾಗಿವೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಾಲ್ಕು ವರ್ಷಗಳಲ್ಲಿ 19 ಪ್ರಕರಣಗಳು ವರದಿಯಾಗಿವೆ. ಕೊಪ್ಪಳದಲ್ಲಿ 2024ರಲ್ಲಿ ಐದು, 2025ರಲ್ಲಿ ಇದುವರೆಗೂ ಒಂದು ವ್ಹೀಲಿ ಪ್ರಕರಣ ದಾಖಲಾಗಿದೆ.

ರಾಷ್ಟ್ರೀಯ

‘ಜೆಎಜಿ’ ಹುದ್ದೆಗೆ ನೇಮಕ: ‘ಸುಪ್ರೀಂ’ ಪ್ರಶ್ನೆ

‘ಸೇನೆ ಕಾನೂನು ವಿಭಾಗ ಮಹಿಳೆಗೆ ತಾರತಮ್ಯವೇಕೆ?’

ನವದೆಹಲಿ(ಪಿಟಿಐ): ‘ಭಾರತೀಯ ವಾಯುಪಡೆಯಲ್ಲಿ ಮಹಿಳೆ ರಫೇಲ್ ಯುದ್ಧವಿಮಾನ ಹಾರಾಟ ನಡೆಸುವ ಸಾಮರ್ಥ್ಯ ಹೊಂದಿದ್ದಾಳೆ. ಆದರೆ, ಸೇನೆಯ ಜಡ್ಜ್ ಅಡ್ವೊಕೇಟ್ ಜನರಲ್ (ಜೆಎಜಿ) ವಿಭಾಗದಲ್ಲಿ ಮಹಿಳೆಯರನ್ನು ಕಡಿಮೆ ಸಂಖ್ಯೆಯಲ್ಲಿ ನೇಮಕ ಮಾಡಲಾಗಿದೆ. ಈ ತಾರತಮ್ಯ ಏಕೆ? ಎಂದು ಸುಪ್ರೀಂ ಕೋರ್ಟ್ ಅಚ್ಚರಿ ವ್ಯಕ್ತಪಡಿಸಿದೆ.

ಸೇನೆಯಲ್ಲಿ ನೇಮಕಾತಿಗೆ 50:50 ಅನುಪಾತ ಸೂತ್ರ ಅನುಸರಿಸುತ್ತಿರುವುದರ ಹಿಂದಿನ ತರ್ಕವೇನು ಎಂದೂ ಸುಪ್ರೀಂಕೋರ್ಟ್ ಪ್ರಶ್ನಿಸಿದೆ.

ನ್ಯಾಯಮೂರ್ತಿಗಳಾದ ದೀಪಾಂಕರ ದತ್ತಾ ಹಾಗೂ ಮನಮೋಹನ್ ಅವರಿದ್ದ ನ್ಯಾಯ ಪೀಠವು, ಸೇನೆಯ ಅಧಿಕಾರಿಗಳಾದ ಅರ್ಶನೂರ್ ಕೌರ್ ಹಾಗೂ ಆಸ್ಥಾ ತ್ಯಾಗಿ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಇತ್ತೀಚೆಗೆ ನಡೆಸಿದ ವೇಳೆ ಈ ಮಾತು ಹೇಳಿದೆ. ಪ್ರಕರಣ ಕುರಿತ ತೀರ್ಪನ್ನು ನ್ಯಾಯಪೀಠ ಮೇ 8ರಂದು ಕಾಯ್ದಿರಿಸಿದೆ.

ಅರ್ಶನೂರ್ ಹಾಗೂ ಆಸ್ಥಾ ಅವರು ಕ್ರಮವಾಗಿ 4 ಹಾಗೂ 5ನೇ ರ‍್ಯಾಂಕ್ ಪಡೆದಿದ್ದರು. ಈ ಹುದ್ದೆಗೆ ನೇಮಕಕ್ಕಾಗಿ ನಡೆದ ಪರೀಕ್ಷೆಯಲ್ಲಿ ಈ ಇಬ್ಬರು, ಪುರುಷ ಅಧಿಕಾರಿಗಳಿಗಿಂತಲೂ ಹೆಚ್ಚಿನ ರ‍್ಯಾಂಕ್ ಪಡೆದಿದ್ದರು. ಆದಾಗ್ಯೂ ಈ ಇಬ್ಬರು ಮಹಿಳಾ ಅಧಿಕಾರಿಗಳನ್ನು ಜೆಎಜಿ ಹುದ್ದೆಗೆ ಆಯ್ಕೆ ಮಾಡಿರಲಿಲ್ಲ. ಈ ನಡೆಯನ್ನು ಪ್ರಶ್ನಿಸಿ ಅವರು ಕೋರ್ಟ್ ಮೆಟ್ಟಿಲೇರಿದ್ದಾರೆ.

ಸೇನಾ ನ್ಯಾಯಾಲಯದಲ್ಲಿ ವಕೀಲ/ವಕೀಲೆ ಮತ್ತು ಸಲಹೆಗಾರ/ಸಲಹೆಗಾರ್ತಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಲು ಪರಮಾಧಿಕಾರ ಹೊಂದಿರುವ ಸೇನಾಧಿಕಾರಿಯನ್ನು ಜಡ್ಜ್ ಅಡ್ವೊಕೇಟ್ ಜನರಲ್(ಜೆಎಜಿ) ಎಂದು ಕರೆಯಲಾಗುತ್ತದೆ.

ಪುರುಷರು ಹಾಗೂ ಮಹಿಳೆಯರಿಗಾಗಿ ಖಾಲಿ ಇರುವ ಹುದ್ದೆಗಳ ಸಂಖ್ಯೆಗೆ ಸಂಬಂಧಿಸಿ ಸಮರ್ಪಕ ಅನುಪಾತವಿಲ್ಲ. ಒಟ್ಟು 6 ಹುದ್ದೆಗಳು ಇದ್ದರೂ, ಮಹಿಳೆಯರಿಗೆ ಮೂರು ಹುದ್ದೆಗಳನ್ನು ಮಾತ್ರ ಮೀಸಲಿಟ್ಟಿರುವುದನ್ನು ಅರ್ಜಿದಾರರು ಪ್ರಶ್ನಿಸಿದ್ದರು.

ವಿಚಾರಣೆ ವೇಳೆ, ‘ಈ ತಾರತಮ್ಯ ಪ್ರಶ್ನಿಸಿ ಅರ್ಶನೂರ್ ಕೌರ್ ಅವರು ಪ್ರಕರಣ ದಾಖಲಿಸಿರುವುದು ಮೇಲ್ನೋಟಕ್ಕೆ ಸರಿ ಎಂದು ತೋರುತ್ತದೆ’ ಎಂದು ಪೀಠ ಅಭಿಪ್ರಾಯಪಟ್ಟಿದೆ.

‘ಅರ್ಜಿದಾರರನ್ನು ಜೆಎಜಿ ಹುದ್ದೆಗೆ ನೇಮಕಕ್ಕೆ ಸಂಬಂಧಿಸಿ ಲಭ್ಯವಿರುವ ತರಬೇತಿ ಕೋರ್ಸ್‌ಗೆ ಸೇರ್ಪಡೆ ಮಾಡಬೇಕು’ ಎಂದು ಪೀಠವು ಪ್ರತಿವಾದಿಗಳಿಗೆ ನಿರ್ದೇಶನವನ್ನೂ ನೀಡಿದೆ.

‘ಮಹಿಳೆಯನ್ನು ವಾಯುಪಡೆಯಲ್ಲಿ ರಫೇಲ್ ಪೈಲಟ್ ಆಗಿ ನೇಮಕ ಮಾಡಬಹುದು ಎಂದಾಗ, ಜೆಎಜಿ ಹುದ್ದೆಯಲ್ಲಿ ಮಹಿಳೆಯರಿಗೆ ಅವಕಾಶ ನೀಡುವಲ್ಲಿ ಕಷ್ಟವೇನಿದೆ’ ಎಂದು ಕೇಂದ್ರ ಹಾಗೂ ಸೇನೆ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಟ್ಟಿ ಅವರನ್ನು ಉದ್ದೇಶಿಸಿ ಕೇಳಿದೆ.

‘ಲಿಂಗತ್ವ ತಟಸ್ಥ ನೀತಿ ಅಂದರೆ, ಒಟ್ಟು ಹುದ್ದೆಗಳಿಗೆ 50:50 ಅನುಪಾತದಲ್ಲಿ ನೇಮಕ ಮಾಡಿಕೊಳ್ಳುವುದು ಎಂದಲ್ಲ. ಆ ಹುದ್ದೆಗೆ ಪುರುಷರು ಅಥವಾ ಮಹಿಳೆಯರ ಪೈಕಿ ಯಾರೂ ನೇಮಕಗೊಳ್ಳಬಹುದು ಎಂದರ್ಥ’ ಎಂದೂ ಪೀಠ ಹೇಳಿದೆ.

ಫುಟ್‌ಪಾತ್: ರಾಜ್ಯಗಳಿಗೆ ನಿರ್ದೇಶನ

ನವದೆಹಲಿ (ಪಿಟಿಐ): ಪಾದಚಾರಿಗಳಿಗಾಗಿ ಸೂಕ್ತ ಪಾದಚಾರಿ ಮಾರ್ಗಗಳನ್ನು ನಿರ್ಮಿಸುವ ಸಂಬಂಧ ಮಾರ್ಗಸೂಚಿ ಬಿಡುಗಡೆ ಮಾಡುವಂತೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ನ್ಯಾಯಪೀಠವು, ಪಾದಚಾರಿ ಮಾರ್ಗ ಇಲ್ಲದ ಕಾರಣ ಪಾದಚಾರಿಗಳು ರಸ್ತೆಯಲ್ಲಿ ನಡೆಯುತ್ತಾರೆ. ಇದರಿಂದ ಅಪಘಾತ ಸಂಭವಿಸುವ ಅಪಾಯ ವಿರುತ್ತದೆ ಎಂದು ಅಭಿಪ್ರಾಯಪಟ್ಟಿತು.

ನಾಗರಿಕರ ಓಡಾಟಕ್ಕೆ ಸೂಕ್ತ ಪಾದಚಾರಿ ಮಾರ್ಗ ಅಗತ್ಯವಿದೆ. ಪಾದಚಾರಿ ಮಾರ್ಗಗಳ ಅತಿಕ್ರಮಣವನ್ನು ಕಡ್ಡಾಯವಾಗಿ ತೆರವುಗೊಳಿಸಬೇಕು. ಪಾದಚಾರಿ ಮಾರ್ಗವು ಪಾದಚಾರಿಗಳ ಸಾಂವಿಧಾನಿಕ ಹಕ್ಕು ಎಂದು ನ್ಯಾಯಪೀಠ ಪ್ರತಿಪಾದಿಸಿತು.

ಪಾದಚಾರಿಗಳ ಸುರಕ್ಷತೆಯು ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದ ಸುಪ್ರೀಂ ಕೋರ್ಟ್, ಅಂಗವೈಕಲ್ಯ ಇರುವ ವ್ಯಕ್ತಿಗಳಿಗೆ ಅನುಕೂಲವಾಗುವಂತೆ ಫುಟ್‌ಪಾತ್‌ಗಳನ್ನು ನಿರ್ಮಿಸಬೇಕು ಮತ್ತು ಅವುಗಳನ್ನು ಅಷ್ಟೇ ಮುತುವರ್ಜಿಯಿಂದ ನಿರ್ವಹಣೆ ಮಾಡಬೇಕು ಎಂದು ತಿಳಿಸಿತು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮೇ 15, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣತೃತೀಯ ಗಂ. 28-03 ನಕ್ಷತ್ರ: ಜ್ಯೇಷ್ಠ ಗಂ. 14-08 ಯೋಗ: ಶಿವ ಗಂ. 7-02 ಕರಣ: ವಣಜಿ ಗಂ. 15-19, ವೃಷಭ ಮಾಸದ 01 ನೇ ದಿನ.

ರಾಹುಕಾಲ: ಮಧ್ಯಾಹ್ನ 01-30 – 03-00

ಸೂರ್ಯೋದಯ: 06-08 **ಸೂರ್ಯಾಸ್ತ:** 06-45

ಮುಸ್ಲಿಂ ದಿನಾಂಕ: 16 ಜುಲ್ಖಾಯದ್

ಅದೃಷ್ಟ ಸಂಖ್ಯೆ: 1, 4

ಮೇಷ: ನೆರೆಹೊರೆಯವರ ಕಷ್ಟಗಳಿಗೆ ಸ್ಪಂದನೆ ಮಾಡುವುದು ಒಳ್ಳೆಯದು. ಈ ದಿನವು ಸಾಂಸಾರಿಕವಾಗಿ ತುಸು ನೆಮ್ಮದಿ, ಚೇತರಿಕೆಯ ದಿನವಾಗಲಿದೆ. ಅಧೀನ ಸಿಬ್ಬಂದಿಯೊಂದಿಗೆ ಸಂಯಮದಿಂದ ನಡೆದುಕೊಳ್ಳುವುದು ಉತ್ತಮ.

ವೃಷಭ: ಸಂಪರ್ಕ ಮಾಧ್ಯಮದಲ್ಲಿ ಸುದ್ದಿಗಾರರಾಗಿ ಉದ್ಯೋಗ ನಿರ್ವಹಿಸು- ವವರಿಗೆ ಬದಲಾವಣೆ ಸಂಭವವಿರಲಿದೆ. ಕೆಲಸದಲ್ಲಿ ತೋರಿದ ಶ್ರದ್ಧೆಗೆ ಹೆಚ್ಚಿನ ಸ್ಥಾನಮಾನ ಅಲಂಕರಿಸುವಿರಿ. ಸಗಟು ವ್ಯಾಪಾರದಲ್ಲಿ ಲಾಭ ಪಡೆಯಬಹುದು.

ಮಿಥುನ: ವೃತ್ತಿ ಹಾಗೂ ವೈಯಕ್ತಿಕ ಜೀವನ ತೃಪ್ತಿ ಎನಿಸಲಿದೆ. ಕೈಗೊಳ್ಳುವ ನಿರ್ಧಾರಗಳು ಫಲಪ್ರದವಾಗಿರುವುದರಿಂದ ಮನಸ್ಸಿಗೆ ನೆಮ್ಮದಿ ತರಲಿದೆ. ಧಾನ್ಯಗಳ ಸಂಗ್ರಹದಿಂದ ಮುಂದಿನ ದಿನಗಳಲ್ಲಿ ಲಾಭ ಪಡೆಯಬಹುದು.

ಕರ್ಕಾಟಕ: ಮಿತ್ರವರ್ಗದವರ ಸಹಾಯದಿಂದ ಗುತ್ತಿಗೆ ಆಧಾರಿತ ಉತ್ತಮ ಉದ್ಯೋಗ ಸಿಗಲಿದೆ. ಪ್ರಾಮಾಣಿಕತೆಯನ್ನು ಇಟ್ಟುಕೊಳ್ಳುವುದು ಕಷ್ಟ ಎನಿಸಿದರೂ, ಬಿಡುವುದು ಬೇಡ. ಲೇವಾದೇವಿ ವ್ಯವಹಾರ ಲಾಭ ತರಲಿದೆ.

ಸಿಂಹ: ಕೆಲಸವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಹೆಸರು ಹಾಳು ಮಾಡಿಕೊಳ್ಳುವ ಸಂಭವವಿದೆ, ಜಾಗ್ರತೆ ವಹಿಸಿ. ವಿಶ್ರಾಂತಿಯಿಲ್ಲದ ಕಾರ್ಯಗಳಿಂದ ರಕ್ತದೊತ್ತಡದಂಥ ಅನಾರೋಗ್ಯ ಉಂಟಾಗಬಹುದು.

ಕನ್ಯಾ: ನವ ಉಲ್ಲಾಸದಿಂದ ಈ ದಿನ ಆರಂಭವಾಗಲಿದೆ.ಅಕ್ಕಪಕ್ಕದಲ್ಲಿ ಹಲವಾರು ಸಂಗತಿಗಳು ತಿಳಿಯುವುದು. ಆದಾಯ ತೆರಿಗೆ ಇಲಾಖೆಯವರಿಗೆ ನಿಮ್ಮ ಲೆಕ್ಕಪತ್ರಗಳು ಸಮರ್ಪಕವಾಗಿರುವ ರೀತಿಯಲ್ಲಿ ವ್ಯವಹಾರವಿರಲಿ.

ತುಲಾ: ಏಕಕಾಲದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡುವ ಪ್ರಯತ್ನದಿಂದ ಎಲ್ಲದರಲ್ಲೂ ಅಪಕೀರ್ತಿ ಉಂಟಾಗಬಹುದು. ಒಂದು ಕೆಲಸವನ್ನು ಮುಗಿಸಿ ನಂತರ ಮತ್ತೊಂದರ ಬಗ್ಗೆ ಯೋಚಿಸಿ. ಮಾರಾಟಗಾರರಿಗೆ ವಿಶೇಷ ದಿನ.

ವೃಶ್ಚಿಕ: ಯೋಜನೆಗಳನ್ನು ಇತರರು ಒಮ್ಮನಸ್ಸಿನಿಂದ ಸ್ವೀಕರಿಸುವಂತೆ ಮಾಡುವ ಸಾಮರ್ಥ್ಯ ಅದ್ಭುತವಾದದ್ದು. ಪೋಸ್ಟಲ್, ಕೊರಿಯರ್ ಮತ್ತು ಮನೆಬಾಗಿಲ ಸೇವೆಯ ಕ್ಷೇತ್ರದವರಿಗೆ ಕೆಲಸದ ಭಾರ ಹೆಚ್ಚಾಗುತ್ತದೆ.

ಧನು: ಕೌಟುಂಬಿಕವಾಗಿ ಯಾವುದೇ ತೊಂದರೆ ಎದುರಾದರೂ ಎದುರಿಸುವ ಸಾಮರ್ಥ್ಯ ಇರುತ್ತದೆ, ಧೈರ್ಯಗೆಡುವ ಅವಶ್ಯಕತೆ ಇಲ್ಲ. ಲೆಕ್ಕಪತ್ರ ಪರಿಶೋಧಕರಿಗೆ ಕೆಲಸದಲ್ಲಿ ಸಂತೃಪ್ತಿ ಉಂಟಾಗುವುದು.

ಮಕರ: ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳ ಜತೆ ಜಾಣ್ಮೆಯಿಂದ ವ್ಯವಹರಿಸಿ. ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಪ್ರಯತ್ನ ಅವರಿಂದ ನಡೆಯಬಹುದು. ಈಶ್ವರ ಆರಾಧನೆಯಿಂದ ಶತ್ರು ನಿವಾರಣೆ.

ಕುಂಭ: ಹಲವು ದಿನಗಳ ಪರಿಶ್ರಮದ ಜತೆ ವರಿಷ್ಠರ ಸಹಾಯ ಸೇರಿಕೊಂಡು ರಾಜಕೀಯ ಪಕ್ಷದಲ್ಲಿ ಉನ್ನತ ಹುದ್ದೆ ಪ್ರಾಪ್ತಿ . ಮನೆಯಲ್ಲಿ ಅತಿಥಿ ಸತ್ಕಾರ ನಡೆಯಲಿದೆ. ದೇವರ ಕೃಪೆಯಿಂದ ನಿರೀಕ್ಷೆಗೂ ಮೀರಿದ ಜಯ ಸಿಗುವುದು.

ಮೀನ: ಎಲೆಕ್ಟ್ರಾನಿಕ್ ವಸ್ತುಗಳಿಂದ ಆದಾಯ ಹೆಚ್ಚುವುದು. ಹಣಕಾಸಿನಲ್ಲಿ ವ್ಯತ್ಯಾಸಗಳಾಗಿ ಉದ್ಯೋಗದಲ್ಲಿ ಛೀಮಾರಿ ಕೇಳಬೇಕಾದ ಪ್ರಸಂಗ ಬರಬಹುದು. ದೂರ ಸಂಚಾರ ಮಾಡಬೇಕಾಗುವುದು.

ದೇವರನ್ನು ಅರಿಯಬೇಕು

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

195

ದೇಹದೊಳಗೆ ಎಷ್ಟೊಂದು ವಾಯುಗಳಿವೆ; ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಮುಂತಾದ ವಾಯುಗಳಿವೆ. ಒಂದೊಂದು ವಾಯುವೂ ಒಂದೊಂದು ಕೆಲಸ ಮಾಡುತ್ತದೆ. ಇದನ್ನು ನಡೆಸಿದ್ದು ಯಾರು ಎನ್ನುವುದನ್ನು ವಿಚಾರ ಮಾಡಬೇಕಲ್ಲ ಮನುಷ್ಯ. ನನ್ನ ದೇಹವನ್ನು ನಡೆಸಿದ ಶಕ್ತಿ ಐತಲ್ಲ, ಅದು ದೇವರು. ಅಂತಹ ದೇವನನ್ನು ಮನುಷ್ಯ ಅರಿಯಬೇಕು, ಅನುಭವಿಸಬೇಕು, ಆರಾಧಿಸಬೇಕು. ದೇವನನ್ನು ಅರಿಯುವುದು ಹೇಗೆ? ದೇವರನ್ನು ಅರಸಲು ಸಾಧ್ಯವಿಲ್ಲ. ಅರಿಯಬೇಕು, ಅನುಭವಿಸಬೇಕು. ದೇವರನ್ನು ಅರಸಲು ಆತನೇನು ಕಾಡುಮೇಡುಗಳಲ್ಲಿ ಹುದುಗಿಕೊಂಡಿದ್ದಾನೇನು? ದೇವನನ್ನು ಅರಿಯಬೇಕು ಎಂದು ಎಲ್ಲರಿಗೂ ಬಯಕೆ ಇದೆ. ಈಗೊಂದು ಮೈಕ್ ಇದೆ, ಟೇಬಲ್ ಇದೆ. ಅವು ಇವೆ ಎಂದು ಹೇಳುತ್ತೇವೆ, ಅವು ಕಾಣುತ್ತವೆ. ದೇವರು ಹೀಗೆ ನಮ್ಮ ಕಣ್ಣಿಗೆ ಕಂಡಾನೇನು? ದೃಶ್ಯ ನಿರಕ್ಷರ ದೇವರು. ನಿರಾಕಾರ ದೇವರು. ಆ ನಿರಾಕಾರ ದೇವನಿಗೆ ನಮ್ಮ ಋಷಿಗಳು ಸತ್ ಎಂದು ಕರೆದರು. ಸತ್ ಎನ್ನುವುದರ ಅರ್ಥ ಯಾವಾಗಲೂ ಇರುವಂತಹದ್ದು ಎಂದು. ಮೂರೂ ಕಾಲದಲ್ಲಿ ಇರುವಂತಹದ್ದು.

ಈಗ ಒಂದು ಹೂವು ಇದೆ. ಅದು ನಿನ್ನೆ ಇರಲಿಲ್ಲ. ಇಂದು ಇದೆ. ನಾಳೆ ಇರುವುದಿಲ್ಲ. ಅಂದರೆ ಒಂದು ಹೂವಿನ ಇರುವಿಕೆ ಎರಡು ಇಲ್ಲಗಳ ನಡುವಿನ ಇರುವಿಕೆ. ಅಂದರೆ ಹೂವು ಸತ್ ಅಲ್ಲ. ಅದು ಮಿಥ್ಯೆ. ಆದರೆ ದೇವ ಹಾಗಲ್ಲ. ನಿನ್ನೆಯೂ ಇದ್ದ. ಇಂದೂ ಇದ್ದಾನೆ. ನಾಳೆಯೂ ಇರ್ತಾನೆ. ಯಾವಾಗಲೂ ಯಾವುದು ಇರುತ್ತದಲ್ಲ ಅದಕ್ಕೆ ಸತ್ ಅಂತ ಕರೀತಾರೆ. ಹಾಗಾದರೆ ನೀವು ಕಲ್ಲು, ಮಣ್ಣು, ಕಾಲ, ನೀರು, ಆಕಾಶ ಎಲ್ಲವೂ ಎಲ್ಲ ಕಾಲಕ್ಕೂ ಇರುತ್ತವೆ. ಇವಕ್ಕೂ ದೇವರು ಅನ್ನಬೇಕಲ್ಲ ಅಂತ ಕೇಳಿದರೆ ಅವು ಜಡ ವಸ್ತುಗಳು. ಅವಕ್ಕೆ ತನ್ನ ಜ್ಞಾನವೂ ಇಲ್ಲ, ಇನ್ನೊಬ್ಬರ ಜ್ಞಾನವೂ ಇಲ್ಲ. ದೇವರು ಬರೀ ಸತ್ ಅಲ್ಲ; ಚಿತ್ ಕೂಡಾ ಹೌದು. ಚಿತ್ ಇದರ ಅರ್ಥ ಬೆಳಗುವಿಕೆ. ಬೆಳಗುವಿಕೆ ದೇವರಾದರೆ ಸೂರ್ಯ ಕೂಡಾ ಬೆಳಗುತ್ತಾನೆ ಎಂದು ನೀವು ಕೇಳಬಹುದು. ನಿಮ್ಮ ಮನೆಯಲ್ಲಿ ಸೋಲಾರ್ ದೀಪ ಬೆಳಗುತ್ತದೆ. ದೀಪಕ್ಕೆ ಶಕ್ತಿ ಎಲ್ಲಿಂದ ಬಂತು ಎಂದು ಕೇಳಿದರೆ ಸೋಲಾರ್ ಪ್ಯಾನಲ್‌ನಿಂದ ಬಂತು. ಸೋಲಾರ್ ಪ್ಯಾನಲ್‌ಗೆ ಶಕ್ತಿ ಎಲ್ಲಿಂದ ಬಂತು ಅಂದರೆ, ಸೂರ್ಯನಿಂದ ಬಂತು. ಸೂರ್ಯನಿಗೆ ಶಕ್ತಿ ಎಲ್ಲಿಂದ ಬಂತು ಅಂದರೆ, ದೇವರಿಂದ ಬಂತು. ಸೂರ್ಯ, ಚಂದ್ರ, ನಕ್ಷತ್ರಗಳಲ್ಲಿ ಬೆಳಕು ತುಂಬಿಟ್ಟಿದ್ದಾನಲ್ಲ, ಅವನು ದೇವರು. ಯಾವುದು ಪ್ರಕಾಶಗೊಳಿಸುತ್ತದೆ ಅದು ದೇವರು.

ಈ ಜಗತ್ತಿಗೆ ಚಿತ್ ವಿಲಾಸ ಎಂದು ಕರೆಯುತ್ತಾರೆ. ಅಂದರೆ ದೇವರ ವಿಲಾಸ. ಚಿತ್ ಪ್ರಕಾಶ ಅಂತ ಕರೀತಾರೆ. ಯಾಕೆಂದರೆ, ಇದು ದೇವನ ಬೆಳಕು ಅಂತ. ಇನ್ನೊಂದು ಚಿತ್ ಶಕ್ತಿ ಅಂತ ಇದೆ. ಜಗತ್ತಿನಲ್ಲಿ ವಸ್ತುಗಳಿಲ್ಲ. ಇಲ್ಲಿರುವುದು ಬರೀ ಶಕ್ತಿ ಅಂತ ವಿಜ್ಞಾನಿಗಳು ಹೇಳುತ್ತಾರೆ. ಚಿತ್ ಶಕ್ತಿ ಎಂದರೆ ಇರುವುದೆಲ್ಲವೂ ದೇವನ ಶಕ್ತಿ ಎಂದು ಅರ್ಥ. ಈ ದೇಹ, ಈ ಭೂಮಿ, ಈ ಬದುಕು ಎಲ್ಲವೂ ದೇವನು ಕೊಟ್ಟಿದ್ದು ಎಂದು ಹೃದಯದಲ್ಲಿ ಇಟ್ಟುಕೊಂಡು ದೇವಭಾವದಿಂದ ಬದುಕಬೇಕು ಮನುಷ್ಯ.

ಪದಬಂಧ 6043

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

5.ಸವೆತ ಬಂದರೂ ಇದು ನಿರಂತರ! (3)
7.ಇದು ಪ್ರತಿಕೂಲವಾದುದು (3)
9.ಹಾಲಿನಿಂದ ಮಾಡಿದ ಸಿಹಿ ಭಕ್ಷ್ಯ (3)
11.ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)
12.ವೃಕ್ಷದ ಬಳಿಯೇ ಸಾವು ಸಾವುಸಂಭವಿಸಿದೆಯಲ್ಲಾ? (3)
14.ಬೈದಾಟಕ್ಕೊಂದು ಪರ್ಯಾಯ ಪದ (3)
16.ನೂಲು ತೆಗೆಯುವ ಯಂತ್ರ (3)

ಮೇಲಿಂದ ಕೆಳಕ್ಕೆ

1.ರೂಢಿಸಿಕೊಂಡಿರುವ ವ್ಯಾಸಂಗ! (3)
2.ನಿರ್ಣಯ ಮಾಡಲ್ಪಟ್ಟದ್ದು (3)
3.ಅತ್ಯಾಸೆಯುಳ್ಳವನು ತಿರುಗಿ ನಿಂತಿದ್ದಾನಲ್ಲಾ! (3)
4.ದಾಯಾದಿಗೆ ಸಲ್ಲಿಸುವುದು (3)
6.ಈತ ಶಿರವನ್ನು ಕಡಿಯುವವನು (5)
7.ಬಿಡುವು ಈ ರೀತಿ ದೊರೆತಿದೆ (3)
8.ಮಣ ಭಾರದ ಹೆಣವನ್ನು ಹೂಳಿದ ಜಾಗ (3)
9.ಪಾಕದ ನಂತರ ಸೇವಿಸಿದ ಷರಬತ್ತು (3)
10.ಸಿದ್ಧತೆಯನ್ನು ಹೀಗೆನ್ನಿ (3)
13.ರಥದ ಚಕ್ರ (3)
15.ಶುನಕ ಮೂಸುತ್ತಿರುವ ಬೆಳ್ಳುಳ್ಳಿ (3)
16.ಹೆಬ್ಬೆರಳಿನ ಪಕ್ಕದ ಬೆರಳಿದು (3)
17.ಹರಾಜಿಗೊಂದು ಪರ್ಯಾಯ ಪದ (3)



6042ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಲ್ಲಾಸ 3.ಗಾವುದ
5.ಭಿನ್ನಾಭಿಪ್ರಾಯ
7.ಕ್ಷುಲ್ಲಕ 8.ಕಹಳೆ
9.ಓರಿಗೆ 11.ಗರತಿ
13.ಆಹ್ವಾನ 15.ಶುಕ್ತಿಕೆ
16.ವಿಮಾನಯಾನ
17.ಕಂದೀಲು 18.ಕದಿರು

ಮೇಲಿಂದ ಕೆಳಕ್ಕೆ:
2.ಸಭಿಕ 3.ಗಾಯಕ
6.ಭಿಕಾರಿ 9.ಓದುಗ
10.ಗೆಳತಿ 12.ರಸನ
14.ನವಿಲು 15.ಶುನಕ

ಸುಡೊಕು 6427

	6			2		5		
5		4			7		2	3
	2		5			6		7
8		1		3				9
			9		8			
9		2		5		3		6
7		3		9				
	8		7		5	9	3	
		9		8			7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6426 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಷೇರುಪೇಟೆ ವಹಿವಾಟು 182



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,578
ಇಂದಿನ ಅಂತ್ಯ	24,666
▲	88
ದಿನದ ಗರಿಷ್ಠ	24,767

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹570
12 ಕ್ಕೆ	₹76
ಮೈಸೂರು	
100ಕ್ಕೆ	₹583

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹352-566
ದ್ವಿತಳಿ (ಬಿ.ವಿ)	₹380-708

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹192
ಆರ್‌ಎಸ್‌ಎಸ್-5	₹187
ಗುಡ್ ಲಾಟ್	₹177

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹1,000-1,400
ಮಧ್ಯಮ	₹600-1,000
ಸಣ್ಣ	₹300-600

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹18200-18230
ಬೆಂಗಳೂರು	₹18000-20000
ತುಮಕೂರು	₹16100-17800

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1300 (1285)
ಸೂರ್ಯಕಾಂತಿ (ರಿಫೈನ್ಡ್)	₹1400 (1390)
ಪಾಮೋಲಿನ್	₹1255 (1240)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

12ನೇ ವರ್ಷದ ಪುಣ್ಯಸ್ಮರಣೆ



ಎಂ.ವಿ.ಪುಟ್ಟಪ್ಪ ಹೆಗ್ಗಡೆ ಯವರು
ಜನನ:31-12-1931 ನಿಧನ:15-05-2013
ನೀವು ನಮ್ಮನ್ನಗಲಿ ಹನ್ನೆರಡು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬಸ್ಥರು, ಶಿವಮೊಗ್ಗ.
ಫೋನ್: 9481320229 / 9480204505 9845027001 / 9448210868

ಸಗಟು ಹಣದುಬ್ಬರ 13 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ಏಪ್ರಿಲ್‌ನಲ್ಲಿ ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧರಿತ ಹಣದುಬ್ಬರವು 13 ತಿಂಗಳ ಕನಿಷ್ಠ ಮಟ್ಟವಾದ ಶೇ 0.85ರಷ್ಟು ದಾಖಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಬುಧವಾರ ತಿಳಿಸಿದೆ.

ಆಹಾರ ಪದಾರ್ಥಗಳು, ಇಂಧನ ಮತ್ತು ತಯಾರಿಕಾ ಸರಕುಗಳ ಬೆಲೆ ಇಳಿಕೆಯೇ ಇದಕ್ಕೆ ಕಾರಣ. ಮೇ ತಿಂಗಳಿನಲ್ಲಿಯೂ ಸಗಟು ಹಣದುಬ್ಬರ ಮತ್ತಷ್ಟು ಇಳಿಕೆಯಾಗುವ ನಿರೀಕ್ಷೆಯಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಮಾರ್ಚ್‌ನಲ್ಲಿ ಸಗಟು ಹಣದುಬ್ಬರವು ಶೇ 2.05ರಷ್ಟಿತ್ತು. ಕಳೆದ ವರ್ಷದ ಮಾರ್ಚ್‌ನಲ್ಲಿ ಶೇ 0.26ರಷ್ಟು ದಾಖಲಾಗಿತ್ತು. ಇದಾದ ಬಳಿಕ ಕಡಿಮೆ ದಾಖಲಾಗಿರುವ ತಿಂಗಳು ಇದಾಗಿದೆ.

ಮಾರ್ಚ್‌ನಲ್ಲಿ ಶೇ 1.57ರಷ್ಟಿದ್ದ ಆಹಾರ ಪದಾರ್ಥಗಳ ಬೆಲೆಯು ಏಪ್ರಿಲ್‌ನಲ್ಲಿ ಶೇ 0.86ಕ್ಕೆ ಇಳಿಕೆ ಯಾಗಿದೆ. ತರಕಾರಿಗಳ ಬೆಲೆಯು ಶೇ 15.88ರಿಂದ ಶೇ 18.26ಕ್ಕೆ ಹೆಚ್ಚಳವಾಗಿದೆ ಎಂದು ಸಚಿವಾಲಯ ತಿಳಿಸಿದೆ. ಈರುಳ್ಳಿ ಬೆಲೆಯು ಶೇ 26.65ರಿಂದ ಶೇ 0.20ಕ್ಕೆ, ಹಣ್ಣುಗಳ ಬೆಲೆಯು ಶೇ 20.78ರಿಂದ ಶೇ 8.38ಕ್ಕೆ, ಆಲೂಗೆಡ್ಡೆ ಶೇ 24.30 ಮತ್ತು ದ್ವಿದಳ ಧಾನ್ಯಗಳ ದರವು ಶೇ 5.57ಕ್ಕೆ ತಗ್ಗಿದೆ ಎಂದು ತಿಳಿಸಿದೆ.

ವಿನಿಮಯ ದರ

$ ಡಾಲರ್	85.32
£ ಪೌಂಡ್	113.85
€ ಯುರೊ	95.90
¥ ಯೆನ್ (100ಕ್ಕೆ)	58

ಪಾಕ್ ಪರ ನಿಂತ ಅಜರ್‌ಬೈಜಾನ್ ವಿರುದ್ಧವೂ ಅಭಿಯಾನ

ಟರ್ಕಿ ಸೇಬಿಗೆ ಬಹಿಷ್ಕಾರ ಬಿಸಿ

ನವದೆಹಲಿ (ಪಿಟಿಐ): ಭಾರತ ವಿರುದ್ಧದ ದಾಳಿಯಲ್ಲಿ ಪಾಕಿಸ್ತಾನ ಬಳಸಿರುವ ಡ್ರೋನ್‌ಗಳನ್ನು ಟರ್ಕಿ ದೇಶವು ಪೂರೈಸಿದೆ. ಅಲ್ಲದೆ, ಪಾಕಿಸ್ತಾನವನ್ನು ಅಜರ್‌ಬೈಜಾನ್ ಬೆಂಬಲಿಸಿದೆ. ಹಾಗಾಗಿ, ಈ ಎರಡು ದೇಶಗಳಿಂದ ಆಮದಾಗುವ ಸರಕುಗಳಿಗೆ ಕೇಂದ್ರ ಸರ್ಕಾರವು ಬಹಿಷ್ಕಾರ ಹೇರಬೇಕು ಎಂದು ವರ್ತಕರ ವಲಯ ಒತ್ತಾಯಿಸಿದೆ.

ಜೊತೆಗೆ, ಈ ಎರಡು ದೇಶಗಳ ಪ್ರವಾಸೋದ್ಯಮಕ್ಕೂ ನಿರ್ಬಂಧ ಹೇರಬೇಕು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ ಶುರುವಾಗಿದೆ. ಮತ್ತೊಂದೆಡೆ ಟರ್ಕಿಯಿಂದ ಭಾರತಕ್ಕೆ ಪ್ರಮುಖವಾಗಿ ಪೂರೈಕೆಯಾಗುವ ಸೇಬು ಮತ್ತು ಅಮೃತ ಶಿಲೆಯನ್ನು (ಮಾರ್ಬಲ್) ವರ್ತಕರ ವಲಯವು ಬಹಿಷ್ಕರಿಸಿದೆ.

ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ದಾಳಿ ಖಂಡಿಸಿ ಭಾರತವು 'ಸಿಂಧೂರ' ಕಾರ್ಯಾಚರಣೆ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನ ನಡೆಸಿದ ದಾಳಿಯಲ್ಲಿ ಟರ್ಕಿ ತಯಾರಿಸಲಾದ ಡ್ರೋನ್‌ಗಳನ್ನು ಬಳಸಲಾಗಿತ್ತು. ಭಾರತೀಯ ಸೇನೆಯು ಈ ಡ್ರೋನ್‌ಗಳು ಹೊಡೆದುರುಳಿಸಿತ್ತು.

ಯಾವ ಉತ್ಪನ್ನಗಳು ರಫ್ತು: ಭಾರತದಿಂದ ಟರ್ಕಿಗೆ ಖನಿಜ ಇಂಧನ ಮತ್ತು ತೈಲ, ಎಲೆಕ್ಟ್ರಿಕಲ್ ಉಪಕರಣ, ವಾಹನ ಮತ್ತು ಅದರ ಬಿಡಿಭಾಗ, ರಾಸಾಯನಿಕ, ಔಷಧ, ಟ್ಯಾನಿಂಗ್ ಮತ್ತು ಡೈಯಿಂಗ್ ಪರಿಕರ, ಪ್ಲಾಸ್ಟಿಕ್, ರಬ್ಬರ್, ಹತ್ತಿ, ಫೈಬರ್, ಕಬ್ಬಿಣ ಮತ್ತು ಉಕ್ಕು ರಫ್ತಾಗುತ್ತದೆ. ಅಲ್ಲಿಂದ ಮುಖ್ಯವಾಗಿ ಸೇಬು, ಅಮೃತಶಿಲೆ, ಚಿನ್ನ, ತರಕಾರಿ, ಸುಣ್ಣ ಮತ್ತು ಸಿಮೆಂಟ್, ಖನಿಜ ತೈಲ, ರಾಸಾಯನಿಕ, ನೈಸರ್ಗಿಕ ಹರಳು, ಕಬ್ಬಿಣ ಮತ್ತು ಉಕ್ಕು ಆಮದಾಗುತ್ತದೆ.

ಭಾರತವು ಅಜರ್‌ಬೈಜಾನ್‌ಗೆ ಹೊಗೆಸೊಪ್ಪು ಮತ್ತು ಅದರ ಉತ್ಪನ್ನಗಳು, ಚಹ, ಕಾಫಿ, ದ್ವಿದಳಧಾನ್ಯ, ರಾಸಾಯನಿಕ, ಪ್ಲಾಸ್ಟಿಕ್, ರಬ್ಬರ್, ಕಾಗದ, ಸೆರಾಮಿಕ್ ಸರಕುಗಳನ್ನು ರವಾನಿಸುತ್ತದೆ. ಅಲ್ಲಿಂದ ಪಶು ಆಹಾರ, ರಾಸಾಯನಿಕ, ಸಾರವರ್ಧಿತ ತೈಲ, ಸುಗಂಧ ದ್ರವ್ಯ, ಚರ್ಮವನ್ನು ಆಮದು ಮಾಡಿಕೊಳ್ಳಲಾಗುತ್ತದೆ.

ಭಾರತೀಯರು ಎಷ್ಟಿದ್ದಾರೆ?

ಟರ್ಕಿಯಲ್ಲಿ 3 ಸಾವಿರಕ್ಕೂ ಹೆಚ್ಚು ಭಾರತೀಯರಿದ್ದು, ಈ ಪೈಕಿ 200 ವಿದ್ಯಾರ್ಥಿಗಳಿದ್ದಾರೆ. ಅಜರ್‌ಬೈಜಾನ್‌ನಲ್ಲಿ 1,500ಕ್ಕೂ ಹೆಚ್ಚು ಭಾರತೀಯರು ನೆಲಸಿದ್ದಾರೆ.

2023ರಲ್ಲಿ ಟರ್ಕಿಗೆ 3 ಲಕ್ಷ ಭಾರತೀಯ ಪ್ರವಾಸಿಗರು ಭೇಟಿ ನೀಡಿದ್ದರೆ, ಇದೇ ಅವಧಿಯಲ್ಲಿ ಅಜರ್‌ಬೈಜಾನ್‌ಗೆ ಭೇಟಿ ನೀಡಿದ ಭಾರತೀಯರ ಸಂಖ್ಯೆ 2 ಲಕ್ಷಕ್ಕೂ ಹೆಚ್ಚಿದೆ.

ಪ್ರವಾಸದ ಟಿಕೆಟ್ ಬುಕಿಂಗ್ ಇಳಿಕೆ

ಸಾಮಾಜಿಕ ಜಾಲತಾಣಗಳಲ್ಲಿ ಈ ಎರಡೂ ರಾಷ್ಟ್ರಗಳಿಗೆ ಪ್ರವಾಸ ತೆರಳುವುದನ್ನು ಬಹಿಷ್ಕರಿಸಬೇಕು ಎಂಬ ಅಭಿಯಾನ ಜೋರಾಗಿರುವ ಬೆನ್ನಲ್ಲೇ ಬುಕಿಂಗ್ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂದು ಆನ್‌ಲೈನ್ ಟ್ರಾವೆಲ್ ಕಂಪನಿಯಾದ ಮೇಕ್‌ಮೈಟ್ರಿಪ್ ತಿಳಿಸಿದೆ.

ಒಂದು ವಾರದ ಅವಧಿಯಲ್ಲಿ ಎರಡು ದೇಶಗಳ ಪ್ರವಾಸದ ಬುಕಿಂಗ್‌ನಲ್ಲಿ ಶೇ 60ರಷ್ಟು ಕಡಿಮೆಯಾಗಿದೆ ಎಂದು ಹೇಳಿದೆ.

ಈ ದೇಶಗಳ ನಿಲುವಿನ ವಿರುದ್ಧ ಭಾರತದ ಪ್ರವಾಸಿಗರು ಅಸಮಾಧಾನಗೊಂಡಿದ್ದಾರೆ. ಹಾಗಾಗಿ, ಅಲ್ಲಿಗೆ ತೆರಳುವವರ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳಿದೆ.

'ದೇಶದ ಏಕತೆಯೇ ನಮ್ಮ ಧ್ಯೇಯ. ಭಾರತೀಯ ಸೇನೆಯ ಹೋರಾಟಕ್ಕೆ ಗೌರವ ಸಲ್ಲಿಸುತ್ತೇವೆ. ಪ್ರವಾಸಿಗರ ನಿಲುವಿಗೆ ನಾವು ಬೆಂಬಲ ನೀಡುತ್ತೇವೆ. ಈ ದೇಶಗಳಿಗೆ ಅನಗತ್ಯವಾಗಿ ಪ್ರವಾಸ ಮಾಡದಂತೆ ಸಲಹೆಯನ್ನೂ ನೀಡಲಾಗುತ್ತಿದೆ' ಎಂದು ಮೇಕ್‌ಮೈಟ್ರಿಪ್ ವಕ್ತಾರರು ತಿಳಿಸಿದ್ದಾರೆ.

ರಫ್ತು ಪ್ರಮಾಣ ಎಷ್ಟು?

2024–25ನೇ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಫೆಬ್ರುವರಿವರೆಗೆ ಭಾರತವು, ಟರ್ಕಿಗೆ ₹44,400 ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಿದೆ. ದೇಶದ ಒಟ್ಟು ರಫ್ತಿನ ಪೈಕಿ ಈ ಪಾಲು ಶೇ 1.5ರಷ್ಟಿದೆ. ಇದೇ ಅವಧಿಯಲ್ಲಿ ಅಜರ್‌ಬೈಜಾನ್‌ಗೆ ₹735 ಕೋಟಿ ಮೌಲ್ಯದ ಸರಕುಗಳು ರಫ್ತಾಗಿವೆ.

ಟರ್ಕಿಯಿಂದ ಭಾರತವು ಇದೇ ಅವಧಿಯಲ್ಲಿ ₹24,200 ಕೋಟಿ ಮೌಲ್ಯದ ಉತ್ಪನ್ನಗಳನ್ನು ಆಮದು ಮಾಡಿಕೊಂಡಿದೆ. ದೇಶದ ಒಟ್ಟು ಆಮದಿನ ಪೈಕಿ ಈ ಪಾಲು ಶೇ 0.5ರಷ್ಟಿದೆ. ಅಜರ್‌ಬೈಜಾನ್‌ನಿಂದ ₹16.50 ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಳ್ಳಲಾಗಿದೆ.

ಸುದ್ದಿ 2 ನಿಮಿಷ

ಸಂಘ–ಸಂಸ್ಥೆಗಳಿಗೆ ಕೆನರಾ ಬ್ಯಾಂಕ್‌ನಿಂದ ಪ್ರತ್ಯೇಕ ಖಾತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ಸಂಘ-ಸಂಸ್ಥೆಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸಲು 'ಕೆನರಾ ಟ್ರಸ್ಟ್' ಹೆಸರಿನ ಉಳಿತಾಯ ಮತ್ತು ಚಾಲ್ತಿ ಖಾತೆ ಸೌಲಭ್ಯವನ್ನು ಆರಂಭಿಸಿದೆ.

ಠೇವಣಿ ಪಾವತಿ ಮಾಡದೆ ಖಾತೆ ತೆರೆಯಬಹುದು. ಈ ಖಾತೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಬ್ಯಾಂಕ್‌ನಲ್ಲಿ ಪ್ರತ್ಯೇಕವಾಗಿ ಅಧಿಕಾರಿಯೊಬ್ಬರನ್ನು ನಿಯೋಜಿಸಲಾಗಿದೆ. ಅವರು ಬ್ಯಾಂಕಿಂಗ್ ವಹಿವಾಟು ಪೂರೈಸಲು ನೆರವು ನೀಡಲಿದ್ದಾರೆ ಎಂದು ಬ್ಯಾಂಕ್ ತಿಳಿಸಿದೆ.

ಇದರಡಿ ಖಾತೆ ತೆರೆದ ಸಂಘ–ಸಂಸ್ಥೆಗಳ ಪ್ರಮುಖ ಪದಾಧಿಕಾರಿಗಳಿಗೆ ಪ್ರೀಮಿಯಂ ಡೆಬಿಟ್ ಕಾರ್ಡ್ ವಿತರಿಸಲಾಗುತ್ತದೆ. ಸುಗಮ ಕಾರ್ಯಾಚರಣೆಗಾಗಿ ಪದಾಧಿಕಾರಿಗಳ ವೈಯಕ್ತಿಕ ಉಳಿತಾಯ ಖಾತೆಗೆ ಈ ಖಾತೆಗಳನ್ನು ಲಿಂಕ್ ಕೂಡ ಮಾಡಲಾಗುತ್ತದೆ. ಉಚಿತವಾಗಿ ಡಿಜಿಟಲ್ ಬ್ಯಾಂಕಿಂಗ್ ಸೇವಾ ಸೌಲಭ್ಯವೂ ದೊರೆಯಲಿದೆ ಎಂದು ತಿಳಿಸಿದೆ.

ಆರೋಗ್ಯ, ಶಿಕ್ಷಣ, ಧಾರ್ಮಿಕ ಮತ್ತು ಇತರೆ ಸಂಘ–ಸಂಸ್ಥೆಗಳು ಈ ಖಾತೆ ತೆರೆಯಬಹುದು. ದೇಶದಾದ್ಯಂತ ಬ್ಯಾಂಕ್‌ನ ಎಲ್ಲಾ ಶಾಖೆಗಳಲ್ಲಿ ಈ ಖಾತೆ ತೆರೆಯಬಹುದು ಎಂದು ತಿಳಿಸಿದೆ.

ಚಿನ್ನದ ಧಾರಣೆ ₹650 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ಧಾರಣೆಯು ಇಳಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹650 ಇಳಿಕೆಯಾಗಿದ್ದು, ₹96,850 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ದರವು ₹700 ಇಳಿದಿದ್ದು, ₹96,400ಕ್ಕೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಸುಂಕಕ್ಕೆ ಸಂಬಂಧಿಸಿದಂತೆ ಅಮೆರಿಕದ ಜೊತೆಗೆ ಹಲವು ರಾಷ್ಟ್ರಗಳು ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲು ಮುಂದಾಗಿವೆ. ಚೀನಾ ಕೂಡ ಇದೇ ಹಾದಿ ತುಳಿದಿದೆ. ಇದು ಚಿನ್ನದ ಬೆಲೆಯ ಮೇಲೆ ಪರಿಣಾಮ ಬೀರಿದೆ' ಎಂದು ಅಬಾನ್ಸ್ ಫೈನಾನ್ಶಿಯಲ್ ಸರ್ವಿಸಸ್‌ನ ಸಿಇಒ ಚೇತನ್ ಮೆಹ್ತಾ ಹೇಳಿದ್ದಾರೆ.

ಆದರೆ, ಪಶ್ಚಿಮ ಏಷ್ಯಾದಲ್ಲಿ ತಲೆದೋರಿರುವ ಬಿಕ್ಕಟ್ಟು ಇನ್ನೂ ಶಮನಗೊಂಡಿಲ್ಲ. ಇದು ಹಳದಿ ಲೋಹದ ಬೆಲೆ ಏರಿಕೆಗೆ ಕಾರಣವಾಗುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಸತತ ಮೂರನೇ ದಿನವೂ ಬೆಳ್ಳಿ ಧಾರಣೆಯು ಇಳಿಕೆಯಾಗಿದೆ. ಪ್ರತಿ ಕೆ.ಜಿಗೆ ₹1,450 ಇಳಿಕೆಯಾಗಿದ್ದು, ₹98 ಸಾವಿರ ಆಗಿದೆ.

ಸಂಕ್ಷಿಪ್ತ ಸುದ್ದಿ

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರು ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಚೇತರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 182 ಅಂಶ ಏರಿಕೆಯಾಗಿ, 81,330 ಅಂಶಗಳಲ್ಲಿ ವಹಿವಾಟು ಕೊನೆಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 88 ಅಂಶ ಹೆಚ್ಚಳವಾಗಿ, 24,666ರಲ್ಲಿ ಸ್ಥಿರಗೊಂಡಿತು.

ಟಾಟಾ ಸ್ಟೀಲ್, ಎಟರ್ನಲ್, ಟೆಕ್ ಮಹೀಂದ್ರ, ಮಾರುತಿ ಸುಜುಕಿ, ಮಹೀಂದ್ರ ಆ್ಯಂಡ್ ಮಹೀಂದ್ರ, ಇನ್ಫೊಸಿಸ್, ಇಂಡಸ್‌ಇಂಡ್ ಬ್ಯಾಂಕ್, ಎಚ್‌ಸಿಎಲ್ ಟೆಕ್, ಟಿಸಿಎಸ್, ಭಾರ್ತಿ ಏರ್‌ಟೆಲ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಏಷ್ಯನ್ ಪೇಂಟ್ಸ್, ಟಾಟಾ ಮೋಟರ್ಸ್, ಕೋಟಕ್ ಮಹೀಂದ್ರ ಬ್ಯಾಂಕ್, ಎನ್‌ಟಿಪಿಸಿ ಮತ್ತು ಪವರ್ ಗ್ರಿಡ್ ಷೇರಿನ ಮೌಲ್ಯದಲ್ಲಿ ಇಳಿದಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.13ರಷ್ಟು ಕಡಿಮೆಯಾಗಿದೆ. ಪ್ರತಿ ಬ್ಯಾರೆಲ್ 65.88 ಡಾಲರ್ ಆಗಿದೆ. ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹476 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಯುಬಿಐನಿಂದ ಹೊಸ ಠೇವಣಿ ಯೋಜನೆ ಪ್ರಕಟ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾವು (ಯುಬಿಐ) ಹೊಸದಾಗಿ 'ಯೂನಿಯನ್ ವೆಲ್‌ನೆಸ್ ಡೆಪಾಸಿಟ್' ಹೆಸರಿನ ಅವಧಿ ಠೇವಣಿ ಯೋಜನೆಯನ್ನು ಆರಂಭಿಸಿದೆ.

ಈ ಠೇವಣಿ ಜೊತೆಗೆ ಆರೋಗ್ಯ ವಿಮೆ ಸೌಲಭ್ಯವೂ ಗ್ರಾಹಕರಿಗೆ ದೊರೆಯಲಿದೆ. 375 ದಿನಗಳ ಅವಧಿಯ ಠೇವಣಿ ಇದಾಗಿದೆ. ಕನಿಷ್ಠ ಠೇವಣಿ ಮೊತ್ತ ₹10 ಲಕ್ಷ ಆಗಿದ್ದು, ಶೇ 6.75ರಷ್ಟು ಬಡ್ಡಿದರ ನಿಗದಿಪಡಿಸಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

18ರಿಂದ 75 ವರ್ಷದ ಒಳಗಿನವರು ಈ ಠೇವಣಿ ಖಾತೆ ತೆರೆಯಬಹುದಾಗಿದೆ ಎಂದು ತಿಳಿಸಿದೆ.

ಇತ್ತೀಚೆಗೆ ಬ್ಯಾಂಕ್‌ಗಳು ಠೇವಣಿ ಸಂಗ್ರಹಕ್ಕೆ ಹಲವು ಸವಾಲುಗಳನ್ನು ಎದುರಿಸುತ್ತಿವೆ. ಠೇವಣಿ ಸಂಗ್ರಹಿಸುವ ಉದ್ದೇಶದಿಂದಲೇ ಯೂನಿಯನ್ ಬ್ಯಾಂಕ್ ಈ ಹೊಸ ಯೋಜನೆಯನ್ನು ಆರಂಭಿಸಿದೆ.

ಕರ್ಣಾಟಕ ಬ್ಯಾಂಕ್ ನಿವ್ವಳ ಲಾಭ ₹1,272 ಕೋಟಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ಣಾಟಕ ಬ್ಯಾಂಕ್ 2024–25ನೇ ಸಾಲಿನ ಪೂರ್ಣ ಆರ್ಥಿಕ ವರ್ಷದಲ್ಲಿ ಒಟ್ಟು ₹1,272.37 ಕೋಟಿ ನಿವ್ವಳ ಲಾಭ ಗಳಿಸಿದೆ.

ಈ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ₹1,82,766.21 ಕೋಟಿ ವ್ಯವಹಾರ ನಡೆಸಿದ್ದು, ಸಾರ್ವಕಾಲಿಕ ಗರಿಷ್ಠವಾಗಿದೆ.

ಬುಧವಾರ ಇಲ್ಲಿ ನಡೆದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಹಣಕಾಸು ವರದಿಗೆ ಅನುಮೋದಿಸಲಾಯಿತು. ಪ್ರತಿ ಷೇರಿಗೆ ₹5 ಲಾಭಾಂಶ ವಿತರಿಸಲು ಒಪ್ಪಿಗೆ ನೀಡಲಾಯಿತು.

2024–25ನೇ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹252.37 ಕೋಟಿ ನಿವ್ವಳ ಲಾಭ ಗಳಿಸಿದೆ. 2023–24ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹274.24 ಕೋಟಿ ಲಾಭ ಗಳಿಸಿತ್ತು.

ಪೂರ್ಣ ಆರ್ಥಿಕ ವರ್ಷದಲ್ಲಿ ₹1,272.37 ಕೋಟಿ ಲಾಭ ಗಳಿಸಿದೆ. 2023–24ರಲ್ಲಿ ₹1,306.28 ಕೋಟಿ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 2.60ರಷ್ಟು ಇಳಿಕೆಯಾಗಿದೆ.

2024ರ ಏಪ್ರಿಲ್‌ನಿಂದ ಆರ್‌ಬಿಐ ನಿರ್ದೇಶನದ ಪ್ರಕಾರ ಹೂಡಿಕೆಯ ಲೆಕ್ಕಪತ್ರ ನೀತಿಯಲ್ಲಿ ಬದಲಾವಣೆ ಆಗಿರುವ ಕಾರಣಕ್ಕೆ ಹಿಂದಿನ ಅಂಕಿ–ಅಂಶಗಳನ್ನು ಹೋಲಿಕೆ ಮಾಡಲಾಗದು. ಹಿಂದಿನ ನೀತಿಯಂತೆ ಲೆಕ್ಕ ಹಾಕಿದರೆ ಬ್ಯಾಂಕ್‌ನ ಲಾಭ ₹147.51 ಕೋಟಿ ಹೆಚ್ಚಳವಾಗುತ್ತಿತ್ತು ಎಂದು ಬ್ಯಾಂಕ್ ಹೇಳಿದೆ.

ಬ್ಯಾಂಕ್‌ನ ಒಟ್ಟು ಠೇವಣಿ ₹1,04,807.49 ಕೋಟಿ. ಒಟ್ಟು ಮುಂಗಡ ₹77,958.72 ಕೋಟಿ ಆಗಿದೆ. ಶೇ 6.79ರಷ್ಟು ಬೆಳವಣಿಗೆ ದಾಖಲಿಸಿದೆ ಎಂದು ತಿಳಿಸಿದೆ.

ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಶ್ರೀಕೃಷ್ಣನ್ ಎಚ್. ಮಾತನಾಡಿ, 'ಬ್ಯಾಂಕ್ ಚಿಲ್ಲರೆ ವ್ಯಾಪಾರ, ನೇರ ಕಾರ್ಪೊರೇಟ್ ಸಾಲ ವ್ಯವಹಾರ ಅಭಿವೃದ್ಧಿಗೆ ಗಮನ ಕೇಂದ್ರೀಕರಿಸಿದೆ. ಫ್ರಾಂಚೈಸಿ ಹೊಣೆಗಾರಿಕೆ, ಡಿಜಿಟಲ್ ವ್ಯವಹಾರದಲ್ಲಿ ಉತ್ತಮ ಸ್ಥಾನದಲ್ಲಿದೆ' ಎಂದರು.

'ಚಿಲ್ಲರೆ ವ್ಯವಹಾರವು ಬ್ಯಾಂಕ್ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ' ಎಂದು ಕಾರ್ಯ ನಿರ್ವಾಹಕ ನಿರ್ದೇಶಕ ಶೇಖರ್ ರಾವ್ ತಿಳಿಸಿದರು.

ಇಸ್ರೇಲ್ ದಾಳಿ: ಗಾಜಾದಲ್ಲಿ 70 ಸಾವು

ದೀರ್ ಅಲ್‌–ಬಲಾಹ್ (ಎಪಿ): ಇಸ್ರೇಲ್ ಸೇನೆಯು ಗಾಜಾದ ಮೇಲೆ ಬುಧವಾರ ಬೆಳಗಿನ ಜಾವ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ 22 ಮಕ್ಕಳು ಸೇರಿ 70 ಮಂದಿ ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕದ ಮಧ್ಯಸ್ಥಿಕೆಯಲ್ಲಿ ನಡೆದ ಒಪ್ಪಂದದಂತೆ ಹಮಾಸ್ ಬಂಡುಕೋರರು ಇಸ್ರೇಲ್–ಅಮೆರಿಕದ ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ ಬೆನ್ನಲ್ಲೇ, ಈ ಬೆಳವಣಿಗೆ ನಡೆದಿದೆ.

ಟ್ರಂಪ್ ಅವರು ಸೌದಿ ಅರೇಬಿಯಾ ಪ್ರವಾಸ ಕೈಗೊಂಡಿದ್ದು, ಈ ಸಂದರ್ಭದಲ್ಲಿ ಗಾಜಾಕ್ಕೆ ಮಾನವೀಯ ನೆರವು ಮುಂದುವರಿಸುವ ಅಥವಾ ಕದನ ವಿರಾಮಕ್ಕೆ ಒಪ್ಪಂದ ಏರ್ಪಡಬಹುದು ಎಂಬ ಭರವಸೆಯ ನಡುವೆಯೇ, ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ.

ದಾಳಿಯ ಕುರಿತು ಹೇಳಿಕೆ ನೀಡಲು ಇಸ್ರೇಲ್ ಸೇನೆ ನಿರಾಕರಿಸಿದೆ. ಆದರೆ, ಜಬಲಿಯಾ ಪ್ರದೇಶದಲ್ಲಿರುವ ಹಮಾಸ್ ಬಂಡುಕೋರರ ಮೂಲ ಸೌಕರ್ಯಗಳನ್ನು ನಾಶ ಮಾಡಲು ರಾಕೆಟ್ ಸೇರಿದಂತೆ ಇನ್ನಿತರ ದಾಳಿ ನಡೆಸಲಾಗುವುದು. ಹೀಗಾಗಿ, ಈ ಪ್ರದೇಶದಲ್ಲಿರುವ ಜನರು ಬೇರೆ ಕಡೆ ತೆರಳಬೇಕು ಎಂದು ಮಂಗಳವಾರ ರಾತ್ರಿ ಎಚ್ಚರಿಕೆ ನೀಡಿತ್ತು.

ಪಾಕ್ ಧ್ವಜ ಮಾರಾಟ ಕಂಪನಿಗಳಿಗೆ ನೋಟಿಸ್

ನವದೆಹಲಿ: ಪಾಕಿಸ್ತಾನದ ಧ್ವಜಗಳು ಮತ್ತು ಸಂಬಂಧಿತ ಸರಕುಗಳನ್ನು ಭಾರತದಲ್ಲಿ ಮಾರಾಟ ಮಾಡಿರುವ ಸಂಬಂಧ ಇ-ಕಾಮರ್ಸ್ ಕಂಪನಿಗಳಾದ ಅಮೆಜಾನ್, ಫ್ಲಿಪ್‌ಕಾರ್ಟ್, ಉಬುಯಿಇಂಡಿಯಾ, ಎಟ್ಸಿ, ದಿ ಫ್ಲಾಗ್ ಕಂಪನಿ ಮತ್ತು ದಿ ಫ್ಲಾಗ್ ಕಾರ್ಪೊರೇಶನ್‌ಗೆ ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರ (ಸಿಸಿಪಿಎ) ಔಪಚಾರಿಕ ನೋಟಿಸ್ ಜಾರಿಗೊಳಿಸಿದೆ

ಪಾಕಿಸ್ತಾನದ ಧ್ವಜ ಮತ್ತು ಸಂಬಂಧಿತ ಸರಕುಗಳನ್ನು ತಮ್ಮ ಮಾರಾಟದ ಪಟ್ಟಿಯಿಂದ ತಕ್ಷಣವೇ ಜಾರಿಗೆ ಬರುವಂತೆ ತೆಗೆದುಹಾಕಲು ಮತ್ತು ಕಾನೂನುಗಳನ್ನು ಪಾಲಿಸಲು ಈ ಕಂಪನಿಗಳಿಗೆ ಸಿಸಿಪಿಎ ನಿರ್ದೇಶಿಸಿದೆ.

ಸಿಜೆಐ ಆಗಿ ನ್ಯಾ. ಗವಾಯಿ ಪ್ರಮಾಣ

ಒಂದನೇ ಪುಟದಿಂದ...

ಉಪರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ, ಸಂಪುಟದ ಸಚಿವರು ಹಾಗೂ ನಿವೃತ್ತ ನ್ಯಾಯಮೂರ್ತಿಗಳು ಕೂಡ ಸಿಜೆಐ ಗವಾಯಿ ಅವರನ್ನು ಅಭಿನಂದಿಸಿದರು.

ಪರಿಚಯ: ನ್ಯಾಯಮೂರ್ತಿ ಗವಾಯಿ ಅವರು ಮಹಾರಾಷ್ಟ್ರದ ಅಮರಾವತಿಯಲ್ಲಿ 1960 ನವೆಂಬರ್ 24ರಂದು ಜನಿಸಿದರು. 2003ರ ನವೆಂಬರ್ 14ರಂದು ಬಾಂಬೆ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 2005ರ ನವೆಂಬರ್ 12ರಂದು ಹೈಕೋರ್ಟ್‌ನ ಕಾಯಂ ನ್ಯಾಯಮೂರ್ತಿಯಾದರು.

'ಪರಿಶ್ರಮ, ಬಡವರ ಸೇವೆ ತುಡಿತಕ್ಕೆ ಸಿಕ್ಕ ಫಲ'

ಒಂದನೇ ಪುಟದಿಂದ...

'ನನ್ನ ಮಕ್ಕಳು ಅವರ ತಂದೆ ಹಾಕಿಕೊಟ್ಟ ಮಾರ್ಗದಲ್ಲಿ ನಡೆದು, ಸಮಾಜ ಮತ್ತು ಜನರ ಸೇವೆ ಮಾಡಬೇಕು. ಎಲ್ಲರಿಗೂ ನ್ಯಾಯ ದೊರಕಿಸಿಕೊಡಬೇಕು ಎಂಬುದು ಒಬ್ಬ ತಾಯಿಯಾಗಿ ನನ್ನ ಬಯಕೆಯಾಗಿತ್ತು' ಎಂದೂ ಹೇಳಿದ್ದಾರೆ.

ಸಿಜೆಐ ಗವಾಯಿ ಅವರ ತಂದೆ, ದಿವಂಗತ ಆರ್.ಎಸ್. ಗವಾಯಿ ಅವರು ಬಿಹಾರ, ಕೇರಳ ಹಾಗೂ ಸಿಕ್ಕಿಂ ರಾಜ್ಯಪಾಲರಾಗಿದ್ದರು. ರಾಜ್ಯಪಾಲ ಹುದ್ದೆಗೇರುವ ಮುನ್ನ ಅವರ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಪ್ರಮುಖ ನಾಯಕರಾಗಿದ್ದರು.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ	
ಚಾಲಿ	37729-42129
ಚಿಪ್ಪು	3099-28099
ಕೋಕ	4199-18099
ಹೊಸಚಾಲಿ	39599-40899
ಶಿವಮೊಗ್ಗ	
ಬೆಟ್ಟೆ	50100-58300
ಗೊರಬಲು	16099-28658
ರಾಶಿ	48272-57099
ಸರಕು	60799-86600
ಸಿದ್ದಾಪುರ	
ಬಿಳಿಗೋಟು	25899-31609
ಚಾಲಿ	34009-41009
ಕೋಕ	15099-25299
ಕೆಂಪುಗೋಟು	20119-23099
ರಾಶಿ	42099-46299
ತಟ್ಟಿಬೆಟ್ಟೆ	27909-42819
ಶಿರಸಿ	
ಬೆಟ್ಟೆ	30209-43699
ಬಿಳಿಗೋಟು	18622-31989
ಚಾಲಿ	34501-43399
ಕೆಂಪುಗೋಟು	19199-24599
ರಾಶಿ	42479-47891
ತುಮಕೂರು	
ರಾಶಿ	52000-53600

21 ದಿನದ ಕಾರ್ಯಾಚರಣೆಯಲ್ಲಿ 31 ನಕ್ಸಲರ ಹತ್ಯೆ: ಸಿಆರ್‌ಪಿಎಫ್

ಬಿಜಾಪುರ (ಛತ್ತೀಸಗಢ) (ಪಿಟಿಐ): ಛತ್ತೀಸಗಢ-ತೆಲಂಗಾಣ ಗಡಿಯಲ್ಲಿರುವ ಕರ್ರೆಗುಟ್ಟಾ ಬೆಟ್ಟಗಳ ಸುತ್ತಮುತ್ತಲಿನ ದಟ್ಟ ಅರಣ್ಯಗಳಲ್ಲಿ ಕೇಂದ್ರ ಮತ್ತು ರಾಜ್ಯ ಭದ್ರತಾ ಪಡೆಗಳು 21 ದಿನಗಳ ಕಾಲ ನಡೆಸಿದ ಸಮಗ್ರ ಕಾರ್ಯಾಚರಣೆಯಲ್ಲಿ 31 ನಕ್ಸಲರನ್ನು ಹತ್ಯೆ ಮಾಡಲಾಗಿದೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ಇದು ಮಾವೋವಾದಿ ಭೀತಿಯ 'ಅಂತ್ಯದ ಆರಂಭ' ಎಂದು ಅವರು ಪ್ರತಿಪಾದಿಸಿದ್ದಾರೆ.

ಏಪ್ರಿಲ್ 21 ರಂದು ಪ್ರಾರಂಭವಾದ ಈ ಕಾರ್ಯಾಚರಣೆಯಲ್ಲಿ ನಮ್ಮ ಪಡೆಗಳು 31 ನಕ್ಸಲರ ಶವಗಳನ್ನು ವಶಪಡಿಸಿಕೊಂಡಿವೆ. ಇದರಲ್ಲಿ 28 ನಕ್ಸಲರ ಗುರುತು ಸಿಕ್ಕಿದೆ ಎಂದು ಸಿಆರ್‌ಪಿಎಫ್ ಮಹಾನಿರ್ದೇಶಕ ಜಿ.ಪಿ. ಸಿಂಗ್ ಮತ್ತು ಛತ್ತೀಸಗಢದ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಅರುಣ್ ದೇವ್ ಗೌತಮ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

'ಒಬ್ಬೊಬ್ಬರ ತಲೆ ಮೇಲೆ ₹1.72 ಕೋಟಿ ಬಹುಮಾನ ಇದ್ದ ನಕ್ಸಲರನ್ನು ಹತ್ಯೆ ಮಾಡಲಾಗಿದೆ. ಭದ್ರತಾ ಪಡೆಗಳು ಭಾರಿ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿವೆ. ಅಲ್ಲದೆ, ಶಸ್ತ್ರಾಸ್ತ್ರಗಳು ಮತ್ತು ಕಚ್ಚಾ ಬಾಂಬುಗಳನ್ನು ತಯಾರಿಸಲು ನಕ್ಸಲರು ಬಳಸುತ್ತಿದ್ದ ನಾಲ್ಕು ತಾಂತ್ರಿಕ ಘಟಕಗಳನ್ನು ನಾಶಪಡಿಸಲಾಗಿದೆ' ಎಂದು ಛತ್ತೀಸಗಢದ ಎಡಿಜಿಪಿ (ನಕ್ಸಲ್ ವಿರೋಧಿ ಕಾರ್ಯಾಚರಣೆಗಳು) ವಿವೇಕಾನಂದ ತಿಳಿಸಿದ್ದಾರೆ.

ವೈದ್ಯರು, ಶುಶ್ರೂಷಕರ ವೇತನ ಪರಿಷ್ಕರಣೆ

ಒಂದನೇ ಪುಟದಿಂದ...

'ಎಂಬಿಬಿಎಸ್ ವೈದ್ಯರ ವೇತನ ಈಗ ₹46,895ರಿಂದ ₹50 ಸಾವಿರ ವಿದೆ. ಅದನ್ನು ₹60 ಸಾವಿರಕ್ಕೆ ಹೆಚ್ಚಿಸಲಾಗಿದೆ. ತಜ್ಞ ವೈದ್ಯರ ವೇತನವು ₹1.10 ಲಕ್ಷದಿಂದ ₹1.30 ಲಕ್ಷವಿದ್ದು, ಅದನ್ನು ₹1.40 ಲಕ್ಷಕ್ಕೆ ಪರಿಷ್ಕರಿಸಲಾಗಿದೆ. ಶುಶ್ರೂಷಕರ ವೇತನವು ₹14,186ರಿಂದ ₹18,774 ಇದ್ದು, ಪರಿಷ್ಕೃತ ವೇತನವನ್ನು ₹22 ಸಾವಿರಕ್ಕೆ ಏರಿಸಲಾಗಿದೆ' ಎಂದರು.

'ತಜ್ಞ ವೈದ್ಯರ ಹುದ್ದೆಗೆ ಅನುಭವ ಹೊಂದಿದ ಅಭ್ಯರ್ಥಿಗಳು ಆಯ್ಕೆಯಾದಲ್ಲಿ, ಪ್ರತಿ ವರ್ಷ ಅನುಭವಕ್ಕೆ ಅನುಗುಣವಾಗಿ ವೇತನದಲ್ಲಿ ಶೇ 2.5ರಷ್ಟು ಹೆಚ್ಚಳ ಮಾಡಲಾಗುವುದು. ಪರಿಷ್ಕೃತ ವೇತನವು ಹೊಸದಾಗಿ ನೇಮಕಗೊಂಡ ಸಿಬ್ಬಂದಿಗೆ ಮಾತ್ರ ಅನ್ವಯಿಸಲಿದೆ. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಹಾಲಿ ಪಡೆಯುತ್ತಿರುವ ವೇತನ ಶ್ರೇಣಿಯಲ್ಲಿಯೇ ಮುಂದುವರಿಯುತ್ತಾರೆ. ಅವರು ರಾಜೀನಾಮೆ ಸಲ್ಲಿಸಿ, ಹೊಸ ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಅನುಭವದ ಆಧಾರದ ಮೇಲೆ ಆದ್ಯತೆ ನೀಡಲಾಗುತ್ತದೆ' ಎಂದು ಹೇಳಿದರು.

'ಶೀಘ್ರ ವೇತನ ಪಾವತಿ'

ಒಂದನೇ ಪುಟದಿಂದ...

'ಆರ್ಥಿಕ ವರ್ಷದ ಆರಂಭದಲ್ಲೇ ಕೇಂದ್ರದಿಂದ ಅನುದಾನ ಬಿಡುಗಡೆಯಾಗುತ್ತಿಲ್ಲ. ಆದರೆ, ಈ ಹಿಂದೆ ನಮ್ಮಲ್ಲಿ ಲಭ್ಯವಿರುವ ಅನುದಾನದಡಿಯೇ ವೇತನ ಪಾವತಿಸುತ್ತಿದ್ದೆವು. ಬಳಿಕ ಕೇಂದ್ರದಿಂದ ಹಣ ಬರುತ್ತಿತ್ತು. ಆದರೆ, ಈ ವರ್ಷ ಎನ್‌ಎಚ್‌ಎಂ ಕಾರ್ಯಕ್ರಮಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಿ, ಶೇ 95ರಷ್ಟು ಅನುದಾನ ಬಳಕೆ ಮಾಡಲಾಗಿದೆ. ಆದ್ದರಿಂದ ವೇತನ ವಿಳಂಬವಾಗಿದೆ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Hassan

ಕಮರ್ಷಿಯಲ್ ನಾರ್ತ್ ಈಸ್ಟ್ ಕಾರ್ನರ್ KHB ಸೈಟ್ ಮಾರಾಟಕ್ಕೆ ಇದೆ, ಹೊಸ ಬಸ್ ನಿಲ್ದಾಣದ ಎದುರು ಹಾಸನ ಸಂಪರ್ಕಿಸಿ 6361444146

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
*Conditions apply
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9731810277
9886213331
9845114560

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು
ಫೋನ್: 080–22032275 / 22032290
ಸಂ:ಅಪಜೀ 38 ಇಎನ್‌ಜಿ 2025 ದಿನಾಂಕ: 14.05.2025
2024–25ರ ರಾಜ್ಯ ಪರಿಸರ ಪ್ರಶಸ್ತಿಗಾಗಿ ಅರ್ಜಿ/ನಾಮನಿರ್ದೇಶನಕ್ಕಾಗಿ ಆಹ್ವಾನ
ಕರ್ನಾಟಕ ಸರ್ಕಾರದ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯು 2024–25ನೇ ಸಾಲಿನ ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿಗಳಿಗಾಗಿ ಅರ್ಜಿಗಳನ್ನು/ ನಾಮನಿರ್ದೇಶನಗಳನ್ನು ಆಹ್ವಾನಿಸಿ ಪರಿಸರ ಸಂರಕ್ಷಣೆ ಮತ್ತು ಪರಿಸರ ವ್ಯವಸ್ಥಾಪನೆಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ (ಸರ್ಕಾರಿ/ ಸರ್ಕಾರೇತರ ಸಂಸ್ಥೆಗಳು/ ಕಂಪನಿಗಳು/ ಟ್ರಸ್ಟ್‌ಗಳು) ತಲಾ ಒಂದು ಲಕ್ಷ. ರೂ.ನಗದು ಹಾಗೂ ಪ್ರಶಸ್ತಿ ಪ್ರಮಾಣ ಪತ್ರವನ್ನು ನೀಡಲಾಗುವುದು. ಅರ್ಜಿ/ ನಾಮನಿರ್ದೇಶನ ಸಲ್ಲಿಸಲು ಕೊನೆಯ ದಿನಾಂಕ: **31.05.2025** ಆಗಿರುತ್ತದೆ.
ಭರ್ತಿ ಮಾಡಿದ ಅರ್ಜಿಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಜೀವಿ ಪರಿಸ್ಥಿತಿ ಮತ್ತು ಪರಿಸರ), **ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ,** ಕೊಠಡಿ ಸಂಖ್ಯೆ 709, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, 4ನೇ ಹಂತ, ಬೆಂಗಳೂರು–560001, ಇಲ್ಲಿ ಸಲ್ಲಿಸುವುದು. ವಿವರಗಳಿಗಾಗಿ **ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್ ಕಛೇರಿ, ಉಪಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಎಲ್ಲಾ ಪ್ರಾದೇಶಿಕ ಕಛೇರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,** ಪರಿಸರ ಭವನ, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು– 560 001, ಮಹಾನಿರ್ದೇಶಕರು, **ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ,** 'ಹಸಿರು ಭವನ', ದೊರೆಸಾನಿಪಾಳ್ಯ ಫಾರೆಸ್ಟ್ ಕ್ಯಾಂಪಸ್ ವಿನಾಯಕನಗರ ಸರ್ಕಲ್ ಜೆ.ಪಿ.ನಗರ 5ನೇ ಫೇಸ್ ಬೆಂಗಳೂರು–560 078, ಸದಸ್ಯ ಕಾರ್ಯದರ್ಶಿ, **ಕರ್ನಾಟಕ ಜೀವ ವೈವಿಧ್ಯ ಮಂಡಳಿ,** ನೆಲಮಹಡಿ, ವನವಿಕಾಸ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು –560 003, ಈ ಕಛೇರಿಗಳಲ್ಲಿ ಸಂಪರ್ಕಿಸಬಹುದು ಹಾಗೂ ಈ ಕೆಳಕಂಡ ವೆಬ್‌ಸೈಟ್‌ಗಳಲ್ಲಿ ಸಹ ನೋಡಬಹುದು https://forest.karnataka.gov.in, www.kspcb.gov.in, www.karataka.gov.in/ empri ಮತ್ತು https://kbbwebportal.karnatka. gov.in
(ವಿ.ಸೂ: ಪ್ರಶಸ್ತಿಗಾಗಿ ಸಲ್ಲಿಸಿದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ). ಅರ್ಜಿಗಳನ್ನು ಸಾಮಾನ್ಯ ಅಂಚೆ/ನೋಂದಾಯಿತ ಅಂಚೆ ಸ್ವೀಕೃತಿ /ಸ್ಪೀಡ್ ಪೋಸ್ಟ್ ಅಥವಾ ಕೋರಿಯರ್ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಅರ್ಜಿದಾರರು ಅಥವಾ ಅವರ ಸಂಬಂಧಿಕರು ಅಥವಾ ಅವರ ಪರಿಚಯಸ್ಥರು ವೈಯಕ್ತಿಕವಾಗಿ ತರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
ಸಹಿ/–
(ಬಿ ಎನ್ ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ,
(ಜೀವಿ ಪರಿಸ್ಥಿತಿ ಮತ್ತು ಪರಿಸರ)
ವಾಸಾಸಂಇ/ವಾಪ್ರ/ಜಿಎ/655/2025–26

ವರದಕ್ಷಿಣೆ ನಿಷೇಧ ಕಾಯ್ದೆ

ದುರ್ಬಳಕೆ ನೋವು ತಂದಿದೆ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ವೈವಾಹಿಕ ವಿಚಾರಗಳಿಗೆ ಸಂಬಂಧಿಸಿ ವರದಕ್ಷಿಣೆ ಕಾಯ್ದೆಗಳನ್ನು ದುರ್ಬಳಕೆ ಮಾಡುತ್ತಿರುವ ಪರಿಯನ್ನು ನೋಡಿ ನ್ಯಾಯಾಲಯ ತೀವ್ರವಾಗಿ ನೊಂದಿದೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಪತಿಯ ವಯಸ್ಸಾದ ಪಾಲಕರು, ದೂರದ ಸಂಬಂಧಿಗಳು, ಮದುವೆ ನಂತರ ಪ್ರತ್ಯೇಕವಾಗಿಯೇ ವಾಸ ಮಾಡುತ್ತಿರುವ ಆತನ ಸಹೋದರಿಯರನ್ನು ಆರೋಪಿಗಳ ಸ್ಥಾನದಲ್ಲಿ ನಿಲ್ಲಿಸಿ, ತೊಂದರೆ ನೀಡುವ ದುರುದ್ದೇಶದಿಂದ ದೂರುದಾರ ಪತ್ನಿಯರು ವರದಕ್ಷಿಣೆ ನಿಷೇಧ ಕಾಯ್ದೆ ದುರ್ಬಳಕೆ ಮಾಡುವುದು ಹೆಚ್ಚುತ್ತಿದೆ' ಎಂದಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನಾ ಹಾಗೂ ಸತೀಶ್ಚಂದ್ರ ಶರ್ಮಾ ಅವರು ಇದ್ದ ನ್ಯಾಯಪೀಠ, ಮಂಗಳವಾರ ನೀಡಿರುವ ತೀರ್ಪಿನಲ್ಲಿ ಈ ಮಾತು ಹೇಳಿದೆ.

'ವರದಕ್ಷಿಣೆ ಕಿರುಕುಳದಿಂದ ಮಹಿಳೆಯನ್ನು ರಕ್ಷಿಸುವುದಕ್ಕಾಗಿ ರೂಪಿಸಿರುವ ಕಾಯ್ದೆಯ ಉದ್ದೇಶವನ್ನೇ ಇಂತಹ ಪ್ರವೃತ್ತಿ ದುರ್ಬಲಗೊಳಿಸುತ್ತಿದೆ' ಎಂದು ನ್ಯಾಯಪೀಠ ಹೇಳಿದೆ.

ತಾನು ತಪ್ಪಿತಸ್ಥ ಎಂದು ವಿಚಾರಣಾ ನ್ಯಾಯಾಲಯದ ಆದೇಶ ಎತ್ತಿ ಹಿಡಿದು ಅಲಹಾಬಾದ್ ಹೈಕೋರ್ಟ್ ನೀಡಿದ್ದ ಆದೇಶ ಪ್ರಶ್ನಿಸಿ ಲಖನೌದ ರಾಜೇಶ್ ಛಡ್ಡಾ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

'ದೂರುದಾರ ಮಹಿಳೆ ಮತ್ತು ಆಕೆಯ ತಂದೆ ನೀಡಿದ ಹೇಳಿಕೆಗಳನ್ನು ಹೊರತುಪಡಿಸಿದಂತೆ, ಪತಿ ವಿರುದ್ಧ ಮಾಡಿರುವ ಆರೋಪಗಳನ್ನು ಸಾಬೀತುಪಡಿಸುವಂತೆ ಯಾವುದೇ ಸಾಕ್ಷ್ಯಗಳನ್ನು ದೂರುದಾರ ಮಹಿಳೆ ಒದಗಿಸಿಲ್ಲ' ಎಂದು ಪೀಠ ಹೇಳಿದೆ.

'ಮೇಲ್ಮನವಿದಾರನ ಮದುವೆ ಅನೂರ್ಜಿತಗೊಂಡಿದೆ ಹಾಗೂ ವಿಚ್ಛೇದನ ಡಿಕ್ರಿ ಕೂಡ ಅಂತಿಮ ಹಂತದಲ್ಲಿದೆ. ಹೀಗಾಗಿ ಮೇಲ್ಮನವಿದಾರನ ವಿರುದ್ಧ ಕೈಗೊಳ್ಳುವ ಯಾವುದೇ ವಿಚಾರಣೆಯು ಕಾನೂನಿನ ದುರ್ಬಳಕೆಗೆ ಸಮವಾಗುತ್ತದೆ' ಎಂದು ಹೇಳಿದೆ.

'ದೂರುದಾರರಿಗೆ ಘನತೆ ತೋರಿ'

'ಪೊಲೀಸ್ ಠಾಣೆಗೆ ದೂರು ನೀಡಲು ಬರುವ ಯಾವುದೇ ವ್ಯಕ್ತಿಯನ್ನು ಅಪರಾಧಿಯಂತೆ ನಡೆಸಿಕೊಳ್ಳಬಾರದು. ಅವರನ್ನು ಘನತೆಯಿಂದ ನಡೆಸಿಕೊಳ್ಳಬೇಕು. ಇದು ಸಂವಿಧಾನದ 21ನೇ ವಿಧಿಯು ನೀಡಿರುವ ಅವರ ಮೂಲಭೂತ ಹಕ್ಕು ಕೂಡ ಆಗಿದೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ದೂರುದಾರರೊಬ್ಬರಿಗೆ ಅಸಭ್ಯ ಭಾಷೆಯನ್ನು ಬಳಸಿದ್ದಕ್ಕಾಗಿ ₹2 ಲಕ್ಷ ಪರಿಹಾರ ಪಾವತಿಸುವಂತೆ ಪೊಲೀಸ್ ಇನ್‌ಸ್ಪೆಕ್ಟರ್‌ವೊಬ್ಬರಿಗೆ ನೀಡಿರುವ ದಂಡದ ಶಿಕ್ಷೆಯನ್ನು ಎತ್ತಿಹಿಡಿದ ನ್ಯಾಯಮೂರ್ತಿ ಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಾನ್ ಅವರನ್ನೊಳಗೊಂಡ ಪೀಠವು, 'ಈ ಪ್ರಕರಣದಲ್ಲಿನ ಅಂಶಗಳು ಅತ್ಯಂತ ಆಘಾತಕಾರಿಯಾಗಿವೆ' ಎಂದು ಹೇಳಿದೆ.

ತಮಿಳುನಾಡಿನ ವಿರ್ತುನಗರ ಜಿಲ್ಲೆಯ ಶ್ರೀವಿಲ್ಲಿಪುತ್ತೂರ್ ಟೌನ್ ಪೊಲೀಸ್ ಠಾಣೆಯ (ಕ್ರೈಮ್) ಪೊಲೀಸ್ ಇನ್‌ಸ್ಪೆಕ್ಟರ್ ಆಗಿ ನೇಮಕಗೊಂಡಿದ್ದ ಮೇಲ್ಮನವಿದಾರ ಪಾವುಲ್ ಯೇಸುದಾಸನ್, ಎಫ್‌ಐಆರ್ ದಾಖಲಿಸಲು ನಿರಾಕರಿಸಿದ್ದು ಮಾತ್ರವಲ್ಲ, ದೂರುದಾರರ ತಾಯಿಯೊಂದಿಗೆ ಮಾತನಾಡುವಾಗ ಬಹಳ ಆಕ್ಷೇಪಾರ್ಹ ಮತ್ತು ನಿಂದನೀಯ ಭಾಷೆಯನ್ನು ಬಳಸಿದ್ದಾರೆ' ಎಂದು ನ್ಯಾಯಪೀಠ ಹೇಳಿದೆ.

'ಅಪರಾಧದ ಬಗ್ಗೆ ದೂರು ನೀಡಲು ಪೊಲೀಸ್ ಠಾಣೆಗೆ ಬರುವವರನ್ನು ಘನತೆಯಿಂದ ನಡೆಸಿಕೊಳ್ಳಬೇಕು. ಇದು ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಮೂಲಭೂತ ಹಕ್ಕಾಗಿದೆ. ಅಪರಾಧದ ಬಗ್ಗೆ ದೂರು ನೀಡಲು ಬರುವ ನಾಗರಿಕನನ್ನು ಅಪರಾಧಿಯಂತೆ ಪರಿಗಣಿಸಬಾರದು' ಎಂದು ಪೀಠವು ಹೇಳಿದ್ದು, ಮೇಲ್ಮನವಿದಾರರ ಅರ್ಜಿಯನ್ನು ವಜಾಗೊಳಿಸಿತು.

ಸಿತಾರೆ ಜಮೀನ್ ಪರ್ ಟ್ರೇಲರ್ ರಿಲೀಸ್

ನಟ ಅಮಿರ್ ಖಾನ್ ನಟಿಸಿ, ನಿರ್ಮಾಣ ಮಾಡಿರುವ 'ಸಿತಾರೆ ಜಮೀನ್ ಪರ್' ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ. ಸಿನಿಮಾ ಜೂನ್ 20ರಂದು ಬಿಡುಗಡೆಯಾಗಲಿದೆ. ಸಿನಿಮಾದಲ್ಲಿ ಅಮೀರ್ ಖಾನ್ ಬಾಸ್ಕೆಟ್ ಬಾಲ್ ಕೋಚ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಆರ್.ಎಸ್.ಪ್ರಸನ್ನ ಈ ಸಿನಿಮಾ ನಿರ್ದೇಶಿಸಿದ್ದಾರೆ.

ಕೈ ತುಂಬಾ ಚಿತ್ರಗಳು ತಲೆ ತುಂಬಾ ಕನಸುಗಳು



ಮಿತ್ರ

ಹಾಸ್ಯ ನಟ, ನಿರ್ಮಾಪಕ ಮಿತ್ರ ಕೈಯಲ್ಲಿ ಸದ್ಯ ಸಾಲು, ಸಾಲು ಸಿನಿಮಾಗಳಿವೆ. 'ಕರಳೆ', 'ಕರಾವಳಿ' ಮೊದಲಾದ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಇವರು ತಮ್ಮ ಸಿನಿಪಯಣದ ಮೆಲುಕು ಹಾಕಿದ್ದಾರೆ.

● ವಿನಾಯಕ ಕೆ.ಎಸ್

2003 ರಲ್ಲಿ ಶಿವರಾಜ್‌ಕುಮಾರ್ ನಟನೆಯ 'ಶ್ರೀರಾಮ್' ಚಿತ್ರದ ಸಣ್ಣ ಪಾತ್ರದೊಂದಿಗೆ ಚಿತ್ರರಂಗಕ್ಕೆ ಕಾಲಿಟ್ಟ ಮಿತ್ರ, ಜನಪ್ರಿಯರಾಗಿದ್ದು 'ಸಿಲ್ಲಿ ಲಲ್ಲಿ', 'ಪಾಪ ಪಾಂಡು' ಧಾರಾವಾಹಿಗಳಿಂದ. ಈತನಕ 147 ಸಿನಿಮಾಗಳಲ್ಲಿ ನಟಿಸಿರುವ ಇವರು ತಮ್ಮದೇ ಬ್ಯಾನರ್ ಪ್ರಾರಂಭಿಸಿ 'ರಾಗಾ' ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಪ್ರಜ್ವಲ್ ದೇವರಾಜ್ ನಟನೆಯ 'ಕರಾವಳಿ' ಡಬ್ಬಿಂಗ್ ಹಂತದಲ್ಲಿದೆ. ಈ ಚಿತ್ರದಲ್ಲಿ ಮೊದಲ ಸಲ ಖಳನಾಯಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. 'ಕರಳೆ' ಚಿತ್ರೀಕರಣ ನಡೆಯುತ್ತಿದೆ. ಗುರುನಂದನ್ ಅವರ 'ಮಿಸ್ಟರ್ ಜಾಕ್' ಚಿತ್ರದಲ್ಲಿ ಒಂದು ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿರುವೆ. ದುನಿಯಾ ವಿಜಯ್ ಅವರ 'ಲ್ಯಾಂಡ್ ಲಾರ್ಡ್' ಚಿತ್ರದಲ್ಲಿಯೂ ನಟಿಸುತ್ತಿರುವೆ. ಪಿ.ಸಿ.ಶೇಖರ್ ನಿರ್ದೇಶನದ 'ಮಹಾನ್', ಎ.ಪಿ.ಅರ್ಜುನ್ ನಿರ್ಮಾಣದ 'ಲಕ್ಷ್ಮಿದೇವಿ' ಚಿತ್ರಗಳು ಕೈಯಲ್ಲಿವೆ. ಬಹಳ ಕಾಲ ಹಾಸ್ಯಪಾತ್ರಗಳಿಗೆ ಸೀಮಿತವಾಗಿದ್ದೆ. 'ಪರಸಂಗ', 'ರಾಗಾ' ಚಿತ್ರಗಳಲ್ಲಿ ಭಾವನಾತ್ಮಕ ಪಾತ್ರಗಳನ್ನು ಮಾಡಿದೆ. 'ಕರಾವಳಿ' ರಗಡ್ ಲುಕ್‌ನ ಪೋಸ್ಟರ್ ಬಿಡುಗಡೆ ಆದ ಬಳಿಕ ಖಳನಾಯಕನ ಪಾತ್ರಗಳು ಹೆಚ್ಚು ಅರಸಿ ಬರುತ್ತಿವೆ' ಎಂದು ತಮ್ಮ ಸದ್ಯದ ಯೋಜನೆಗಳನ್ನು ವಿವರಿಸಿದರು ಮಿತ್ರ.

1998ರಿಂದ 2005ರವರೆಗೆ ಇವರು ಕೊಡಗಿನ ಪ್ರವಾಸಿಧಾಮದಲ್ಲಿ ಕಲಾವಿದನಾಗಿದ್ದರು. ಪ್ರತಿದಿನ ಸಂಜೆ ಅಲ್ಲಿ 'ಮಿತ್ರ ಸೂತ್ರಧಾರ', 'ಮಿತ್ರ ಪಾತ್ರಧಾರ' ಎಂಬ ಹಾಸ್ಯ ಕಾರ್ಯಕ್ರಮಗಳು ನಡೆಯುತ್ತಿತ್ತು. ಪ್ರವಾಸಿಗರು ಈ ಕಾರ್ಯಕ್ರಮ ನೋಡದಿದ್ದರೆ ಕೊಡಗಿನ ಪ್ರವಾಸವೇ ಅಪೂರ್ಣ ಎಂಬಷ್ಟರ ಮಟ್ಟಿಗೆ ಈ ಕಾರ್ಯಕ್ರಮ ಜನಪ್ರಿಯವಾಗಿತ್ತು.

'ನನ್ನ ಹೆಸರು ಶಿನು ಜಾರ್ಜ್. ಕೊಡಗಿನಲ್ಲಿ ನಾವು ನಡೆಸುತ್ತಿದ್ದ ಹಾಸ್ಯಸಂಜೆಯಿಂದಾಗಿ ಸ್ನೇಹಿತರೆಲ್ಲ ಮಿತ್ರ ಎಂದು ಕರೆಯಲು ಪ್ರಾರಂಭಿಸಿದರು. ಅದೇ ಹೆಸರಿನಿಂದ ಜನಪ್ರಿಯನಾದೆ. 'ಮನಸಾರೆ', 'ಪಂಚರಂಗಿ' ಚಿತ್ರಗಳು ಒಳ್ಳೆಯ ಹೆಸರು ತಂದುಕೊಟ್ಟವು. 'ಸಿಲ್ಲಿ ಲಲ್ಲಿ' ಸೇರಿದಂತೆ ಧಾರಾವಾಹಿಗಳಲ್ಲಿ ಸಾವಿರಾರು ಎಪಿಸೋಡ್‌ಗಳಲ್ಲಿ ನಟಿಸಿ ಮನೆಮಾತಾದೆ' ಎನ್ನುತ್ತಾರೆ.

'ಸಾಮಾನ್ಯ ಕಲಾವಿದನಾಗಿದ್ದವನು. ಹೈಟು, ವೈಟಿಲ್ಲ. ನೋಡಲು ಚೆನ್ನಾಗಿಲ್ಲ. ಭಗವಂತನ ಆಶೀರ್ವಾದ ಮತ್ತು ನಟನೆಯ ಹುಚ್ಚು ಇಲ್ಲಿತನಕ ತಂದು ನಿಲ್ಲಿಸಿದೆ. ಚಿತ್ರರಂಗ ನನಗೆ ಎಲ್ಲವನ್ನೂ ಕೊಟ್ಟಿದೆ. ಎಲ್ಲ ಕಡೆ ಜನ ಗುರುತಿಸುತ್ತಾರೆ. ನಟನೆಗೆ ರಾಜ್ಯ ಪ್ರಶಸ್ತಿ ಲಭಿಸಿದೆ. ಸಾಕಷ್ಟು ಸನ್ಮಾನ, ಪುರಸ್ಕಾರಗಳು ಸಿಕ್ಕಿವೆ. ಇದಕ್ಕೆಲ್ಲ ನಾನು ಯೋಗ್ಯನಾ ಎಂದು ಬಹಳಷ್ಟು ಸಲ ಅನ್ನಿಸುತ್ತದೆ' ಎಂದು ಅವರು ಸ್ವವಿಮರ್ಶೆಗೆ ಇಳಿದರು.

2026ರಲ್ಲಿ ಸ್ಟಾರ್ ನಟರೊಬ್ಬರಿಗೆ ಬೃಹತ್ ಬಜೆಟ್‌ನ ಸಿನಿಮಾ ಮಾಡುವ ಸಿದ್ಧತೆಯಲ್ಲಿದ್ದಾರೆ. 'ನನ್ನದ್ದು ಸುಮ್ಮನೆ ಕೂರುವ ಜಾಯಮಾನವಲ್ಲ. ಏನಾದರೂ ಮಾಡುತ್ತಿರುತ್ತೇನೆ. ನಟನೆ ಜತೆಗೆ ರೆಸಾರ್ಟ್, ಈವೆಂಟ್ ಬಿಸಿನೆಸ್ ಇದೆ. ನಮ್ಮದೇ ನಿರ್ಮಾಣ ಸಂಸ್ಥೆ ಪ್ರಾರಂಭಿಸಿ ಒಂದು ಸಿನಿಮಾ ಮಾಡಿರುವೆ. ಇದೀಗ ಮತ್ತೊಂದು ಸಿನಿಮಾ ಕಾರ್ಯ ಪ್ರಗತಿಯಲ್ಲಿದೆ. ಕಥೆ ಸಿದ್ಧಗೊಂಡು ಸ್ಟಾರ್ ನಟರೊಬ್ಬರ ಡೇಟ್‌ಗಾಗಿ ಕಾಯುತ್ತಿರುವೆ' ಎಂದು ತಮ್ಮ ಮುಂದಿನ ಯೋಜನೆಯನ್ನು ವಿವರಿಸಿದರು.

ಜೂನ್ 13ಕ್ಕೆ 'ಎಡಗೈಯೇ ಅಪಘಾತಕ್ಕೆ ಕಾರಣ'

ದಿಗಂತ್

2022ರಲ್ಲಿ ಸೆಟ್ಟೇರಿದ್ದ ದಿಗಂತ್ ನಟನೆಯ 'ಎಡಗೈಯೇ ಅಪಘಾತಕ್ಕೆ ಕಾರಣ' ಸಿನಿಮಾ ಕೊನೆಗೂ ಬಿಡುಗಡೆಗೆ ಸಜ್ಜಾಗಿದೆ. ಸಿನಿಮಾ ಜೂನ್ 13ರಂದು ತೆರೆಕಾಣಲಿದೆ.

ಹಲವು ಕಾರಣಗಳಿಂದ ಮುಂದೂಡಲ್ಪಡುತ್ತಿದ್ದ ಈ ಸಿನಿಮಾವನ್ನು 'ಶಾಖಾಹಾರಿ' ನಿರ್ಮಾಪಕ ರಾಜೇಶ್ ಕೀಳಂಬಿ ಹಾಗೂ 'ಬ್ಲಿಂಕ್' ನಿರ್ಮಾಪಕ ರವಿಚಂದ್ರನ್ ಎ.ಜೆ ಕೈಗೆತ್ತಿಕೊಂಡು ತೆರೆಗೆ ತರುತ್ತಿದ್ದಾರೆ. ಎಡಗೈ ಬಳಸುವವರನ್ನೇ ಗಮನದಲ್ಲಿಟ್ಟುಕೊಂಡು, ಅವರ ಜೀವನ ಶೈಲಿ ಕುರಿತು ಈ ಚಿತ್ರ ಕಟ್ಟಿಕೊಡಲಾಗಿದೆ. ಎಡಗೈ ಬಳಸುವವರು ಅನುಭವಿಸುವ ಸಮಸ್ಯೆ, ಸಂಕಷ್ಟದ ಸರಮಾಲೆಯೇ ಚಿತ್ರದಲ್ಲಿದೆ. ಚಿತ್ರಕ್ಕೆ ಸಮರ್ಥ್ ಬಿ. ಕಡಕೊಳ್ ಆ್ಯಕ್ಷನ್ ಕಟ್ ಹೇಳಿದ್ದು, ಇದು ಇವರ ನಿರ್ದೇಶನದ ಚೊಚ್ಚಲ ಚಿತ್ರ. ಚಿತ್ರದಲ್ಲಿ ದಿಗಂತ್‌ಗೆ ನಾಯಕಿಯರಾಗಿ ನಿಧಿ ಸುಬ್ಬಯ್ಯ ಮತ್ತು ಧನು ಹರ್ಷ ನಟಿಸಿದ್ದಾರೆ. 'ರಂಗಿತರಂಗ', 'ವಿಕ್ರಾಂತ್ ರೋಣ' ಖ್ಯಾತಿಯ ನಟ ನಿರೂಪ್ ಭಂಡಾರಿ ವಿಶೇಷ ಪಾತ್ರದಲ್ಲಿದ್ದಾರೆ.

'ಬ್ಲಿಂಕ್ ಹಾಗೂ ಶಾಖಾಹಾರಿ ಸಿನಿಮಾಗಳ ನಿರ್ಮಾಪಕರು ನಮ್ಮ ಸಿನಿಮಾ ಜೊತೆ ಕೈಜೋಡಿಸಿದ್ದಾರೆ. ಈ ಸಿನಿಮಾವೂ ಆ ಸಿನಿಮಾಗಳ ರೀತಿಯೇ ಹೆಸರು ಮಾಡಲಿದೆ ಎನ್ನುವ ನಂಬಿಕೆ ಇದೆ. ನನ್ನ ಪಾತ್ರ ಎಡಗೈ ಬಳಸುವ ವ್ಯಕ್ತಿಯದು. ಈ ಸಿನಿಮಾ ಮಾಡುತ್ತಾ ನಾನು ಬಲಗೈ ಬಳಸುವವನೋ, ಎಡಗೈ ಬಳಸುವವನೋ ಎಂಬ ಗೊಂದಲ ಶುರುವಾಗಿತ್ತು. ಭಿನ್ನವಾದ ಕಥಾಹಂದರವನ್ನು ಈ ಸಿನಿಮಾ ಹೊಂದಿದೆ. ನಿಧಿ ಸುಬ್ಬಯ್ಯ ಜೊತೆ 'ಪಂಚರಂಗಿ-2' ಮಾಡೋಣ ಎಂದಿದ್ದೇನೆ. ರಾಜೇಶ್ ಕೀಳಂಬಿ ಅವರೂ ಆಸಕ್ತಿ ತೋರಿದ್ದಾರೆ' ಎಂದಿದ್ದಾರೆ ದಿಗಂತ್.

'S/O ಮುತ್ತಣ್ಣ'ನಿಗೆ ಶರಣ್, ವಿ.ಹರಿಕೃಷ್ಣ ದನಿ

ಪ್ರಣಂ, ರಂಗಾಯಣ ರಘು

ನಟ ದೇವರಾಜ್ ಅವರ ಕಿರಿಯ ಪುತ್ರ ಪ್ರಣಂ ದೇವರಾಜ್ ನಟನೆಯ 'ಸನ್ ಆಫ್ ಮುತ್ತಣ್ಣ' ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದೆ. ಈ ಚಿತ್ರದ 'ಕಮ್ಮಂಗಿ ನನ್ ಮಗನೇ..' ಎಂಬ ಹಾಡೊಂದು ಮೇ 17ರಂದು ಬಿಡುಗಡೆಯಾಗಲಿದ್ದು, ನಟ ಶರಣ್ ಹಾಗೂ ಸಂಗೀತ ನಿರ್ದೇಶಕ ವಿ. ಹರಿಕೃಷ್ಣ ಇದಕ್ಕೆ ದನಿಯಾಗಿದ್ದಾರೆ.

ಈ ಹಾಡನ್ನು ನಿರ್ದೇಶಕ ಯೋಗರಾಜ್ ಭಟ್ ಬರೆದಿದ್ದಾರೆ. ಹಾಡಿಗೆ ಸಚಿನ್ ಬಸ್ರೂರ್ ಸಂಗೀತ ನೀಡಿದ್ದಾರೆ. ರಂಗಾಯಣ ರಘು ಹಾಗೂ ಪ್ರಣಂ ಈ ಹಾಡಿನಲ್ಲಿ ಅಭಿನಯಿಸಿದ್ದಾರೆ. ಚಿತ್ರದ ಮತ್ತೊಂದು ಹಾಡಿಗೆ ಸಂಚಿತ್, ದೀಪ್ತಿ ಸುರೇಶ್ ದನಿಯಾಗಿದ್ದಾರೆ. ಶ್ರೀಕಾಂತ್ ಹುಣಸೂರು ನಿರ್ದೇಶನದ ಈ ಚಿತ್ರದಲ್ಲಿ ತಂದೆ-ಮಗನ ಬಾಂಧವ್ಯದ ಕಥೆಯಿದೆ. ಪ್ರಣಂ ದೇವರಾಜ್ ಅವರಿಗೆ ಖುಷಿ ರವಿ ನಾಯಕಿಯಾಗಿ ಜೋಡಿಯಾಗಿದ್ದಾರೆ. ರಂಗಾಯಣ ರಘು ನಾಯಕನ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸುಚೇಂದ್ರ ಪ್ರಸಾದ್, ಗಿರೀಶ್ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಪುರಾತನ ಫಿಲಂಸ್ ಹಾಗೂ ಎಸ್‌ಆರ್‌ಕೆ ಫಿಲಂಸ್ ಜಂಟಿಯಾಗಿ ಈ ಸಿನಿಮಾ ನಿರ್ಮಾಣ ಮಾಡಿದೆ.

ಶರಣ್

ಸಚಿವ ವಿರುದ್ಧ ಎಫ್‌ಐಆರ್‌ಗೆ ಆದೇಶ

ಮಧ್ಯಪ್ರದೇಶ: ಕರ್ನಲ್ ಸೋಫಿಯಾ ಬಗ್ಗೆ ಸಚಿವ ಶಾ ವಿವಾದಾತ್ಮಕ ಹೇಳಿಕೆಗೆ ಹೈಕೋರ್ಟ್ ಕಿಡಿ

ಜಬಲ್ಪುರ(ಮಧ್ಯಪ್ರದೇಶ)(ಪಿಟಿಐ): ಕರ್ನಲ್ ಸೋಫಿಯಾ ಖುರೇಷಿ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ ಎನ್ನಲಾದ ಸಚಿವ ಹಾಗೂ ಬಿಜೆಪಿ ಮುಖಂಡ ವಿಜಯ್ ಶಾ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ರಾಜ್ಯ ಪೊಲೀಸರಿಗೆ ಮಧ್ಯಪ್ರದೇಶ ಹೈಕೋರ್ಟ್ ಬುಧವಾರ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಅತುಲ್ ಶ್ರೀಧರನ್ ಹಾಗೂ ಅನುರಾಧಾ ಶುಕ್ಲಾ ಅವರು ಇರುವ ವಿಭಾಗೀಯ ಪೀಠವು, ಈ ಆದೇಶ ನೀಡಿದೆ.

'ಬುಧವಾರ ಸಂಜೆ 6ರ ಒಳಗಾಗಿ ಸಚಿವ ಶಾ ವಿರುದ್ಧ ಎಫ್‌ಐಆರ್ ದಾಖಲಿಸಿ, ಈ ಕುರಿತು ನ್ಯಾಯಾಲಯಕ್ಕೆ ಮಾಹಿತಿ ನೀಡಬೇಕು. ಗುರುವಾರ ಬೆಳಿಗ್ಗೆ 10.30ಕ್ಕೆ ವಿಚಾರಣೆ ನಡೆಸಲಾಗುವುದು' ಎಂದು ವಿಭಾಗೀಯ ಪೀಠವು ಆದೇಶದಲ್ಲಿ ಹೇಳಿದೆ.

ಸಚಿವ ಶಾ ನೀಡಿದ್ದಾರೆ ಎನ್ನಲಾದ ವಿವಾದಾತ್ಮಕ ಹೇಳಿಕೆ ಕುರಿತು ಹೈಕೋರ್ಟ್ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಸಶಸ್ತ್ರ ಪಡೆಗಳು ಆರಂಭಿಸಿರುವ 'ಆಪರೇಷನ್ ಸಿಂಧೂರ' ಕುರಿತು ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಹಾಗೂ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಅವರೊಂದಿಗೆ ಕರ್ನಲ್ ಖುರೇಷಿ ಅವರು ಕೂಡ ಮಾಹಿತಿ ನೀಡುತ್ತಿದ್ದರು.

ಕರ್ನಲ್ ಸೋಫಿಯಾ ಖುರೇಷಿ ಕುರಿತು ಮಧ್ಯಪ್ರದೇಶ ಸಚಿವ ವಿಜಯ್ ಶಾ ಆಕ್ಷೇಪಾರ್ಹ ಹೇಳಿಕೆ ನೀಡಿರುವುದನ್ನು ಖಂಡಿಸಿ ಉತ್ತರಾಖಂಡದ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಜ್ಯೋತಿ ರೌಟೇಲಾ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತೆಯರು ಡೆಹ್ರಾಡೂನ್‌ನಲ್ಲಿ ಬುಧವಾರ ಪ್ರತಿಭಟಿಸಿದರು —ಪಿಟಿಐ ಚಿತ್ರ



ಸೇನೆಯ ಮಹಿಳಾ ಅಧಿಕಾರಿಯನ್ನು ಅಗೌರವಿಸುವುದು ಒಪ್ಪಲಾಗದು. ಸಚಿವ ವಿಜಯ್ ಶಾ ಅವರನ್ನು ಕೂಡಲೇ ಸಂಪುಟದಿಂದ ವಜಾ ಮಾಡಬೇಕು ಹಾಗೂ ಬಿಜೆಪಿ ವರಿಷ್ಠರು ಈ ವಿಚಾರವಾಗಿ ಕ್ಷಮೆ ಕೋರಬೇಕು. ಇಂತಹ ಹೇಳಿಕೆಗಳು ಭಾರತೀಯ ಸಶಸ್ತ್ರ ಪಡೆಗಳ ಘನತೆಗೆ ಮಸಿ ಬಳಿಯುತ್ತವೆ

ಸಚಿನ್ ಪೈಲಟ್, ಎಐಸಿಸಿ ಪ್ರಧಾನ ಕಾರ್ಯದರ್ಶಿ

ಕರ್ನಲ್ ಖುರೇಷಿ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿರುವ ಮಧ್ಯಪ್ರದೇಶ ಸಚಿವ ವಿಜಯ್ ಶಾ ಒಬ್ಬ ಮೂರ್ಖ. ಅತ್ಯುತ್ಸಾಹದ ವೇಳೆ ಬುದ್ಧಿಹೀನರಾಗುವುದು ಕೆಲವರಿಗೆ ರೂಢಿಯಾಗಿರುತ್ತದೆ. ಕರ್ನಲ್ ಸೋಫಿಯಾ ಕುರಿತು ಇಂತಹ ಹೇಳಿಕೆ ನೀಡುವ ಮೂಲಕ ಸಚಿವ ವಿಜಯ್ ಶಾ ನಗೆಪಾಟಲಿಗೀಡಾಗಿದ್ದಾರೆ

ಮುಕ್ತಾರ್ ಅಬ್ಬಾಸ್ ನಖ್ವಿ, ಬಿಜೆಪಿ ಹಿರಿಯ ನಾಯಕ

ಸಚಿವ ಶಾ ಹೇಳಿದ್ದೇನು: ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಸಚಿವ ವಿಜಯ್ ಶಾ 'ಆಪರೇಷನ್ ಸಿಂಧೂರ' ಕುರಿತು ಪ್ರಸ್ತಾಪಿಸಿದ್ದರು. ಅಲ್ಲದೇ, ಕರ್ನಲ್ ಸೋಫಿಯಾ ಅವರನ್ನು 'ಭಯೋತ್ಪಾದಕರ ಸಹೋದರಿ' ಎಂಬಂತಹ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು ಎನ್ನಲಾಗಿದೆ.

ಶಾ ಹೇಳಿಕೆ ಬಗ್ಗೆ ವ್ಯಾಪಕ ಖಂಡನೆ ವ್ಯಕ್ತವಾಗುತ್ತಿದೆ. ಬಳಿಕ ಎಚ್ಚೆತ್ತುಕೊಂಡ ಶಾ, 'ನನ್ನ ಹೇಳಿಕೆಯಿಂದ ಯಾರಿಗಾದರೂ ನೋವಾಗಿದ್ದಲ್ಲಿ, 10 ಬಾರಿ ಕ್ಷಮೆ ಯಾಚಿಸಲು ನಾನು ಸಿದ್ಧ. ಕರ್ನಲ್ ಖುರೇಷಿ ಅವರನ್ನು ನನ್ನ ಸಹೋದರಿಗಿಂತಲೂ ಹೆಚ್ಚು ಗೌರವಿಸುತ್ತೇನೆ' ಎಂದು ಹೇಳಿದ್ದಾರೆ.

'ಸಚಿವ ವಿಜಯ್ ಶಾ ವಜಾ ಮಾಡಿಲ್ಲವೇಕೆ?'

ಜೈರಾಮ್ ರಮೇಶ್

ನವದೆಹಲಿ(ಪಿಟಿಐ): 'ಕರ್ನಲ್ ಸೋಫಿಯಾ ಖುರೇಷಿ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎನ್ನಲಾದ ಮಧ್ಯಪ್ರದೇಶ ಸಚಿವ ವಿಜಯ್ ಶಾ ಅವರನ್ನು ಪ್ರಧಾನಿ ನರೇಂದ್ರ ಮೋದಿ ಇನ್ನೂ ಯಾಕೆ ವಜಾ ಮಾಡಿಲ್ಲ' ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಕರ್ನಲ್ ಖುರೇಷಿ ಕುರಿತು ಅತ್ಯಂತ ಅವಮಾನಕರ ಹಾಗೂ ಒಪ್ಪಲಾಗದ ಹೇಳಿಕೆ ನೀಡಿರುವ ಮಧ್ಯಪ್ರದೇಶ ಸಚಿವ ಶಾ ಅವರನ್ನು ಪ್ರಧಾನಿ ಇನ್ನೂ ಯಾಕೆ ಸಂಪುಟದಿಂದ ವಜಾಗೊಳಿಸಿಲ್ಲ? ಶಾ ನಡೆ ಖಂಡಿಸಲು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಈ ಹೇಳಿಕೆ ಸಾಕಾಗುವುದಿಲ್ಲವೇ?' ಎಂದು ಕೇಳಿದ್ದಾರೆ. 'ಕರ್ನಲ್ ಖುರೇಷಿ ಕುರಿತ ಹೇಳಿಕೆಗಳು, ಬಿಜೆಪಿಯ ರೋಗಗ್ರಸ್ತ ಮನಸ್ಥಿತಿಯನ್ನು ತೋರಿಸುತ್ತದೆ' ಎಂದೂ ಟೀಕಿಸಿದ್ದಾರೆ.

'ನೇರ ಮಾತುಕತೆಗೆ ಬೆಂಬಲ'

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ನಡುವೆ ನೇರ ಮಾತುಕತೆಯನ್ನು ಬೆಂಬಲಿಸುವುದಾಗಿ ಅಮೆರಿಕ ಹೇಳಿದೆ.

ಎರಡೂ ಕಡೆಯವರು ಸಂಘರ್ಷ ಬಿಟ್ಟು, ಶಾಂತಿಯ ಮಾರ್ಗವನ್ನು ಆಯ್ಕೆ ಮಾಡಿಕೊಂಡಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಪಾಕಿಸ್ತಾನ ಪ್ರಧಾನಿ ಶಹಬಾಜ್ ಷರೀಫ್ ಅವರನ್ನು ಶ್ಲಾಘಿಸಿರುವುದಾಗಿ ಅದು ಪುನರುಚ್ಚರಿಸಿದೆ.

'ಭಾರತ ಮತ್ತು ಪಾಕಿಸ್ತಾನದ ನಡುವಿನ ಕದನ ವಿರಾಮವನ್ನು ನಾವು ಸ್ವಾಗತಿಸುತ್ತೇವೆ. ಅಧ್ಯಕ್ಷ ಟ್ರಂಪ್ ಹೇಳಿದಂತೆ, ಉಭಯ ದೇಶಗಳ ನಾಯಕರ ನಿರ್ಧಾರವು ಅವರ ಸಾಮರ್ಥ್ಯ, ಬುದ್ಧಿವಂತಿಕೆ ಮತ್ತು ದೃಢತೆಯನ್ನು ಪ್ರತಿಬಿಂಬಿಸುತ್ತದೆ' ಎಂದು ಅಮೆರಿಕದ ವಿದೇಶಾಂಗ ಇಲಾಖೆಯ ಪ್ರಧಾನ ಉಪ ವಕ್ತಾರ ಥಾಮಸ್ ಪಿಗಾಟ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಭಯೋತ್ಪಾದನೆ ಹತ್ತಿಕ್ಕಲು ಬ್ರಿಟನ್ ಬೆಂಬಲ

ಲಂಡನ್ (ಪಿಟಿಐ): ಕದನ ವಿರಾಮ ಖಾತ್ರಿಪಡಿಸಿಕೊಳ್ಳಲು ಭಾರತ ಮತ್ತು ಪಾಕಿಸ್ತಾನದ ಜತೆಗೆ ಕೆಲಸ ಮಾಡಲು ಬ್ರಿಟನ್ ಸಿದ್ಧವಾಗಿದೆ. ಅಲ್ಲದೆ, 'ಭಯಾನಕವಾದ ಭಯೋತ್ಪಾದನೆ'ಯನ್ನು ಹತ್ತಿಕ್ಕಲು ಎರಡೂ ಕಡೆಯವರ ಪ್ರಯತ್ನ ಬೆಂಬಲಿಸಲು ಒಲವು ತೋರಲಿದೆ ಎಂದು ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಲ್ಯಾಮಿ ಬ್ರಿಟನ್ ಸಂಸತ್ತಿಗೆ ತಿಳಿಸಿದ್ದಾರೆ. ಮಂಗಳವಾರ ಹೌಸ್ ಆಫ್ ಕಾಮನ್ಸ್‌ನಲ್ಲಿ ನಡೆದ ಚರ್ಚೆ ವೇಳೆ, ಸಿಂಧೂ ಜಲ ಒಪ್ಪಂದದ ಬಗ್ಗೆ ತಮ್ಮ ಬದ್ಧತೆಯನ್ನು ಕಾಯ್ದುಕೊಳ್ಳುವಂತೆ ಉಭಯ ರಾಷ್ಟ್ರಗಳನ್ನು ಪ್ರೋತ್ಸಾಹಿಸಲು ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿರುವ ಸಹವರ್ತಿಗಳೊಂದಿಗೆ ಸಂಪರ್ಕದಲ್ಲಿದ್ದೇನೆ ಎಂದು ಹೇಳಿದರು.

'ಕಾರ್ಯಾಚರಣೆಗೆ ನವಾಜ್ ಮೇಲ್ವಿಚಾರಣೆ'

ಲಾಹೋರ್ (ಪಿಟಿಐ): 'ಭಾರತದ ವಿರುದ್ಧ ಸಂಪೂರ್ಣ ಸೇನಾ ಕಾರ್ಯಾಚರಣೆಯನ್ನು ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಮೇಲ್ವಿಚಾರಣೆಯಲ್ಲಿ ರೂಪಿಸಲಾಗಿತ್ತು' ಎಂದು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮಾಹಿತಿ ಸಚಿವೆ ಅಜ್ಮಾ ಬುಖಾರಿ ಬುಧವಾರ ಹೇಳಿದ್ದಾರೆ.

ಭಾರತ- ಪಾಕ್ ಜತೆ ಮಾತುಕತೆ: 5ನೇ ಬಾರಿ ಟ್ರಂಪ್ ಪುನರುಚ್ಚಾರ

'ಸಂಘರ್ಷ ಶಮನಕ್ಕೆ ಮಧ್ಯಸ್ಥಿಕೆ ವಹಿಸಿದ್ದೆ'

ನ್ಯೂಯಾರ್ಕ್/ನವದೆಹಲಿ (ಪಿಟಿಐ): 'ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ಭವಿಸಿದ್ದ ಸಂಘರ್ಷವನ್ನು ಅಮೆರಿಕ ಶಮನಗೊಳಿಸಿತು. ಶಾಂತಿ ಬಯಸೋಣ ಮತ್ತು ಈಗ ನಾವು ವ್ಯಾಪಾರ ಒಪ್ಪಂದ ಮಾಡಿಕೊಳ್ಳೋಣ ಎಂದು ಆ ದೇಶ ಗಳನ್ನು ಒಪ್ಪಿಸಿ ನಾನು ಉತ್ತಮ ಕೆಲಸ ಮಾಡಿದ್ದೇನೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ.

ಸೌದಿ ಅರೇಬಿಯಾಕ್ಕೆ ಅಧಿಕೃತ ಭೇಟಿ ನೀಡುವ ಮೊದಲ ತಮ್ಮ ವಿಮಾನದಲ್ಲಿ 'ಫಾಕ್ಸ್ ನ್ಯೂಸ್' ಪತ್ರಿಕೆಗೆ ಟ್ರಂಪ್ ಅವರು ಸಂದರ್ಶನ ನೀಡಿದ್ದು ಈ ವೇಳೆ ಅವರು ಭಾರತ–ಪಾಕಿಸ್ತಾನ ಸಂಘರ್ಷ ಶಮನಕ್ಕೆ ಮಧ್ಯಸ್ಥಿಕೆ ವಹಿಸಿದ ಕುರಿತು ಮಾತನಾಡಿದರು.

ಭಾರತ–ಪಾಕಿಸ್ತಾನದ ಮಧ್ಯೆ ಸಂಘರ್ಷ ಶಮನಗೊಂಡಿದೆ ಎಂಬ ಮಾಹಿತಿಯನ್ನು ಶನಿವಾರ ಮೊದಲು ನೀಡಿದ್ದೇ ಟ್ರಂಪ್. ಅಲ್ಲಿಂದ ಈಚೆಗೆ 'ಮಧ್ಯಸ್ಥಿಕೆ ವಹಿಸಿದ್ದೇನೆ' ಎಂದು ವಿವಿಧೆಡೆ ಟ್ರಂಪ್ ಅವರು ಐದು ಬಾರಿ ಮಾತನಾಡಿದ್ದಾರೆ. ಸೌದಿ ಅರೇಬಿಯಾಕ್ಕೆ ತೆರಳಿದ ಬಳಿಕ ಅಲ್ಲಿ ನಡೆದ 'ಸೌದಿ–ಅಮೆರಿಕ ಹೂಡಿಕೆದಾರರ ಸಮಾವೇಶ'ದಲ್ಲಿಯೂ ಅವರು ಇದೇ ಮಾತುಗಳನ್ನು ಆಡಿದ್ದಾರೆ.

ಟ್ರಂಪ್ ಹೇಳಿದ್ದೇನು?

- ಎರಡೂ ದೇಶಗಳಲ್ಲಿಯೂ ಬಹಳ ಉತ್ತಮ ನಾಯಕರಿದ್ದಾರೆ. ಅವರು ನನಗೆ ಬಹಳ ಪರಿಚಯಸ್ಥರು ಕೂಡ. ಅಣ್ವಸ್ತ್ರ ಕ್ಷಿಪಣಿಗಳನ್ನು ವ್ಯಾಪಾರ ಮಾಡುವುದು ಬೇಡ. ನಿಮಗೆ ಅನುಕೂಲವಾಗುವಂಥ ವ್ಯಾಪಾರ ಮಾಡೋಣ ಎಂದು ಹೇಳಿದೆ. ಬಳಿಕ ಎಲ್ಲವೂ ನಿಂತು ಹೋಯಿತು
- ಒಂದು ವೇಳೆ ಅವರೇನಾದರೂ ಅಣ್ವಸ್ತ್ರ ಬಳಕೆ ಮಾಡಿಬಿಟ್ಟಿದ್ದರೆ, ಬಹಳ ಕೆಟ್ಟದ್ದಾಗುತ್ತಿತ್ತು. ಬಹಳ ಸಣ್ಣ ಪ್ರಮಾಣದ ಅಣ್ವಸ್ತ್ರ ಬಳಕೆ ಕೂಡ ಲಕ್ಷಗಟ್ಟಲೆ ಜೀವಗಳನ್ನು ಕೊಂದುಬಿಡುತ್ತಿತ್ತು. ನಾನು, ಮಾರ್ಕೊ (ವಿದೇಶಾಂಗ ಕಾರ್ಯದರ್ಶಿ) ವ್ಯಾನ್ಸ್ (ಅಮೆರಿಕ ಉಪಾಧ್ಯಕ್ಷ), ನಮ್ಮ ತಂಡ ಎಲ್ಲರೂ ಉತ್ತಮ ಕೆಲಸ ಮಾಡಿದ್ದೇವೆ
- ನಾನು ಬಹಳ ಕಷ್ಟಪಟ್ಟಿದ್ದೇನೆ. ಆದರೆ ಇಡೀ ಪ್ರಕ್ರಿಯೆಯನ್ನು ಆನಂದಿಸಿದ್ದೇನೆ. ಇಷ್ಟೆಲ್ಲಾ ಕಷ್ಟಪಟ್ಟರೂ ಕೈಗೆ ಏನೂ ಸಿಗುವುದಿಲ್ಲ. ಆದರೆ, ಇಲ್ಲಿ ಹಾಗಾಗಲಿಲ್ಲ. ನಮಗೆ ಬಹಳಷ್ಟು ಸಿಗುತ್ತಿತ್ತು. ಭಾರತ–ಪಾಕಿಸ್ತಾನದ ಮಧ್ಯೆ ಏನು ನಡೆಯುತ್ತಿತ್ತೊ ಅದು ನನಗೆ ಇಷ್ಟವಾಗಲಿಲ್ಲ. ಅವು ಅಣ್ವಸ್ತ್ರ ರಾಷ್ಟ್ರಗಳು ಬೇರೆ. ಅವರ ಬಳಿ ದೊಡ್ಡ ಸಂಖ್ಯೆಯ ಅಣ್ವಸ್ತ್ರ ಸಂಗ್ರಹ ಇದೆ
- ನಾವು ಭಾರತ–ಪಾಕಿಸ್ತಾನವನ್ನು ಇನ್ನಷ್ಟು ಹತ್ತಿರಕ್ಕೆ ತರಬಹುದು. ಅಲ್ವಾ ಮಾರ್ಕೊ. ಎರಡು ದೇಶಗಳು ಒಟ್ಟಿಗೆ ಹೊರಗೆ ಹೋಗಿ, ಚಂದದ ಊಟ ಮಾಡಬಹುದು. ಅದು ಎಷ್ಟು ಒಳ್ಳೆಯದಾಗುತ್ತದೆ ಅಲ್ಲವಾ?

('ಫಾಕ್ಸ್ ನ್ಯೂಸ್'ಗೆ ನೀಡಿದ ಸಂದರ್ಶನ ಹಾಗೂ ಸೌದಿ ಅರೇಬಿಯಾದಲ್ಲಿ ನಡೆದ ಹೂಡಿಕೆ ಸಮಾವೇಶದಲ್ಲಿ ನೀಡಿದ ಹೇಳಿಕೆಗಳು ಇಲ್ಲಿವೆ)

ಆದರೆ, ಟ್ರಂಪ್ ಅವರ ಈ ಹೇಳಿಕೆಯನ್ನು ಭಾರತ ಅಲ್ಲಗಳೆದಿದೆ. 'ಭಾರತ ಮತ್ತು ಪಾಕಿಸ್ತಾನದ ಸೇನಾ ಕಾರ್ಯಾಚರಣೆಗಳ ಮಹಾ ನಿರ್ದೇಶಕರು (ಡಿಜಿಎಂಒ) ಪರಸ್ಪರ ಮಾತುಕತೆ ನಡೆಸಿ ನಿರ್ಧಾರಕ್ಕೆ ಬಂದಿದ್ದಾರೆ. ಈ ಪ್ರಕ್ರಿಯೆಯಲ್ಲಿ ಯಾವುದೇ ಮೂರನೇ ವ್ಯಕ್ತಿ ಭಾಗಿಯಾಗಿ ಮಧ್ಯಸ್ಥಿಕೆ ವಹಿಸಿಲ್ಲ' ಎಂದು ಭಾರತ ಸರ್ಕಾರ ಹೇಳಿದೆ.

'ಅಮೆರಿಕದ ಅಪ್ಪ ಯುದ್ಧ ನಿಲ್ಲಿಸಿದರೇ?'

ಭಾರತ–ಪಾಕಿಸ್ತಾನದ ಮಧ್ಯೆ ಕದನವಿರಾಮ ಘೋಷಣೆಯಾಗಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದ ಕೆಲವು ದಿನಗಳ ಹಿಂದೆ ನಾವು ತಿಳಿದುಕೊಂಡೆವು. 'ವ್ಯಾಪರ ಒಪ್ಪಂದ ಮಾಡಿಕೊಳ್ಳಿ ಎನ್ನುವ ಆಮಿಷ ಮತ್ತು ನಿರ್ಬಂಧ ಎದುರಿಸಿ ಎನ್ನುವ ಬೆದರಿಕೆ ಒಡ್ಡಿ ಬಲವಂತವಾಗಿ ಮತ್ತು ಬ್ಲ್ಯಾಕ್‌ಮೇಲ್ ಮಾಡಿ ಕದನ ವಿರಾಮಕ್ಕೆ ಒಪ್ಪಿಸಿದ್ದೇನೆ' ಎಂದು ಈಗ ಸೌದಿ ಅರೇಬಿಯಾದಲ್ಲಿ ಟ್ರಂಪ್ ಹೇಳಿದ್ದಾರೆ. ಯಾವಾಗಲೂ ಮಾತನಾಡುತ್ತಲೇ ಇರುವ ನಮ್ಮ ಪ್ರಧಾನಿ ಮೋದಿ ಮತ್ತು ವಿದೇಶಾಂಗ ಸಚಿವ ಜೈಶಂಕರ್ ಅವರು ಟ್ರಂಪ್ ಅವರ ಈ ಹೇಳಿಕೆ ಬಗ್ಗೆ ಏನು ಹೇಳುತ್ತಾರೆ? ಅಮೆರಿಕದ ಒತ್ತಡಕ್ಕೆ ಮಣಿದು ಇಬರಿಬ್ಬರು ಭಾರತದ ಭದ್ರತೆಯನ್ನು ಅಡವಿಟ್ಟರೇ? ಅಮೆರಿಕಿ ಪಾಪಾ (ಅಮೆರಿಕದ ಅಪ್ಪ) ಯುದ್ಧ ನಿಲ್ಲಿಸಿದರೇ?

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ಸೋಫಿಯಾ ಮಾವನ ಮನೆ ಮೇಲೆ ದಾಳಿ: ವದಂತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಜಿಲ್ಲೆಯ ಗೋಕಾಕ ತಾಲ್ಲೂಕಿನ ಕೊಣ್ಣೂರ ಗ್ರಾಮದಲ್ಲಿರುವ ಕರ್ನಲ್ ಸೋಫಿಯಾ ಖುರೇಷಿ ಅವರ ಮಾವ ಗೌಸ್‌ಸಾಬ್ ಮನೆಯ ಮೇಲೆ ಆರ್‌ಎಸ್‌ಎಸ್ ಕಾರ್ಯಕರ್ತರು ದಾಳಿ ಮಾಡಿ ಧ್ವಂಸಗೊಳಿಸಿದ್ದಾರೆ ಎಂಬ ಸುಳ್ಳು ಸುದ್ದಿ ಹರಡಲಾಗಿದೆ. ಈ ಬಗ್ಗೆ ಸಾರ್ವಜನಿಕರು ಗಮನ ಕೊಡಬಾರದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಹೇಳಿದರು.

'ಸೋಫಿಯಾ ಖುರೇಷಿ ಅವರು 'ಆಪರೇಷನ್ ಸಿಂಧೂರ' ಬಗ್ಗೆ ಮಾಹಿತಿ ನೀಡಿದ್ದರು. ಅವರ ಹೆಸರನ್ನು ಬಳಸಿ ಕೆನಡಾ ಮೂಲದ ವ್ಯಕ್ತಿಯೊಬ್ಬ 'ಎಕ್ಸ್' ಖಾತೆಯಲ್ಲಿ ಸುಳ್ಳು ಸುದ್ದಿ ಹರಡಿದ್ದ. ಆತನನ್ನು ಮೆಸೇಜ್ ಮೂಲಕ ಸಂಪರ್ಕಿಸಿ ಅದು ಸುಳ್ಳು ಸುದ್ದಿ ಎಂದು ತಿಳಿಸಿದ ಬಳಿಕ ಪೋಸ್ಟ್ ಡಿಲೀಟ್ ಮಾಡಿದ್ದಾನೆ. ವ್ಯಕ್ತಿಯ ಬಗ್ಗೆ ಹುಡುಕಾಟ ನಡೆದಿದ್ದು, ಆತ ಭಾರತದವನಾಗಿದ್ದರೆ ಬಂಧಿಸಲಾಗುವುದು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಸೋಫಿಯಾ ಕುಟುಂಬದವರಿಗೆ ಇದರ ಅರಿವು ಇದೆ. ಮುಂಜಾಗ್ರತಾ ಕ್ರಮವಾಗಿ ಅವರ ಮನೆಗೆ ಭದ್ರತೆ ಒದಗಿಸಲಾಗಿದೆ. ಜಾಲತಾಣದಲ್ಲಿ ವಿಷಬೀಜ ಬಿತ್ತುವ ಕಿಡಿಗೇಡಿಗಳ ಮೇಲೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ' ಎಂದರು.

ಡಬ್ಲ್ಯುಟಿಸಿ ಫೈನಲ್‌ಗೆ ತೆರಳಲಿರುವ ದಕ್ಷಿಣ ಆಫ್ರಿಕಾ ಕ್ರಿಕೆಟಿಗರು

ಪ್ಲೇ ಆಫ್‌ಗಿಲ್ಲ ಸ್ಟಬ್ಸ್, ಯಾನ್ಸೆನ್?

ಜೋಹಾನೆಸ್‌ಬರ್ಗ್ (ಪಿಟಿಐ): ಮುಂದಿನ ತಿಂಗಳು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ನಡೆಯಲಿದೆ. ಆ ಪಂದ್ಯದಲ್ಲಿ ಆಡಲಿರುವ ದಕ್ಷಿಣ ಆಫ್ರಿಕಾ ತಂಡದ ಆಟಗಾರರು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪ್ಲೇ ಆಫ್ ನಲ್ಲಿ ಕಣಕ್ಕಿಳಿಯುವುದಿಲ್ಲ.

ಭಾರತ ಮತ್ತು ಪಾಕಿಸ್ತಾನ ಸೇನಾ ಸಂಘರ್ಷದ ಕಾರಣದಿಂದಾಗಿ ಐಪಿಎಲ್ ಟೂರ್ನಿಯನ್ನು ಒಂದು ವಾರದ ಮಟ್ಟಿಗೆ ಸ್ಥಗಿತಗೊಳಿಸಲಾಗಿತ್ತು. ಮೇ 17ರಂದು ಮರುಆರಂಭವಾಗಲಿದೆ. ಜೂನ್ 3ರಂದು ಫೈನಲ್ ಪಂದ್ಯವು ನಡೆಯಲಿದೆ. ಆದರೆ ಜೂನ್ 11ರಿಂದ 15ರವರೆಗೆ ಲಾರ್ಡ್ಸ್‌ನಲ್ಲಿ ಡಬ್ಲ್ಯುಟಿಸಿ ಫೈನಲ್ ನಡೆಯಲಿದೆ. ದಕ್ಷಿಣ ಆಫ್ರಿಕಾ ತಂಡವು ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ದಕ್ಷಿಣ ಆಫ್ರಿಕಾ ತಂಡವನ್ನು ಈಗಾಗಲೇ ಪ್ರಕಟಿಸಲಾಗಿದೆ. ತೆಂಬಾ ಬವುಮಾ ನಾಯಕತ್ವ ವಹಿಸುವರು. ಈ ತಂಡದಲ್ಲಿರುವ ಕೆಲವು ಆಟಗಾರರು ಐಪಿಎಲ್ ಟೂರ್ನಿಯ ಬೇರೆ ಬೇರೆ ತಂಡಗಳಲ್ಲಿ ಆಡುತ್ತಿದ್ದಾರೆ.

ಆದರೆ ಅವರಿಗೆ ರಾಷ್ಟ್ರೀಯ ತಂಡದ ಕರ್ತವ್ಯಕ್ಕೆ ಆದ್ಯತೆ ನೀಡುವಂತೆ ದಕ್ಷಿಣ ಆಫ್ರಿಕಾ ಕ್ರಿಕೆಟ್ ಮಂಡಳಿ ತಾಕೀತು ಮಾಡಿದೆ ಎನ್ನಲಾಗಿದೆ.

ಕಗಿಸೊ ರಬಾಡ (ಗುಜರಾತ್ ಟೈಟನ್ಸ್), ಲುಂಗಿ ಗಿಡಿ (ರಾಯಲ್ ಚಾಲೆಂಜರ್ಸ್ ಬೆಂಗಳೂರು), ಟ್ರಿಸ್ಟನ್ ಸ್ಟಬ್ಸ್ (ಡೆಲ್ಲಿ ಕ್ಯಾಪಿಟಲ್ಸ್), ಏಡನ್ ಮಾರ್ಕರಂ (ಲಖನೌ ಸೂಪರ್‌ಜೈಂಟ್ಸ್), ರಿಯಾನ್ ರಿಕೆಲ್ಟನ್ (ಮುಂಬೈ ಇಂಡಿಯನ್ಸ್), ಕಾರ್ಬಿನ್ ಬಾಷ್ (ಮುಂಬೈ ಇಂಡಿಯನ್ಸ್), ಮಾರ್ಕೊ ಯಾನ್ಸೆನ್ (ಪಂಜಾಬ್ ಕಿಂಗ್ಸ್), ವಿಯಾನ್ ಮಲ್ದರ್ (ಸನ್‌ರೈಸರ್ಸ್ ಹೈದರಾಬಾದ್) ಐಪಿಎಲ್‌ನಲ್ಲಿ ಆಡುತ್ತಿರುವ ದಕ್ಷಿಣ ಆಫ್ರಿಕಾ ಆಟಗಾರರು.

'ನಮ್ಮ ಆಟಗಾರರ ಒಪ್ಪಂದದ ಕೊನೆಯ ದಿನಾಂಕವು ಮೇ 25ರವರೆಗೆ ಇದೆ. 26ರಂದು ಅವರು ಸ್ವದೇಶಕ್ಕೆ ಮರಳಬೇಕು. ಲಂಡನ್‌ಗೆ 30ರಂದು ನಮ್ಮ ತಂಡ ತೆರಳಲಿದೆ. ಇದೇ ಯೋಜನೆಗೆ ನಾವು ಬದ್ಧರಾಗಿದ್ದೇವೆ. 26ರಂದು ನಮ್ಮ ಆಟಗಾರರು ಇಲ್ಲಿ (ತವರಿನಲ್ಲಿ) ಇರಬೇಕು' ಎಂದು ದಕ್ಷಿಣ ಆಫ್ರಿಕಾ ತಂಡದ ಮುಖ್ಯ ಕೋಚ್ ಶುಕ್ರಿ ಕೊನ್ರಾಡ್ ಹೇಳಿದ್ದಾರೆ.

ಟ್ರಿಸ್ಟನ್ ಸ್ಟಬ್ಸ್

ಆರ್‌ಸಿಬಿ ವಿರುದ್ಧ ಪಂದ್ಯಕ್ಕೆ ಕ್ವಿಂಟನ್ ಡಿಕಾಕ್ ಲಭ್ಯ

ಬೆಂಗಳೂರಿನಲ್ಲಿ ಇದೇ ಶನಿವಾರ ನಡೆಯಲಿರುವ ಮುಂದಿನ ಲೀಗ್ ಪಂದ್ಯಕ್ಕೆ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಆಡಲು ಲಭ್ಯರಿರುವುದಾಗಿ ದಕ್ಷಿಣ ಆಫ್ರಿಕಾದ ಅನುಭವಿ ಬ್ಯಾಟರ್ ಕ್ವಿಂಟನ್ ಡಿಕಾಕ್ ಖಚಿತಪಡಿಸಿದ್ದಾರೆ ಎಂದು ಇಎಸ್‌ಪಿಎಲ್ ಕ್ರಿಕ್‌ಇನ್ಫೊ ವರದಿ ಮಾಡಿದೆ.

ಆದರೆ ರಾಜಸ್ಥಾನ ರಾಯಲ್ಸ್ ಪರ ಆಡುತ್ತಿರುವ ಇಂಗ್ಲೆಂಡ್‌ನ ವೇಗಿ ಜೋಫ್ರಾ ಆರ್ಚರ್ ಅವರು ಉಳಿದ ಪಂದ್ಯಗಳನ್ನು ಆಡಲು ಬರುತ್ತಿಲ್ಲ ಎಂದು ತಿಳಿದುಬಂದಿದೆ. ರಾಯಲ್ಸ್ ಈಗಾಗಲೇ ಪ್ಲೇಆಫ್ ರೇಸ್‌ನಲ್ಲಿಲ್ಲದ ಕಾರಣ ಅವರನ್ನು ಕರೆಸಿಕೊಳ್ಳಲು ಮುಂದಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಬದಲಿ ಆಟಗಾರರ ಸೇರ್ಪಡೆ ನಿಯಮ ಸಡಿಲ

ನವದೆಹಲಿ (ಪಿಟಿಐ): ಐಪಿಎಲ್ ತಂಡಗಳಿಗೆ ವಿದೇಶಿ ಆಟಗಾರರ ಅಲಭ್ಯತೆ ಸಮಸ್ಯೆಯನ್ನು ನಿವಾರಿಸಲು ಟೂರ್ನಿಯ ಉಳಿದ ಭಾಗದಲ್ಲಿ ಬದಲಿ ಆಟಗಾರರನ್ನು ಸೇರ್ಪಡೆ ಮಾಡಿಕೊಳ್ಳುವ ನಿಯಮಕ್ಕೆ ತಿದ್ದುಪಡಿ ಮಾಡಲಾಗಿದೆ.

ಜೇಕ್ ಫ್ರೇಸರ್ ಮೆಕ್‌ಗುರ್ಕ್

ಮುಸ್ತಫಿಜುರ್ ರೆಹಮಾನ್

ಇದೇ 17ರಿಂದ ಐಪಿಎಲ್ ಮರು ಆರಂಭವಾಗಲಿದೆ. ಆದರೆ ಬ್ಲ್ಯಾಕ್‌ಔಟ್ ಕಾರಣದಿಂದ ನೀಡಲಾಗಿದ್ದ ಒಂದು ವಾರದ ಬಿಡುವಿನ ಸಂದರ್ಭದಲ್ಲಿ ತಮ್ಮ ದೇಶಗಳಿಗೆ ತೆರಳಿದ್ದ ಕೆಲವು ಆಟಗಾರರು ಮತ್ತೆ ಭಾರತಕ್ಕೆ ಮರಳುತ್ತಿಲ್ಲ. ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಆಡುವ ಇಂಗ್ಲೆಂಡ್ ಆಟಗಾರ ಜೆಮಿ ಓವರ್ಟನ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ಪ್ರತಿನಿಧಿಸುವ ಆಸ್ಟ್ರೇಲಿಯಾ ಬ್ಯಾಟರ್ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಅವರು ಐಪಿಎಲ್‌ನ ಉಳಿದ ಪಂದ್ಯಗಳಲ್ಲಿ ಆಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಬದಲಿ ಆಟಗಾರರ ಸೇರ್ಪಡೆ ನಿಯಮವನ್ನು ಸಡಿಲಗೊಳಿಸಲಾಗಿದೆ. ಈ ಹಂತದಲ್ಲಿಯೂ ಬದಲಿ ಆಟಗಾರರನ್ನು ಪಡೆಯಲು ಫ್ರ್ಯಾಂಚೈಸಿಗಳಿಗೆ ಅನುವು ಮಾಡಿಕೊಡಲಾಗಿದೆ ಎಂದು ಲೀಗ್ ಮೂಲಗಳು ತಿಳಿಸಿವೆ.

'ಈ ಆಟಗಾರರ ಬದಲಿ ನಿಯಮವು ತಾತ್ಕಾಲಿಕವಾಗಿದೆ. ಈಗ ಸ್ಥಾನ ಪಡೆದ ಆಟಗಾರರು ಮುಂದಿನ ಆವೃತ್ತಿಯ ಟೂರ್ನಿಗೆ ಮುಂದುವರಿಯುವುದಿಲ್ಲ' ಎಂದೂ ಸ್ಪಷ್ಟಪಡಿಸಲಾಗಿದೆ.

ಮುಸ್ತಫಿಜುರ್‌ಗೆ ಸ್ಥಾನ: ಡೆಲ್ಲಿ ತಂಡವು ಫ್ರೇಸರ್ ಬದಲಿಗೆ ಬಾಂಗ್ಲಾದೇಶದ ಎಡಗೈ ವೇಗಿ ಮುಸ್ತಫಿಜುರ್ ರೆಹಮಾನ್ ಅವರನ್ನು ಆಯ್ಕೆ ಮಾಡಿಕೊಂಡಿದೆ.

ಮುಸ್ತಫಿಜುರ್ ಅವರು 2016ರಲ್ಲಿ ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದರು. ಅವರು ಒಟ್ಟು 38 ಪಂದ್ಯಗಳನ್ನು ಆಡಿದ್ದಾರೆ. ಅವರು 2022 ಮತ್ತು 2023ರಲ್ಲಿ ಅವರು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪರ ಆಡಿದ್ದರು.

ಪ್ರಜ್ಞಾನಂದ ಸೇರಿ ನಾಲ್ವರ ಮುನ್ನಡೆ

ಬುಕಾರೆಸ್ಟ್ (ಪಿಟಿಐ): ಪೋಲೆಂಡ್‌ನ ಯಾನ್ ಶಿಸ್ತೋಫ್ ದೂಡ ಅವರ ಜೊತೆ ಡ್ರಾ ಮಾಡಿಕೊಂಡ ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಅವರು ಸೂಪರ್‌ಬೆಟ್ ಚೆಸ್ ಕ್ಲಾಸಿಕ್ ಟೂರ್ನಿಯ ಆರನೇ ಸುತ್ತಿನ ನಂತರ 3.5 ಪಾಯಿಂಟ್ಸ್ ಸಂಗ್ರಹಿಸಿ ಇತರ ಮೂರು ಮಂದಿಯ ಜೊತೆ ಮುನ್ನಡೆ ಹಂಚಿಕೊಂಡಿದ್ದಾರೆ. ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಮಂಗಳವಾರ ತೀವ್ರ ಹೋರಾಟದ ಪಂದ್ಯದಲ್ಲಿ ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ ಎದುರು ಸೋಲನುಭವಿಸಿದರು.

ಪ್ರಜ್ಞಾನಂದ ಜೊತೆ ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್, ಅಲಿರೇಝಾ ಫಿರೋಝ್‌ಜಾ ಮತ್ತು ಫ್ಯಾಬಿಯಾನೊ ಕರುವಾನ ಅವರೂ ತಲಾ 3.5 ಪಾಯಿಂಟ್ ಗಳಿಸಿದ್ದಾರೆ.

ಎರಡನೇ ಸುತ್ತಿಗೆ ಉನ್ನತಿ, ಆಕರ್ಷಿ

ಬ್ಯಾಂಕಾಕ್ (ಪಿಟಿಐ): ಭಾರತದ ಅನುಭವಿ ಆಟಗಾರ ಲಕ್ಷ್ಯ ಸೇನ್, ಥಾಯ್ಲೆಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಆದರೆ ಉದಯೋನ್ಮುಖ ಆಟಗಾರ್ತಿಯರಾದ ಮಾಳವಿಕಾ ಬನ್ಸೋಡ್, ಆಕರ್ಷಿ ಕಶ್ಯಪ್ ಮತ್ತು ಉನ್ನತಿ ಹೂಡಾ ಅವರು ಬುಧವಾರ ತೀವ್ರ ಹೋರಾಟದ ಪಂದ್ಯಗಳನ್ನು ಗೆದ್ದು ಮಹಿಳೆಯರ ಸಿಂಗಲ್ಸ್ ಎರಡನೆ ಸುತ್ತಿಗೆ ತಲುಪಿದರು.

ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಸೇನ್ ಮೂರು ಗೇಮ್‌ಗಳ ಸೆಣಸಾಟದಲ್ಲಿ ಐರ್ಲೆಂಡ್‌ನ ಹಾತ್ ನೂಯೆನ್ ಅವರಿಗೆ 18–21, 21–9, 17–21 ರಲ್ಲಿ ಮಣಿದರು.

ಪ್ರಿಯಾಂಶು ರಾಜಾವತ್ ಅವರ ಸವಾಲೂ ಬೇಗನೇ ಅಂತ್ಯಕಂಡಿತು. ಅವರು 13–21, 21–17, 16–21 ರಲ್ಲಿ ಇಂಡೊನೇಷ್ಯಾದ ಅಲಿ ಪರ್ಹಾನ್ ಅವರಿಗೆ ಸೋತರು.

ಮಹಿಳೆಯರ ಸಿಂಗಲ್ಸ್‌ನಲ್ಲಿ, ವಿಶ್ವ ಕ್ರಮಾಂಕದಲ್ಲಿ 23ನೇ ಸ್ಥಾನದಲ್ಲಿರುವ ಮಾಳವಿಕಾ 21–12, 13–21, 21–7 ರಿಂದ ಟರ್ಕಿಯ ನೆಸ್ಲಿಹಾನ್ ಅರಿನ್ ಅವರನ್ನು ಸೋಲಿಸಿದರು. ಅವರ ಮುಂದಿನ ಎದುರಾಳಿ ಏಳನೇ ಶ್ರೇಯಾಂಕದ ಆಟಗಾರ್ತಿ ಹಾಗೂ ಮಾಜಿ ವಿಶ್ವ ಚಾಂಪಿಯನ್ ರಟ್ಚನೋಕ್ ಇಂಟನೊನ್ (ಥಾಯ್ಲೆಂಡ್).

ಆಕರ್ಷಿ ಕಶ್ಯಪ್ ರೋಚಕ ಸೆಣಸಾಟದಲ್ಲಿ ಜಪಾನ್ ಕವೊರು ಸುಗಿಯಾಮಾ ಅವರನ್ನು 21–16, 20–22 22–20 ರಿಂದ ಸೋಲಿಸಿದರು. ಉನ್ನತಿ ಕೂಡ ಮೂರು ಗೇಮ್‌ಗಳ ವರೆಗೆ ಬೆಳೆದ ಪಂದ್ಯದಲ್ಲಿ ಥಾಯ್ಲೆಂಡ್‌ನ ತಮೊನವಾನ್ ಅವರನ್ನು 21–14 18–21 23–21 ರಿಂದ ಹಿಮ್ಮೆಟ್ಟಿಸಿದರು.

ಡಬ್ಲ್ಯುಟಿಟಿ: ಭಾರತ ತಂಡಕ್ಕೆ ಯಶಸ್ವಿನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ದೋಹಾದಲ್ಲಿ ನಡೆಯಲಿರುವ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ (ಡಬ್ಲ್ಯುಟಿಟಿ) ಆಡಲಿರುವ ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಇದೇ 17ರಿಂದ 25ರವರೆಗೆ ಡಬ್ಲ್ಯುಟಿಟಿ ನಡೆಯಲಿದೆ. ಯಶಸ್ವಿನಿ ಅವರು ಮಹಿಳೆಯರ ಸಿಂಗಲ್ಸ್, ಡಬಲ್ಸ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಆಡುವರು ಎಂದು ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆ ಕಾರ್ಯದರ್ಶಿ ಕೆ.ಆರ್. ಮಂಜುನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಶಸ್ವಿನಿ ಘೋರ್ಪಡೆ

ಭಾರತ ಟೇಬಲ್ ಟೆನಿಸ್ ಫೆಡರೇಷನ್ (ಟಿಟಿಎಫ್‌ಐ) ಪ್ರಕಟಿಸಿರುವ ತಂಡ ಇಂತಿದೆ:

ಪುರುಷರು: ಸಿಂಗಲ್ಸ್: ಮಾನವ್ ಠಕ್ಕರ್, ಮಾನುಷ್ ಶಾ, ಸತ್ಯನ್ ಜ್ಞಾನಶೇಖರನ್, ಅಂಕುರ್ ಭಟ್ಟಾಚಾರ್ಜಿ ಡಬಲ್ಸ್: ಮಾನವ್–ಮಾನುಷ್, ಸತ್ಯನ್–ಹರ್ಮೀತ್.

ಮಹಿಳೆಯರು: ಸಿಂಗಲ್ಸ್: ಶ್ರೀಜಾ ಅಕುಲಾ, ಮಣಿಕಾ ಬಾತ್ರಾ, ದಿಯಾ ಚಿತಳೆ, ಯಶಸ್ವಿನಿ ಘೋರ್ಪಡೆ. ಡಬಲ್ಸ್: ಐಹಿಕಾ ಮುಖರ್ಜಿ–ಸುತೀರ್ಥ ಮುಖರ್ಜಿ, ದಿಯಾ–ಯಶಸ್ವಿನಿ.

ಮಿಶ್ರ ಡಬಲ್ಸ್: ಮಾನುಷ್–ದಿಯಾ, ಹರ್ಮೀತ್–ಯಶಸ್ವಿನಿ.

ಪಾಕ್ ಪಾಲ್ಗೊಳ್ಳುವಿಕೆ ಅನುಮಾನ

ನವದೆಹಲಿ (ಪಿಟಿಐ): ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿಯ ನಂತರ ಭಾರತ– ಪಾಕಿಸ್ತಾನ ನಡುವೆ ತ್ವೇಷದ ವಾತಾವರಣ ತಲೆದೋರಿದೆ. ಹೀಗಾಗಿ ಮುಂಬರುವ ಹೀರೊ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಪಾಕಿಸ್ತಾನ ಆಡುವುದು ಅನುಮಾನವಾಗಿದೆ.

ಆಗಸ್ಟ್ 27ರಿಂದ ಸೆಪ್ಟೆಂಬರ್ 7ರವರೆಗೆ ಬಿಹಾರದ ರಾಜಗೀರ್‌ನಲ್ಲಿ ಈ ಟೂರ್ನಿ ನಿಗದಿಯಾಗಿದೆ. ಪಾಕ್ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿ ಭಾರತ ಹಾಕಿ ಫೆಡರೇಷನ್ ಸರ್ಕಾರದ ಸಲಹೆಗೆ ಕಾಯುತ್ತಿದೆ. 12ನೇ ಆವೃತ್ತಿಯ ಟೂರ್ನಿಯಲ್ಲಿ ಆತಿಥೇಯ ಭಾರತ ತಂಡದ ಜೊತೆ ಪಾಕಿಸ್ತಾನ, ಜಪಾನ್, ದಕ್ಷಿಣ ಕೊರಿಯಾ, ಚೀನಾ, ಮಲೇಷ್ಯಾ, ಒಮಾನ್ ಮತ್ತು ಚೀನಾ ತೈಪೆ ಭಾಗವಹಿಸಬೇಕಾಗಿದೆ.

ಹೆಚ್ಚಿನ ಮಹತ್ವ: ಏಷ್ಯಾಕಪ್ ಟೂರ್ನಿಯು, ವಿಶ್ವಕಪ್‌ಗೆ ಕ್ವಾಲಿಫೈಯರ್ ಆಗಿರುವುದರಿಂದ ಹೆಚ್ಚಿನ ಮಹತ್ವ ಪಡೆದಿದೆ. ಟೂರ್ನಿಯ ವಿಜೇತ ತಂಡ ವಿಶ್ವಕಪ್‌ಗೆ ನೇರ ಪ್ರವೇಶ ಪಡೆಯಲಿದೆ. ವಿಶ್ವಕಪ್ 2026ರ ಆಗಸ್ಟ್ 14 ರಿಂದ 30ರವರೆಗೆ ಬೆಲ್ಜಿಯಂನ ವಾವ್ ಮತ್ತು ನೆದರ್ಲೆಂಡ್ಸ್‌ನ ಆಮ್‌ಸ್ಟಲ್ವೀನ್‌ನಲ್ಲಿ ನಡೆಯಲಿದೆ.

ಐದು ಬಾರಿಯ ವಿಜೇತ ದಕ್ಷಿಣ ಕೊರಿಯಾ, ಟೂರ್ನಿಯ ಹಾಲಿ ಚಾಂಪಿಯನ್ ಸಹ ಆಗಿದೆ. ಭಾರತ ಮತ್ತು ಪಾಕಿಸ್ತಾನ ತಲಾ ಮೂರು ಸಲ ಈ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿವೆ.

ಸಂಕ್ಷಿಪ್ತ ಸುದ್ದಿ

ಪೋಲೆಂಡ್‌ನ ಸ್ಪರ್ಧಾಕಣಕ್ಕೆ ನೀರಜ್ ಚೋಪ್ರಾ

ನವದೆಹಲಿ (ಪಿಟಿಐ): ಭಾರತದ ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ ಅವರು ಪೋಲೆಂಡ್‌ನ ಕಾರ್ಝೊಫ್ ನಗರದಲ್ಲಿ ಮೇ 23 ರಂದು ನಡೆಯಲಿರುವ 71ನೇ ಯಾನುಷ್ ಕುಸೊಸಿನ್‌ಸ್ಕಿ ಮೆಮೋರಿಯಲ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಬೆಂಗಳೂರಿನಲ್ಲಿ ಮೇ 24ರಂದು ನಡೆಯಬೇಕಾಗಿದ್ದ ಎನ್‌ಸಿ ಕ್ಲಾಸಿಕ್ ಟೂರ್ನಿ ಮುಂದೂಡಿಕೆಯಾಗಿರುವ ಕಾರಣ ಚೋಪ್ರಾ ಇಲ್ಲಿ ಕಣಕ್ಕಿಳಿಯಲು ನಿರ್ಧರಿಸಿದ್ದಾರೆ. ಕಾರ್ಝೊಫ್‌ನಲ್ಲಿ ಚೋಪ್ರಾ ಅವರಿಗೆ ಎರಡು ಬಾರಿಯ ವಿಶ್ವ ಚಾಂಪಿಯನ್, ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಆ್ಯಂಡರ್ಸನ್ ಪೀಟರ್ಸ್ (ಗ್ರೆನೇಡಾ), ಜರ್ಮನಿಯ ಜೂಲಿಯನ್ ವೇಬರ್ ಮತ್ತು ಪೋಲೆಂಡ್‌ನ ಮರ್ಸಿನ್ ಕ್ರುಕೋವ್‌ಸ್ಕಿ ಮತ್ತಿತರರ ಸವಾಲು ಎದುರಾಗಲಿದೆ.

ಅಥ್ಲೆಟಿಕ್ಸ್: ಸೈಯದ್ ಶಬೀರ್‌ಗೆ ಬೆಳ್ಳಿ

ಬೆಂಗಳೂರು: ಕರ್ನಾಟಕದ ಸೈಯದ್ ಶಬೀರ್ ಪಟ್ನಾದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್ ನಲ್ಲಿ ಎರಡನೇ ಪದಕ ಜಯಿಸಿದರು. ಅವರು 18 ವರ್ಷದೊಳಗಿನ ಬಾಲಕರ 200 ಮೀ ಓಟದಲ್ಲಿ ಬೆಳ್ಳಿ ಜಯಿಸಿದರು.

ಶಬೀರ್ ಅವರು ಮಂಗಳವಾರ 400 ಮೀ ಓಟದಲ್ಲಿ ಕಂಚಿನ ಪದಕ ಪಡೆದಿದ್ದರು. ಬುಧವಾರದ ಸ್ಪರ್ಧೆಯಲ್ಲಿ ಅವರು 21.60 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಜಾರ್ಖಂಡ್ ರಾಜ್ಯದ ಸಾಕೇತ್ ಮಿಂಜ್ (21.54ಸೆ) ಪ್ರಥಮ ಹಾಗೂ ಕೇರಳದ ಜೆ. ನಿವೇದಕೃಷ್ಣ (21.92ಸೆ) ತೃತೀಯ ಸ್ಥಾನ ಪಡೆದರು.

ಬಾಲಕಿಯರ ವಿಭಾಗದ 800 ಮೀ ಓಟದಲ್ಲಿ ಕರ್ನಾಟಕದ ನಾಗಿನಿ (2ನಿ,14.81ಸೆ) ಮತ್ತು ಶಿಲ್ಪಾ ರಾಕೇಶ್ (2ನಿ.14.86ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು. ತಮಿಳುನಾಡಿನ ಎಡ್ವಿನಾ ಜೇಸನ್ (2ನಿ,14.43ಸೆ) ಚಿನ್ನ ಗೆದ್ದರು.

ಮಹಿಳೆಯರ ಬಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್

ಫುಟ್‌ಬಾಲ್: ರೇಣುಕಾ ಎಫ್‌ಸಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಾ ಮತ್ತು ಎಸ್. ರೀನಾದೇವಿ ಅವರಿಬ್ಬರೂ ಸೇರಿ ಐದು ನಿಮಿಷಗಳ ಅಂತರದಲ್ಲಿ ಗಳಿಸಿದ ಮೂರು ಗೋಲುಗಳ ಬಲದಿಂದ ಶ್ರೀ ರೇಣುಕಾ ಫುಟ್‌ಬಾಲ್ ಕ್ಲಬ್ ತಂಡವು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ಬಿ ಡಿವಿಷನ್ ಮಹಿಳೆಯರ ಲೀಗ್ ಚಾಂಪಿಯನ್‌ಷಿಪ್ ಪ್ರಶಸ್ತಿ ಜಯಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಫೈನಲ್ ಪಂದ್ಯದಲ್ಲಿ ಶ್ರೀರೇಣುಕಾ ತಂಡವು 3–2ರಿಂದ ಪಾಸ್ ಫುಟ್‌ಬಾಲ್ ಕ್ಲಬ್ ವಿರುದ್ಧ ಜಯಿಸಿತು.

ಪಾಸ್ ತಂಡದ ದೀಪಾ ರಾಮ ಚಂದ್ರನ್ (20ನೇ ನಿಮಿಷ) ಅವರು ಪಂದ್ಯದಲ್ಲಿ ಗೋಲು ಖಾತೆ ತೆರೆದರು. ರೇಣುಕಾ ತಂಡದ ಸ್ನೇಹಾ 40ನೇ ನಿಮಿಷದಲ್ಲಿ ಗೋಲು ಗಳಿಸಿ ಸಮಬಲ ಸಾಧಿಸಿದರು. ಐದು ನಿಮಿಷ ಕಳೆಯುವಷ್ಟರಲ್ಲಿ ರೀನಾದೇವಿ (44ನೇ ನಿ) ಗೋಲು ಹೊಡೆದರು. 45ನೇ ನಿಮಿಷದಲ್ಲಿ ಸ್ನೇಹಾ ಕೂಡ ಇನ್ನೊಂದು ಗೋಲು ಗಳಿಸಿದರು. ಇದರಿಂದಾಗಿ 3–1ರ ಮುನ್ನಡೆ ಸಾಧ್ಯವಾಯಿತು. ಆದರೆ ಛಲಬಿಡದ ಪಾಸ್ ಎಫ್‌ಸಿಯ ಸೌಮ್ಯಾ ಕೆರ್ಕೆಟ್ಟಾ (48ನೇ ನಿ) ಗೋಲು ಗಳಿಸಿದರು.

ವಸುಂಧರಾ ಚವ್ಹಾಣ್ (ಶ್ರೀ ರೇಣುಕಾ ಎಫ್‌ಸಿ) ಅವರಿಗೆ ಉದಯೋನ್ಮುಖ ಆಟಗಾರ್ತಿ ಮತ್ತು ಪಾಸ್ ಎಫ್‌ಸಿಯ ಸಾಂಚಿ ರವಿಪಾಟಿ ಅವರಿಗೆ ಶ್ರೇಷ್ಠ ಆಟಗಾರ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರಿನಲ್ಲಿ ಬುಧವಾರ ನಡೆದ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಮಹಿಳೆಯರ ವಿಭಾಗದ ಬಿ ಡಿವಿಷನ್ ಲೀಗ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಶ್ರೀ ರೇಣುಕಾ ಫುಟ್‌ಬಾಲ್ ತಂಡದ ಆಟಗಾರ್ತಿಯರು ಮತ್ತು ಪದಾಧಿಕಾರಿಗಳು ಇದ್ದಾರೆ

ನಿಮ್ಮ ಪರ್ಫೆಕ್ಟ್ ಡ್ರೈವ್ ಬರೀ ಒಂದು ಆಫರ್ ನಷ್ಟು ದೂರದಲ್ಲಿದೆ.
ತ್ವರೆ ಮಾಡಿ! Hyundai ಕಾರುಗಳ ಮೇಲೆ ಅದ್ಭುತ ಲಾಭಗಳನ್ನು ಪಡೆಯಿರಿ.
ನಿಮ್ಮ ಮೆಚ್ಚಿನ Hyundai ಕಾರ್‌ಗಳಲ್ಲಿ ಈಗ ಹೊಸ ಫೀಚರ್ ಲೋಡ್ ಮಾಡಿದ ಟ್ರಿಮ್‌ಗಳು ಲಭ್ಯವಿವೆ.

*ಕೊಡುಗೆಗಳು 2025 ಮೇ 31ರ ವರೆಗೆ ಮಾತ್ರ.
Hy - CNG Duo Hyundai EXTER ಮತ್ತು Grand i10 NIOSನಲ್ಲಿ ಲಭ್ಯವಿದೆ. ಸ್ಥಳಾವಕಾಶ ಇದೆ. ಮೈಲೇಜ್ ಇದೆ.
##ಮಾನ್ಯತೆ ಹೊಂದಿದ ಪ್ರಮಾಣಪತ್ರವನ್ನು ನೀಡಿದರೆ ಹೆಚ್ಚುವರಿ ಸ್ಕ್ರಾಪೇಜ್ ಬೋನಸ್ ಸಿಗಲಿದೆ.
#CSD ಮತ್ತು KPKB ಗ್ರಾಹಕರಿಗೆ ಹೆಚ್ಚುವರಿ ಲಾಭಗಳು.

HYUNDAI

Hyundai Cl!cktoBuy Scan here
3 YEAR Unlimited** Kilometer Warranty
Up to 7 years extended warranty^
3 YEAR Road Side Assistance(RSA)***
UP TO 5 YEAR Shield of Trust Service Packages~
Hy - CNG Duo

For Information Contact: Toll Free:1800114645 **Bangalore:** Advaith Hyundai, Residency Road, Ph: 9606076451 Marathahalli, Outer Ring Road, Ph: 9606076452 Vasanthnagar, Ph: 9606076453 Bannerghatta Road, Ph: 9606076454 Koramangala, Ph: 9606076455 Avalahalli, Ph: 9606076456, Sarjapura Ph: 9606076458 Bilekahalli, Ph: 9606076457, Trident Hyundai, Sankey Road, Ph: 7353762526, K R Puram, Ph: 9844266873, Hosur Road, Ph: 9743786716, Indiranagar, Ph: 9743107927, Yelahanka, Ph: 7353750677, Yeshwanthpur, Ph: 9844701452, Blue Hyundai, Mysore Road, Ph: 9591100001, Rajajinagar, Ph: 9591200001, Magadi Road, Ph: 9513200033, New Bel Road, Ph: 9513000800, Basavanagudi, Ph: 9591211118, Lakshmi Hyundai, Hebbal Ph: 9900037900, Kalyan Nagar, Ph: 8494913303, HBR Layout, Ph: 8884441111, Whitefield, Ph: 8884497700, Devanahalli, Ph: 8884499037, Pavan Hyundai, Kanakpura Road, Ph: 7337882522, Electronic City, Ph: 7337882522, Dhruvdesh Hyundai, Ph: 9205770577 **Mangalore:** Kanchana Hyundai, Ph: 9900144113, Advaith Hyundai, Ph: 7760962815 **Udupi:** Kanchana Hyundai, Ph: 9972440758 **Mysore:** Advaith Hyundai, Belavadi, Ph: 9620257012 JLB Road, Ph: 9606938831, KPR Hyundai, Mysore Ph: 9606470291 **Hassan:** Advaith Hyundai, Ph: 9606938828 **Shimoga:** Rahul Hyundai, Ph: 6364465441 **Hubli:** Bellad Hyundai, Ph: 9900035084, Raam Hyundai, Ph: 8495072555, **Kanakpura:** Pavan Hyundai, Ph: 7892718572 **Belgaum:** Nagshanti Hyundai, Ph: 9844890456, 9844890459 **Bijapur:** Narayan Hyundai, Ph: 9742272157, 9742272153 **Davanagere:** K J Hyundai, Ph: 7022001201 **Gulbarga:** Shah Hyundai, Ph: 9108049250 **Tumkur:** Pavan Hyundai, Ph: 7337882522 **Bellari:** Anika Hyundai, Ph: 8884484020 **Ramanagara:** Advaith Hyundai, Ph: 9900095504 **Kolar:** Advaith Hyundai, Ph: 9620229885, **Chintamani**: Ph: 8147994737 **Mandya:** Advaith Hyundai, Ph: 9740060075 **Coorg:** Advaith Hyundai, Madikeri, Ph: 9538971151 Gonikoppal, Ph: 9945774088 Kushalnagar, Ph: 9538971149 **Tiptur :** Advaith Hyundai, Ph: 7619577050 **Chikodi:** Nagshanti Hyundai, Ph: 8951947001 **Gokak:** Nagshanti Hyundai, Ph: 8147978240 **Savadatti:** Nagshanti Hyundai, Ph: 8147978240 **Athani:** Nagshanti Hyundai, Ph: 7411307080 **Belthangady:** Advaith Hyundai, Ph: 7760962819 **Sullia:** Advaith Hyundai Ph: 7760962813 **Dharwad:** Bellad Hyundai, Ph: 6364333461, **Hunsur:** KPR Hyundai, Ph: 9538879235 **Channarayapatna:** KPR Hyundai, Ph: 9538879238 **Kollegala:** KPR Hyundai, Ph: 9606478215 **Sakleshpura:** KPR Hyundai, Ph: 9035708716 **Raichur:** Shah Hyundai, Ph: 9108049252 **Bidar:** Shah Hyundai, Ph: 7625093556 **Yadgir:** Shah Hyundai, Ph: 9108049262 **Sindhanur:** Shah Hyundai, Ph: 9071411136/9513897444 **Basavakalyan:** Shah Hyundai, Ph: 7353307776 **Bagalkot:** Narayan Hyundai, Ph: 9742253245 **Jamkhandi:** Narayan Hyundai, Ph: 9742272179 **Madikeri:** Advaith Hyundai, Ph: 9538971151 **Kushalnagar:** Advaith Hyundai, Ph: 9538971149 **Gonikoppa:** Advaith Hyundai, Ph: 9945774088 **Belthangady:** Advaith Hyundai, Ph: 77609 62819 **Sullia:** Advaith Hyundai, Ph: 7760962813 **Chikmagalur:** Rahul Hyundai, Ph: 7795800038 **Sagara:** Rahul Hyundai, Ph: 7625080180 **Thirthahalli:** Rahul Hyundai, Ph: 7625080183 **Shikaripura:** Rahul Hyundai, Ph: 9108843230 **Puttur:** Kanchana Hyundai, Ph: 9740873450 **Surathkal:** Kanchana Hyundai, Ph: 9482574530 **Karkala:** Kanchana Hyundai, Ph: 8762464853, **Kundapura:** Kanchana Hyundai, Ph: 9900145948 **Kumta:** Kanchana Hyundai, Ph: 9535855966 **Sirsi:** Kanchana Hyundai, Ph: 9731856300 **Karwara:** Kanchana Hyundai, Ph: 6364860518, **Hospet:** Anika Hyundai, Ph: 8884484018 **Ballair:** Anika Hyundai, Ph: 8884484020 **Koppal:** Anika Hyundai, Ph: 8884484031

my Hyundai app
Hyundai Promise Certified Pre-Owned Car
Scan to chat with us or give a missed call at 9555295868

*Terms & Conditions apply. For more details, visit your nearest Hyundai showroom. Benefits mentioned include cash, corporate, either exchange or scrappage benefits as applicable. Benefits mentioned may vary from city to city. ##Scrappage bonus will be available against a valid certificate of deposit (issued by government approved and operational scrappage center) and exchange of old car. In case the customer is giving certificate of deposit but not physically exchanging his old car and buying a new car - then only scrappage bonus of ₹5 000 will be paid. Benefits may vary with variants. **3-year warranty or upto 100 000 km whichever is earlier for Grand i10 NIOS, AURA, i20 & i20 N Line. 3-year unlimited km warranty is applicable for EXTER, VENUE, VENUE N Line, CRETA, CRETA N Line, CRETA Electric, ALCAZAR, TUCSON, VERNA and IONIQ 5. ^Upto 7 Years extended warranty is available for Grand i10 NIOS, i20, i20 N Line, AURA, VERNA, EXTER, VENUE, VENUE N Line, CRETA, CRETA N Line, CRETA Electric, ALCAZAR & TUCSON in all variants (Petrol/Diesel/CNG) and subject to payment. ***3 years Roadside Assistance (with taxi support & introduction of 10 year retail program). ~For detailed T&C of RSA, Shield of Trust & Super, kindly visit Hyundai India website. This advertisement and car shown here is for creative representation purposes only and the depictions are for illustrative purposes. Features and specifications shown may vary or may not be a part of standard fitment and are subject to change without prior notice. Hyundai Motor India Limited reserves the right to change specifications, colour, equipment and schemes at any time without prior notice. The black shade on glasses are due to lighting effect. Size and colour may appear to vary due to lighting and position effect. Extended Warranty and Shield of Trust & Super are on payable basis. For more details on warranty, please refer owners' manual, #CSD: Canteen Stores Department, KPKB: Kendriya Police Kalyan Bhandar. INNOCEAN-031/25 KAN